"ಸಂಡೂರು ಪರಿಸರದ ಬಯಲಾಟಗಳು
ಒಂದು ಅಧ್ಯಯನ"

(ಜಾನಪದ ಅಧ್ಯಯನ ವಿಭಾಗದಲ್ಲಿ ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್)
ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕಿ

ಮಂಗಳಾ ಬಿ. ಎನ್

ಮಾರ್ಗದರ್ಶಕರು

ಡಾ॥. ಮೊಗಳ್ಳಿ ಗಣೇಶ್

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೨೦೦೮

309

"ಸಂಡೂರು ಪರಿಸರದ ಬಯಲಾಟಗಳು- ಒಂದು ಅಧ್ಯಯನ"

(ಜಾನಪದ ಅಧ್ಯಯನ ವಿಭಾಗದಲ್ಲಿ ಮಾಸ್ಟರ್ ಆಪ್ ಫಿಲಾಸಫಿ (ಎಂ. ಫಿಲ್) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕಿ

ಮಂಗಳಾ ಬಿ. ಎನ್

ಮಾರ್ಗದರ್ಶಕರು

ಡಾ॥. ಮೊಗಳ್ಳಿ ಗಣೇಶ್

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೨೦೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಮಂಗಳಾ ಬಿ.ಎನ್. ಇವರು ನನ್ನ ಸಲಹೆ ಹಾಗೂ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ **'ಸಂಡೂರು ಪರಿಸರದ ಬಯಲಾಟ – ಒಂದು ಅಧ್ಯಯನ'** ಎಂಬ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

೨೦೦೭–೦೮ ನೇ ಶೈಕ್ಷಣಿಕ ಸಾಲಿನ ಎಂ.ಫಿಲ್ ಪದವಿಗಾಗಿ ಈ ಕಿರು ಪ್ರಬಂಧವನ್ನು ಭಾಗಶಃ ವಾಗಲಿ, ಪೂರ್ಣವಾಗಿ ಆಗಲಿ ಬೇರೆಯಾವುದೇ ಉದ್ದೇಶ ಅಥವಾ ಯಾವುದೇ ಪದವಿಗೋಸ್ಕರ ಈ ಹಿಂದೆ ಎಲ್ಲೂ ಸಾದರ ಪಡಿಸಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

(ಡಾ. ಮೋಗಳ್ಳಿಗಣೇಶ್)
ಮಾರ್ಗದರ್ಶಕರು
(ಹಿರಿಯ ಶ್ರೇಣಿ ಉಪನ್ಯಾಸಕರು)
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಪ್ರವಾಚಕರಾದ **ಡಾ. ಮೋಗಳ್ಳಿಗಣೇಶ್** ಅವರ ಮಾರ್ಗದರ್ಶನದಲ್ಲಿ **"ಸಂಡೂರು ಪರಿಸರದ ಬಯಲಾಟಗಳ- ಒಂದು ಅಧ್ಯಯನ"** ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿದುದರ ಫಲ ಈ ಕಿರು ಪ್ರಬಂಧ ೨೦೦೭-೦೮ನೇ ಶೈಕ್ಷಣಿಕಸಾಲಿನ ಕನ್ನಡ ವಿಶ್ವವಿದ್ಯಾಲಯದ ಎಂ. ಫಿಲ್ ಪದವಿಗಾಗಿ ಸಿದ್ಧಪಡಿಸಲಾಗಿದೆ. ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ. ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಂಗಳಾ ಬಿ.ಎನ್
ಸಂಶೋಧಕಿ
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :

ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

"ಸಂಡೂರು ಪರಿಸರದ ಬಯಲಾಟಗಳು- ಒಂದು ಅಧ್ಯಯನ" ಎಂಬ ನಿಬಂಧವನ್ನು ಸಿದ್ಧಪಡಿಸಲು ಮುಕ್ತ ಮನಸ್ಸಿನಿಂದ ಸೂಕ್ತ ಸಲಹೆ-ಸೂಚನೆಗಳೊಂದಿಗೆ ಮಾರ್ಗದರ್ಶನ ನೀಡಿದ ಮಾನ್ಯ ಡಾ.ಮೊಗಳ್ಳಿ ಗಣೇಶ್ ಅವರಿಗೆ ನನ್ನ ಅನಂತ ಹೃತ್ಪೂರ್ವಕ ಕೃತಜ್ಞತೆಗಳು.

ನನಗೆ ಸಂಶೋಧನೆ ಮಾಡಲು ಸೂಕ್ತ ವಾತಾವರಣವನ್ನು ಕಲ್ಪಿಸಿ ಕೊಟ್ಟಂತಹ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಮಾನ್ಯ ಡಾ.ಡಿ.ಪಾಂಡುರಂಗಬಾಬು ಅವರಿಗೆ ಮತ್ತು ಅಭ್ಯಾಸಕ್ಕೆ ಸಹಾಯಮಾಡಿದ ಗ್ರಂಥಪಾಲಕರಿಗೆ, ಸಿಬ್ಬಂದಿಯವರಿಗೆ ಅತ್ಯಂತ ಅಭಾರಿಯಾಗಿದ್ದೇನೆ.

ನಿಬಂಧದ ಅಧ್ಯಯನಕ್ಕೆ ಸಹಕರಿಸಿದಂತಹ ವಿಭಾಗದ ಮುಖ್ಯಸ್ಥರು ಹಾಗೂ ಪ್ರವಾಚಕರಾದಂತ ಮಾನ್ಯ ಡಾ.ಹೆಬ್ಬಾಲೆ ಕೆ.ನಾಗೇಶ್ ರವರಿಗೆ ಅತ್ಯಂತ ಪ್ರೀತಿಯ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ಉತ್ತಮ ಮೌಲ್ಯಯುತ, ವಿವಿಧ ಆಯಾಮಗಳಲ್ಲಿ ನಮ್ಮನ್ನು ತಿದ್ದಿ ತೀಡಿ ಸಂಶೋಧಕನಿಗೆ ಬೇಕಾದಂತಹ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಸಹಕರಿಸಿ ಭೋಧಿಸಿದ ಗುರುಗಳಾದ ಪ್ರೊ.ಮಂಜುನಾಥ ಬೇವಿಕಟ್ಟಿ ಅವರಿಗೆ, ಡಾ.ಮೊಗಳ್ಳಿ ಗಣೇಶ್ ಅವರಿಗೆ, ಡಾ.ಸಿ.ಟಿ.ಗುರುಪ್ರಸಾದ್ ಅವರಿಗೆ, ಡಾ.ಹರಿಶ್ಚಂದ್ರ ದಿಗ್ಸಂಗೀಕರ್ ಅವರಿಗೆ, ಪ್ರೊ.ಸ.ಚಿ.ರಮೇಶ್ ಅವರುಗಳಿಗೆ ಪ್ರೀತಿ ತುಂಬಿದ ನಮನಗಳು.

ನನ್ನ ಜೀವನದಲ್ಲಿ ಜ್ಞಾನದ ದೀವಿಗೆಯನ್ನು ಬೆಳಗಿದ ಪೂಜ್ಯ ಗುರುಗಳಾದ ಡಾ.ಮಲ್ಲಿಕಾಘಂಟಿ, ಡಾ.ವಿಕ್ರಮ್‌ವಿಸಾಜಿ, ಡಾ.ರಾಮಚಂದ್ರಪ್ಪ ಗಣಪೂರ ಇವರಿಗೆ.

ನನ್ನ ಅಧ್ಯಯನಕ್ಕೆ ಅತ್ಯಂತ ಪ್ರೀತಿಯಿಂದಲೇ ಕಳುಹಿಸಿ ಆಶಿರ್ವಧಿಸಿದ ತಂದೆ-ತಾಯಿಗಳಾದ ಶ್ರೀಮತಿ ಶ್ರೀ ದ್ರಾಕ್ಷಾಯಿಣಿ ನಾಗಪ್ಪ ಬೋಜ ರವರಿಗೆ ಕೃತಜ್ಞತೆಗಳು ಹಾಗೂ ನನ್ನ ತಾತ-ಅಜ್ಜಿಯಂದಿರಾದ ಶ್ರೀ ಮದ್ದಾನಪ್ಪ ಬೋಜ, ಶ್ರೀಮತಿ ಗಿರಿಜಮ್ಮ ಮದ್ದಾನಪ್ಪ ಬೋಜ ರವರಿಗೆ, ಚಿಕ್ಕಪ್ಪ ಚಿಕ್ಕಮಂದಿರಾದ ಶ್ರೀಮತಿ ಶ್ರೀ ಸುಮತಿ, ಜಯದೇವ ಬೋಜ, ಉಷಾ ಶಿವಕುಮಾರ ಬೋಜ, ಮತ್ತು ನನ್ನ ಪ್ರೀತಿಯಮಗಳಾದ ಐಶ್ವರ್ಯಾಳಿಗೂ ನನ್ನ ಕೃತಜ್ಞತೆಗಳು.

ಅಧ್ಯಯನದ ಸಮಯದಲ್ಲಿ ಮುಕ್ತ ಮನಸ್ಸಿನ ಭಾವನೆಗಳನ್ನು ಸುಖ-ಸಂತೋಷಗಳನ್ನು ನನ್ನೊಡನೆ ಹಂಚಿಕೊಂಡ ಸಹಪಾಠಿ-ಹಿರಿಯರಾದ ಡಿ.ದೂರಣ್ಣವರ.,

ಎ.ಕೆ.ಬಸವರಾಜ, ಹೊನ್ನೂರುಸಾಬ್, ಸಹಮಿತ್ರರಾದ, ರಂಗನಾಥ ಕೆ. ಪರಮೇಶ್ವರ್ ಜಾನೆ, ನಿಂಗಪ್ಪಮಾದಣ್ಣವರ್, ನಿಸಾರ್ ಅಹಮದ್, ಅಂಜಲಿದೇವಿ, ವೆಂಕಟೇಶ್ ಸಿ, ಅನಿತ ಕೆ.ಇವರುಗಳಿಗೆ.

ವಿಭಾಗದಲ್ಲಿ ಪ್ರೀತಿಯಿಂದಲೇ ನನ್ನ ಸಂಶೋಧನೆಗೆ ಸಹಕರಿಸಿದ ವಿಭಾಗದ ಸಿಬ್ಬಂದಿಯವರಾದ ಅಬ್ದುಲ್ ನಭಿ ಅವರಿಗೂ,

ನಿಬಂಧದ ಅಕ್ಷರ ಜೋಡಣೆ ಮಾಡಿದ **ಮಾನಸ ಗ್ರಾಫಿಕ್ಸ್‌ಗೆ** ತನು-ಮನದ ಕೃತಜ್ಞತೆಗಳು.

ನನ್ನ ಸಹೋದ್ಯೋಗಿಗಳು ಹಾಗೂ ಸನ್ಮಿತ್ರರಾದ ಡಿ.ಜಿ.ಭದ್ರಪ್ಪ, ರೇಣುಕಾ ದೇವಿ, ಶಿವರಂಜಿನಿ, ಷಾಹಿರಾಬಾನು, ಎಸ್.ಕೊಟ್ರೇಶ್ ಮೊದಲಾದವರಿಗೆ ಈ ಮೋಲಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಜಾನಪದ ಎಂದರೆ ಕೇವಲ ಕಥೆ. ಗಾದೆ, ಒಗಟು ಗೀತೆಗಳು ಮೂಲಕವೇ ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ಇದು ಇವುಗಳಿಗಷ್ಟೆ ಸೀಮಿತವಾಗಿರದೆ ವೈಜ್ಞಾನಿಕ, ಸಾಂಸ್ಕೃತಿಕ ಹಾಗೆಯೇ ಅನ್ಯಜ್ಞಾನ ಶಿಸ್ತುಗಳ ಮುಖೇನ ಅಧ್ಯಯನ ಮಾಡುತ್ತಿದ್ದಾರೆ. ನಾಡಿನಾದ್ಯಂತ ಲಭ್ಯವಿರುವ ಜನಾಂಗ ಅವುಗಳ ಆಚರಣೆ. ಸಂಸ್ಕೃತಿ. ಭಾಷೆ ಉಡುಗೆ–ತೊಡುಗೆ. ಊಟೋಪಾಚರ ಹೀಗೆ ಹಲವು ನಿಟ್ಟಿನಲ್ಲಿ ವಿಚಾರಗಳನ್ನು ಆಳವಾಗಿ ಸಂಶೋಧನೆ ಮಾಡುತ್ತಾ ಹೊಸ ಜ್ಞಾನವನ್ನು ಅವುಗಳಿಂದ ಪಡೆಯುತ್ತಿದ್ದಾರೆ. ಸತ್ಯವನ್ನು ಅರಸಿಡುವ ಪ್ರಾಮಾಣಿಕ ಸಂಶೋಧನೆಗಳು ಇನ್ನು ನಡೆಯಬೇಕಿದೆ ಇವು ದೇಶೀಯತೆಯ ವೈಶಿಷ್ಟ್ಯ ಮತ್ತು ಅತ್ಯಮೂಲ್ಯ ಚಿಂತನೆಗಳತ್ತ ನಮ್ಮನ್ನು ಸೆಳೆದೊಯ್ಯುತ್ತವೆ. ಇಂತಹ ಚಿಂತನೆಗಳಲ್ಲಿ ಧರ್ಮ, ದೇವರು. ಆರಾಧನೆಗಳೊಂದಿಗೆ ಜಾನಪದ ಕಲೆಗಳು ಪ್ರಸ್ತುತ ಸಾಲಿನಲ್ಲಿ ಚಿಂತನೆಗೊಳಗಾದ ವಿಷಯಗಳಾಗಿವೆ. ಅವುಗಳ ಆಳವಾದ ಅಧ್ಯಯನ ಮತ್ತು ಅವುಗಳನ್ನು ಉಳಿಸುವುದು ಇಂದಿನ ಜಾಗತೀಕರಣ, ಕೈಗಾರಿಕರಣ ಸಂಧರ್ಭಗಳಲ್ಲಿ ಅತ್ಯವಷ್ಯವಾಗಿದೆ.

ಸಂಸ್ಕೃತಿ. ಆಚಾರ–ವಿಚಾರ ಸಾಮಾಜಿಕ ಜೀವನದ ಹಿನ್ನಲೆಯಲ್ಲಿ ಕಲೆಯು ಬೀರುವ ಪ್ರಭಾವವನ್ನು ಅದರ ಸ್ಥಾನಮಾನವನ್ನು ನಾವು ಚರ್ಚಿಸ ಬೇಕಾಗಿದೆ. ಮನುಷ್ಯನ ಸಾಂಸ್ಕೃತಿಕ ಸಾಮಾಜಿಕ ಚರಿತ್ರೆಗೂ, ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಈ ವಿಷಯವನ್ನಾಧರಿಸಿ ಜಾನಪದ ಕಲೆಗಳನ್ನು ಅಧ್ಯಯನ ಮಾಡಬೇಕಾಗಿದೆ.

ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಜಾನಪದ ಕಲೆಗಳು ವೈವಿಧ್ಯಮಯವಾಗಿವೆ. ಆರಾಧನೆ ಮತ್ತು ಆಚರಣೆ ಕ್ರಿಯೆಗಳ ಹಿನ್ನಲೆಯಲ್ಲಿ ಹುಟ್ಟಿಕೊಂಡು ವಿಕಸನಗೊಂಡ ಕಲೆಗಳು ಕೆಲವಡೆ ವೃತ್ತಿಯಾಗಿ ಹವ್ಯಾಸಿಯಾಗಿ ಬೆಳೆದುಬಂದಿವೆ. ಈ ಕಲೆಗಳು ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗುತ್ತವೆ. ಇವು ಭಿನ್ನ ಪ್ರದೇಶಗಳಲ್ಲಿ ವಿಭಿನ್ನರೀತಿಯಿಂದ ಕೂಡಿದ್ದು ಸಂಶೋಧನೆ ಮಾಡಿದಂತೆಲ್ಲ ಕುತೂಹಲ ಹುಟ್ಟಿಸುತ್ತವೆ. ಇಂತಹ ಕಲೆಗಳಲ್ಲಿ ಬಯಲಾಟವೆಂಬ ರಂಗಪ್ರಕಾರ ತನ್ನದೇ ಆದ ವೈಶಿಷ್ಟತೆ ಪಡೆದಿದೆ. ಈ ವಿಷಯ ಕುರಿತು ಪ್ರಾಂತೀಯವಾಗಿ ಆಳವಾದ ಶೋಧನೆಗಳು ನಡೆದರೂ ಇನ್ನೂ ಕೆಲವೆಡೆ ಆಗಬೇಕಾದ ಕೆಲಸ ಬಹಳಷ್ಟಿದೆ. ಅವುಗಳಲ್ಲಿ ಸಂಡೂರಿನ ಜಾನಪದ ರಂಗಭೂಮಿಯೂ ಒಂದು. ಇಲ್ಲಿ ಪ್ರದರ್ಶನಕಲೆಯಾದ ಬಯಲಾಟವನ್ನು ನನ್ನ ಅಧ್ಯಯನ ವಿಷಯವನ್ನಾಗಿ ಸ್ವೀಕರಿಸಿ ಸಂಶೋಧನೆಗೆ ಒಳಪಡಿಸಲಾಗಿದೆ.

ಸಂಡೂರಿನ ಬಗ್ಗೆ ಹಿಂದೆ ಮಹತ್ಮಾಗಾಂಧಿಯವರು **"ಸೆಪ್ಟಂಬರ್ ತಿಂಗಳಲ್ಲಿ ಸಂಡೂರನ್ನು ನೋಡಿ."** ಎಂದು ಹೇಳಿದ್ದಾರೆ. ಅವರ ಮಾತಿನಂತೆ ಸಂಡೂರು ಬಳ್ಳಾರಿಯ ಮಲೆನಾಡೆಂದರೆ ತಪ್ಪಾಗಲಾರದು. ಅಂದು ಸಂಡೂರು ಮರುಭೂಮಿಯ ಓಯಸಿಸ್‌ನಂತೆ ಸುತ್ತಮುತ್ತ ಹಬ್ಬಿರುವ ಬೆಟ್ಟಕಾಡುಗಳಿಂದ ರಮಣೀಯವಾಗಿ ಕಂಗೊಳಿಸುತ್ತಿತ್ತು. ಹಲವು ಪುಣ್ಯಕ್ಷೇತ್ರಗಳಿಂದ ಪ್ರಕೃತಿದತ್ತವಾದ ರಮ್ಯತಾಣಗಳಿಂದ ಜಿಲ್ಲೆಗೆ ಹೆಸರಾದ ಪ್ರದೇಶವಾಗಿತ್ತು.

ಪ್ರಕೃತಿಯ ರಮಣೀಯತೆಯೊಂದಿಗೆ ತನ್ನದೇ ಆದ ಕಲೆ, ಸಾಂಸ್ಕೃತಿಕ ಆಚಾರ ವಿಚಾರಗಳನ್ನು ಹೊಂದಿದೆ. ಇಲ್ಲಿ ಕೃಷಿಕರು, ಭೂಮಾಲಿಕರು, ಸರ್ಕಾರಿ ನೌಕರಸ್ಥರು, ಗಣಿಗಳಲ್ಲಿ ಹಲವು ರೀತಿಯ ನೌಕರಿಮಾಡುವರು ಜಿಂದಾಲ್ ಕಾರ್ಮಿಕರು ಹೀಗೆ ಎಲ್ಲಾ ವರ್ಗ ಜಾತಿಯವರನ್ನು ಕಾಣಬಹುದು.

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ಗ್ರಾಮದಲ್ಲಿನ ಬಯಲಾಟ ಕಲಾವಿದರನ್ನು ಲಕ್ಷ್ಮೀಪುರ, ಕೃಷ್ಣಾನಗರ, ಧರ್ಮಾಪುರ ಗ್ರಾಮ ಸೇರಿದಂತೆ ಅಧ್ಯಯನ ಮಾಡುತ್ತಿದ್ದೇನೆ. ಸಂಡೂರಿನಲ್ಲಿರುವ ಬಯಲಾಟ ಕಲಾವಿದರು ಅವರ ಬಯಲಾಟ ಪ್ರಯೋಗ ರಂಗಸಜ್ಜಿಕೆ, ವೇಷಭೂಷಣ, ಅಭಿನಯ, ಕುಣಿತ, ಸಂಗೀತ, ವೈಯಕ್ತಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಗಳ ಬಗ್ಗೆ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಸಾಮಾನ್ಯವಾಗಿ ಜಾತಿಬೇಧ ವಿಲ್ಲದೆ. ಎಲ್ಲಾ ವರ್ಗದವರು ಸೇರಿ ತಮ್ಮ ಬಿಡುವಿನ ವೇಳೆಯಲ್ಲಿ ಈ ಕುರಿತು ಸಮಾಲೋಚಿಸಿ ಅದಕ್ಕೆ ಓಣಿಯ ಪ್ರಮುಖರ ಒಪ್ಪಿಗೆ ಪಡೆದು ತಕ್ಕವ್ಯವಸ್ಥೆ ಮಾಡಿಕೊಂಡು ಹಾರ್ಮೋನಿಯಂ ಮಾಸ್ಟರ್ ಅವರನ್ನು ಕರೆಸಿ ಕಥೆಯನ್ನು ಗೊತ್ತು ಪಡಿಸಿ ಹಣದ ವ್ಯವಸ್ಥೆ ಮಾಡಿಕೊಂಡು ಬಯಲಾಟ ಆಡುವ ದಿವಸ ೩-೪ ತಿಂಗಳ ಮೊದಲೇ ರಂಗ ತಾಲೀಮು ಮಾಡುತ್ತಾರೆ.

ಬಯಲಾಟ ಕಲೆಯು ವಿಶಿಷ್ಟ ಸಂಪ್ರಾದಾಯ ಮಾತ್ರವಲ್ಲದೆ ಅನಕ್ಷರಸ್ಥರದ್ದೂ ಜನಪದರದ್ದೂ ಆಗಿದ್ದು ದೇವಾತಾರಾಧನೆ, ನಂಬಿಕೆ, ಆಚಾರಣೆಗಳ ಹಿನ್ನಲೆಯಲ್ಲಿಯೇ ಜೀವಂತಿಕೆ ಪಡೆದದ್ದಾಗಿದೆ. ಇದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಪಡೆದಿರಲೂಬಹುದು.

ಭಾರತದಲ್ಲಿ ನಾಟ್ಯವನ್ನು ಕುರಿತು ಮೊಟ್ಟಮೊದಲಿಗೆ ಶಾಸ್ತ್ರಗ್ರಂಥವೊಂದನ್ನು ರಚಿಸಿದ ಭರತಮುನಿ ಲೋಕವೃತ್ತದ ಅನುಕರಣವೇ ನಾಟಕ ಎನ್ನುತ್ತಾನೆ. ಅನುಕರಣೆ ಮತ್ತು ರಂಜನೆ ನೀಡುವುದು ರಂಗಭೂಮಿಯ ಮೂಲಾಂಶ ಹಾಗೂ ಇವು ಅಷ್ಟೇ ಪ್ರಾಚೀನ. ಇದರ ಉಗಮವನ್ನು ನಾವು ಆದಿಮಾನವನಿಂದಲೇ ಕಾಣಬಹುದು ಅನುಕರಣೆ, ಸಂಜ್ಞೆಯ ಮೂಲಕವೇ ಮಾತು. ಭಾಷೆಗಳು ಬೆಳೆದು ಬಂದದ್ದು. ಸಂಘಜೀವಿಯಾದ ಮಾನವ ಅಲೆಮಾರಿ ಜೀವನ ತೂರೆದು ಒಂದಡೆ ನೆಲೆನಿಂತ ಮೇಲೆ ವ್ಯವಸಾಯ ಮಾಡುವುದನ್ನು ಕಲಿತ ನಂತರ ಈ ಕಲೆಗಳು ಮಾನವನಲ್ಲಿ ಹುಟ್ಟಿಕೂಂಡವು ನಂತರ ಅವನಲ್ಲಿ ಸಂಸ್ಕೃತಿ ಆಚರಣೆ ದೈವಾರಾಧನೆಯೊಂದಿಗೆ. ಈ ಕಲೆಗಳು ತನ್ನದೇ ಆದರೀತಿಯಲ್ಲಿ ವಿಕಾಸಗೂಂಡವು. ಅನುಕರಣೆಯೂಂದಿಗೆ ವೇಷಭೂಷಣ. ನಟನೆ. ಸಂಗೀತ ಹೀಗೆ ಒಟ್ಟಾಗಿ ಮನೋರಂಜನೆ ಎಂಬುದೂ ಬೆಳೆಯಿತು.

ಜನಪದ ರಂಗಭೂಮಿಯ ಮುಖ್ಯ ವೈಲಕ್ಷಣಗಳೆಂದರೆ ಮೇಳಗಾರಿಕೆ ಕುಣಿತ ಮತ್ತು ಹಾಡು. ನೃತ್ಯ ಮತ್ತು ಗೀತೆಗಳನ್ನು ಪ್ರಧಾನವಾಗಿ ಉಳ್ಳ ರಂಗಪರಂಪರೆ ದ್ರಾವಿಡರ ಬಳುವಳಿ ಎಂದು ತ.ಸು. ಶಾಮರಾಯರು ಕನ್ನಡನಾಡಲ್ಲಿ ಹೇಳಿದ್ದಾರೆ. ಕುಣಿತ ಮತ್ತು ಹಾಡುಗಾರಿಕೆಯನ್ನು ಪ್ರಧಾನವಾಗಿ ಹೂಂದಿದ್ದ ಈ ರಂಗಪ್ರಕಾರಗಳೇ ಮುಂದೆ ನೃತ್ಯ. ಸಂಗೀತಗಳನ್ನೊಳಗೂಂಡು ಬಯಲಾಟದ ಬೆಳೆವಣಿಗೆಗೆ ಕಾರಣವಾದವು.

ಕರ್ನಾಟಕ ಜನಪದ ಕಲೆಗಳ ಆಗರ, ಅಪೂರ್ವವಾದ ಹಲವು ಕಲೆಗಳು ಇಲ್ಲಿವೆ. ನಮ್ಮ ಸಂಸ್ಕೃತಿ. ಸಂಪ್ರದಾಯಗಳ ಬಗೆಗೆ ವಿಶೇಷ ಬೆಳಕನ್ನು ಚೆಲ್ಲುತ್ತವೆ. ಕಲಾದೃಷ್ಟಿಯಿಂದ ಅವುಗಳನ್ನು ವೀಕ್ಷಿಸಿದಾಗ ಅವು ನಮ್ಮ ಭವ್ಯ ಪರಂಪರೆಯ ಅರಿವನ್ನು ಉಂಟುಮಾಡುತ್ತವೆ, ಈ ಕಲೆಗಳು ಪ್ರತಿಯೊಂದು ನಾಡಿನ ಸತ್ವಪೂರ್ಣ ಸ್ವತ್ತಾಗಿದೆ. ಅಂತಹ ಅಭೂತಪೂರ್ವ ಕಲೆಗಳಲ್ಲಿ ಬಯಲಾಟವು ತನ್ನದೇ ಆದ ವೈಶಿಷ್ಠತೆಯನ್ನು ಪಡೆದಿದೆ. ಈ ಬಯಲಾಟವು ಕರ್ನಾಟಕದ ಜಾನಪದ ರಂಗಭೂಮಿಯನ್ನು ಪ್ರತಿನಿಧಿಸುವ ಪ್ರಮುಖ ಪ್ರದರ್ಶನ ಕಲೆಯಾಗಿದೆ. ಕರಾವಳಿ ಪ್ರದೇಶದಲ್ಲಿ ಯಕ್ಷಗಾನವಾಗಿದ್ದರೆ ಮತ್ತೆರೆಡು ಕವಲಾಗಿ ಬಯಲುಸಿಮೇಯ ದೂಡ್ಡಾಟ ಮತ್ತು ಸಣ್ಣಾಟ ಗಳಾಗಿ ರೂಪುಗೊಂಡಿವೆ. ಗೀತ, ನೃತ್ಯ, ಸಂಗೀತ, ಕುಣಿತ ವಿಶೇಷ ವಸ್ತ್ರಾಲಂಕಾರ ಮೊದಲಾದ ವಿಶೇಷತೆಯಿಂದ ಹಲವು ಕಲೆಗಳಿಗೆ ಸರಿಸಾಟಿಯಾಗಿ ಬಯಲಾಟವು ದೇವಾತಾರಾಧನೆಯ ಹಿನ್ನಲೆಯಲ್ಲಿ ಹುಟ್ಟಿ ಬೆಳೆದು ಇಂದಿಗೂ ರೈತಾಪಿ

ಜನಗಳಲ್ಲಿ ಅದರಲ್ಲೂ ಕೆಳವರ್ಗದ ಜನಗಳ ಮಧ್ಯೆ ಜೀವಂತಿಕೆ ಪಡೆದಿದೆ. ಇವರೆಲ್ಲ ಬಹುತೇಕಾವಾಗಿ ಅಸಕ್ಷರಸ್ಥರಿದ್ದು ತಮ್ಮ ದುಡಿಮೆಯ ಬಿಡುವಿನ ವೇಳೆಯಲ್ಲಿ ಹವ್ಯಾಸಾಕ್ಕಾಗಿ ಮನೋರಂಜನೆಗಾಗಿ ಬಯಲಾಟಗಳನ್ನು ಆಡುತ್ತಿದ್ದ ಪದ್ಧತಿಯು ಇಂದಿಗೂ ಜಾರಿಯಲ್ಲಿದೆ. ಬಯಲಾಟವು. ಕೇವಲ ಮನೋರಂಜನೆಯ ಒಂದು ಸಾಧನ ಮಾತ್ರವಾಗಿರದೆ ಅವರಲ್ಲಿನ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಕಲೆ ಅಭಿನಯಗಳನ್ನು ಕಾಪಾಡಿಕೊಂಡು ಬರುವಲ್ಲಿ ನೆರವಾಗಿವೆ. ಇದು ಒಂದು ಕಲೆ ಅಥವಾ ಮನೋರಂಜನೆಯಾಗಿರದೆ ಅವರಿಗೆ ಜೀವನದ ಪಾಠಶಾಲೆಯಾಗಿದೆ. ಇಲ್ಲಿ ಬಳಸುವ ರಾಮಾಯಣ, ಮಹಭಾರತ ಪುರಾಣಗಳ ವಸ್ತುಗಳು ಅವುಗಳಲ್ಲಿನ ಮಹಾನ್ ವ್ಯಕ್ತಿಗಳೊಂದಿಗೆ ಅವರ ಜೀವನ ರೀತಿ, ಧರ್ಮ, ನೀತಿ, ಸತ್ಯ ಇವುಗಳ ಪ್ರಭಾವ ಹಾಗೂ ದಾರಿತಪ್ಪಿ ನಡೆಯುವ ವ್ಯಕ್ತಿಗಳಿಗೆ ಆಗುವ ಶಿಕ್ಷೆ ಮತ್ತಿತರ ತಪ್ಪುಗಳನ್ನು ಅನಕ್ಷರಸ್ಥರಿಗೆ ತಿಳಿಸಲು ಸಮರ್ಥವಾಗಿವೆ.

ಪ್ರಕೃತಿಯ ರಮಣೀಯತೆಯೊಂದಿಗೆ ತನ್ನದೇ ಆದ ಕಲೆ, ಸಂಸ್ಕೃತಿ ಅಚಾರ ವಿಚಾರಕ್ಕೂ ಸಂಡೂರು ಹೆಸರಾಗಿದೆ. ಇಲ್ಲಿ ಕೃಷಿಕರು, ಭೂಮಾಲೀಕರು ಸರ್ಕಾರಿ ನೌಕರಸ್ಥರು. ಗಣಿಗಳಲ್ಲಿ ಹಲವು ರೀತಿಯ ಕೆಲಸಗಳನ್ನು ಮಾಡುವ ಎಲ್ಲಾ ವರ್ಗದ ಜನಾಂಗದವರನ್ನು ಕಾಣಬಹದು.

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ಗ್ರಾಮದಲ್ಲಿ ಬಯಲಾಟ ಕಲಾವಿದರನ್ನು ಲಕ್ಷ್ಮೀಪುರ, ಕೃಷ್ಣಾನಗರ ಧರ್ಮಾಪುರ ಗ್ರಾಮಗಳು ಸೇರಿದಂತೆ ಅಧ್ಯಯನ ಮಾಡುತ್ತಿದ್ದೇನೆ. ಸಂಡೂರಿನಲ್ಲಿರುವ ಬಯಲಾಟ ಕಲಾವಿದರು ಯಾರು ವೃತ್ತಿಯನ್ನಾಗಿ ಸ್ವೀಕರಿಸಿದವರಲ್ಲ. ಇವರು ಹವ್ಯಾಸಕ್ಕಾಗಿ ತಮ್ಮ ಓಣಿಗಳಲ್ಲಿ ಆಸಕ್ತರು ಸೇರಿ ಸಮಾಲೋಚನೆ ನಡೆಸಿ ಆ ಓಣಿಯ ಪ್ರಮುಖರ ಒಪ್ಪಿಗೆ ಪಡೆದುಕೊಳ್ಳುತ್ತಿದ್ದರು. ಪ್ರತಿಯೊಬ್ಬರು ಅಂದರೆ ಪಾತ್ರಧಾರಿಗಳು ತಮ್ಮ ಪಾತ್ರಗಳ ವೇಷಭೂಷಣ ಬಣ್ಣ ಹೀಗೆ ಬಯಲಾಟ ಮುಗಿಯುವವರೆಗೆ ತಮ್ಮ ಹಣವನ್ನು ಸ್ವತಃ ತಾವೇ ಹಾಕುತ್ತಿದ್ದರು. ತಮ್ಮ ಗುಂಪಿಗೆ ಮ್ಯಾನೇಜರ್‌ನನ್ನು ನೇಮಿಸಿ ಆತನ ಕೈಗೆ ಹಣಕೊಡುತ್ತಿದ್ದರು. ಹಿಂದೆ ೩೦ ರಿಂದ ೫೦ ರೂ. ಗಳವರೆಗೆ ಇದ್ದು ಇಂದು ೧೫೦೦/- ರಿಂದ ೨೦೦೦/- ವರೆಗೆ ಆಗುವ ಖರ್ಚನ್ನು ಸ್ವತಃ ಪಾತ್ರಧಾರಿಗಳೇ ಕೊಡುತ್ತಿದ್ದರು. ನಂತರ ಹಾರ್ಮೋನಿಯಂ ಮೇಸ್ತ್ರನ್ನು ಕರೆಸಿ ಅವರಿಂದ ಬಯಲಾಟಕ್ಕೆ ಕಥೆ ಆಯ್ಕೆ ಮಾಡಿಕೊಂಡು ಪ್ರತಿದಿನರಾತ್ರಿ ಎಂಟು ಅಥವಾ ಒಂಭತ್ತು ಗಂಟೆಯ ನಂತರ ಎರಡು ಮೂರು ತಾಸು ತಾಲೀಮು ಮಾಡುತ್ತಿದ್ದರು ಸತತ ಮೂರು ನಾಲ್ಕು ತಿಂಗಳು ಈ ತಾಲೀಮು ನಡೆಯುತ್ತಿತ್ತು. ನಂತರ ಸ್ತ್ರೀ ಪಾತ್ರಗಳನ್ನು ಕೆಲವೊಮ್ಮೆ ಪುರಷರು ಹಾಗೂ ಕೆಲವೊಮ್ಮೆ ಸುತ್ತ ಮುತ್ತಲಿನ ಹಳ್ಳಿಗಳಿಂದ ವೃತ್ತಿಪರ ಸ್ತ್ರೀಯರನ್ನು ಕರೆತರುತ್ತಿದ್ದರು. ಇದು ಇಂದಿಗೂ ವಾಡಿಕೆಯಲ್ಲಿದೆ.

ಅಧ್ಯಾಯ - ಎರಡು

ಸಂಡೂರಿನ ಪರಿಚಯ

ಅಧ್ಯಾಯ – ಎರಡು

ಸಂಡೂರಿನ ಪರಿಚಯ

ಸಂಡೂರು ಹಲವು ಕಲೆ ಸಂಸ್ಕೃತಿಗಳ ಬೀಡಾಗಿದ್ದು ಇಲ್ಲಿನ ಪರಿಸರ, ಜನಪದವೃಂದ ಇದಕ್ಕೆ ಕಾರಣವಾಗಿದೆ. ಇಂಥ ಹಲವು ಕಲೆಗಳಲ್ಲಿ ಒಂದಾದ ಬಯಲಾಟವನ್ನು ಸಂಡೂರಿನ ಗ್ರಾಮಕ್ಕೆ ಸೀಮಿತಗೊಳಿಸಿ ಅಲ್ಲಿನ ಕಲಾವಿದರು, ವೈಶಿಷ್ಟ್ಯತೆ ವರ್ತಮಾನ ಭವಿಷ್ಯತ್‌ಗಳೊಂದಿಗೆ ವಿಶೇಷವಾಗಿ ಅಧ್ಯಯನ ನಡೆಸಲಾಗಿದೆ.

ಸಂಡೂರು ಪರಿಸರವು ಬಳ್ಳಾರಿ ಜಿಲ್ಲೆಯ ಕಾಶ್ಮೀರವೆನಿಸಿಕೊಂಡಿದೆ. ಅಂತೆಯೆ ಬೆಟ್ಟಗುಡ್ಡಗಳನ್ನು ಒಳಗೊಂಡ ಸುಂದರ ಪ್ರಕೃತಿಯಿಂದ ಹಲವು ಹಳ್ಳ ಕೊಳ್ಳಗಳಿಂದ ಕೂಡಿದ ಪ್ರದೇಶವಾಗಿದೆ. ಸಂಡೂರಿನ ಸುತ್ತಲೂ ರಾಮನಮಲ್ಲೈ, ದೋಣೀಮಲ್ಲೈ, ಶೇಷಗಿರಿ, ತಿಮ್ಮಪ್ಪನ ಬೆಟ್ಟ, ದೇವಗಿರಿಬೆಟ್ಟ ಮೊದಲಾದ ಎತ್ತರವಾದ ಬೆಟ್ಟಗಳಿಂದ ಆವೃತಗೊಂಡಿದೆ. ಇದು ಒಂದು ಕಣಿವೆ ಪ್ರದೇಶವಾಗಿದ್ದು ಅಪಾರವಾದ ಖನಿಜ ಸಂಪತ್ತನ್ನು ಹೊಂದಿ ಬಳ್ಳಾರಿ ಜಿಲ್ಲೆಯಲ್ಲಿ ಹಿತಕರವಾತಾವರಣ ಹೊಂದಿದೆ.

ಸಂಡೂರು ಸ್ಥಳನಾಮ ವಿವರಣೆ

ಸಂಡೂರು ಎಂಬ ಹೆಸರು ಬಂದಿರುವ ಬಗ್ಗೆ ಹಲವಾರು ಅಭಿಪ್ರಾಯಗಳು ಇಲ್ಲಿ ಕಾಣಬಹುದು. "ಸ್ಕಂದಪುರ" ಎಂಬ ಪುರಾಣ ಉಲ್ಲೇಖದ ಹೆಸರೇ ಮುಂದೆ ಸಂಡೂರಾಗಿದೆ. ಮೂಲತಃ ಕಣಿವೆ ಪ್ರದೇಶವಾಗಿರುವ ಸಂಡೂರು ಬೆಟ್ಟಗುಡ್ಡಗಳ ಸಂದಿಗಳಲ್ಲಿನ ಪ್ರದೇಶವಾದ ಕಾರಣ ಸಂದೂರು ಮುಂದೆ ಸಂಡೂರು ಆಗಿದೆ. ಕ್ರಿ.ಶ. ೧೨೦೬ ರ ಶಾಸನದಲ್ಲಿ ಈ ಊರನ್ನು ಸ್ಪಷ್ಟವಾಗಿ ಸಂಡೂರು ಎಂದು ಕರೆಯಲಾಗಿದೆ. ಇದರ ನಿಷ್ಪತ್ತಿಯನ್ನು ಕುರಿತು

ವಿವೇಚಿಸಿದಾಗ ಕುಮಾರಸ್ವಾಮಿ ದೇವಾಲಯ ಪಕ್ಕದಲ್ಲಿರುವ ಪಾರ್ವತಿ ದೇವಾಲಯ ಕುಮಾರಸ್ವಾಮಿ ದೇವಾಲಯಕ್ಕಿಂತ ಪ್ರಾಚೀನವಾಗಿದೆ. ಈ ದೇವಾಲಯದ ಹೆಬ್ಬಾಗಿಲಿನ ಗೋಡೆಯ ಮೇಲೆ ಶಾಸನದಲ್ಲಿನ ಅಕ್ಷರಗಳು ಕದಂಬರ ಕಾಲದ್ದಾಗಿದೆ. ಇಷ್ಟು ಪ್ರಾಚೀನತೆಯನ್ನು ಹೊಂದಿದ ಈ ದೇವತೆಯ ಮೂಲ ಹೆಸರು **"ಚಂಡಿ"** ಇರಬೇಕು. ಈ ದೇವಾಲಯದ ಗೋಪುರದ ಮೇಲೆ ಚಂಡಿಯ ಸವೆದ ಮೂರ್ತಿಯೂ ಇದೆ. ಆದಕಾರಣ ಚಂಡಿ ದೇವತೆಯಿಂದಾಗಿ ಚಂಡಿ+ಊರು=ಚಂಡಿಯೂರು = ಚಂಡೂರು>ಸಂಡೂರು ಆಗಿರಬಹುದು ಇಲ್ಲಿ **'ಚ'** ಕಾರ **'ಸ'** ಕಾರವಾಗಿ ಸಂಡೂರು ಎಂದಾಗಿದೆ.

ಸಂಡೂರಿನ ಭೌಗೋಳಿಕ ಪರಿಸರ

ಸಂಡೂರು ಪರಿಸರವು ಬಳ್ಳಾರಿಯ ಕಾಶ್ಮೀರವೆಂದು ಕರೆಸಿಕೊಂಡ ಸುಂದರ ಪರಿಸರವಾಗಿದ್ದು, ಬಳ್ಳಾರಿ ಜಿಲ್ಲೆಯ ಮಧ್ಯಭಾಗದಲ್ಲಿರುವ ಈ ತಾಲ್ಲೂಕು ತನ್ನ ಸುತ್ತಲೂ ರಾಮನಮಲೈ, ದೋಣಿಮಲೈ, ಶೇಷಗಿರಿ ಬೆಟ್ಟ ತಿಮ್ಮಪ್ಪನ ಬೆಟ್ಟ, ದೇವಗಿರಿ ಬೆಟ್ಟ, ಜಂಬುನಾಥಗಳಲ್ಲಿ ಎತ್ತರವಾದ ಬೆಟ್ಟಗಳನ್ನು ಹೊಂದಿದೆ. ಈ ಬೆಟ್ಟಗಳಲ್ಲಿನ ಕಣಿವೆ ಪ್ರದೇಶ ಅಂದರೆ ಸಂದುಗಳಲ್ಲಿರುವ ಕಾರಣ ಸಂಡೂರು ಎಂದು ಹೆಸರು ಪಡೆದಿದೆ. ಅಪಾರವಾದ ಖನಿಜ ಸಂಪತ್ತು ಸುಂದರ ಪ್ರಕೃತಿ ಸಣ್ಣಸಣ್ಣ ಹಳ್ಳಕೊಳ್ಳ, ಝುರಿಗಳಿಂದ, ಪುಣ್ಯಕ್ಷೇತ್ರಗಳಿಂದ ಹಿತಕರವಾದ ವಾತಾವರಣ ಹೊಂದಿದೆ.

ಸಂಡೂರು ಬಳ್ಳಾರಿಯಿಂದ ೪೮ ಕಿ.ಮೀ. ದೂರದಲ್ಲಿದೆ. ಹಾಗೂ ಬೆಂಗಳೂರು ನಗರದಿಂದ ವಾಯುವ್ಯದಿಕ್ಕಿನಲ್ಲಿ ಸುಮಾರು ೨೫೪ ಕಿ.ಮೀ. ದೂರದಲ್ಲಿದೆ. ಸಂಡೂರು ಗ್ರಾಮದಲ್ಲಿ ಪುರಸಭೆಯಿದೆ. ೮೨ ಗ್ರಾಮಗಳನ್ನು ಹೊಂದಿದೆ. ಭೌಗೋಳಿಕವಾಗಿ ೬೪.೨೫೬ ಹೆಕ್ಟೇರ್‌ಗಳಷ್ಟು ವಿಸ್ತೀರ್ಣವಾಗಿದ್ದು ಇದರಲ್ಲಿ ೧೯೪೨೬ ಹೆ.ಗಳಷ್ಟು ಅರಣ್ಯ ಪ್ರದೇಶ ಹೊಂದಿದೆ. ಈ ತಾಲ್ಲೂಕಿನ ವ್ಯವಸಾಯ ಯೋಗ್ಯ ಪ್ರದೇಶ ೨೯೦೦೦ ಹೆ. ಗಳಷ್ಟು, ಒಟ್ಟು ವಿಸ್ತೀರ್ಣ ೬೦೭.೪೪ ಚ.ಕಿ.ಮಿ. ಇದೆ. ಸಮುದ್ರದ ಪಾತಾಳದಿಂದ ೨೫೦೦ ಅಡಿ ಎತ್ತರದಲ್ಲಿದೆ.

ಪ್ರಾಕೃತಿಕವಾಗಿ ಇಲ್ಲಿಯ ನೆಲ ಕೆಂಪು ಬಣ್ಣದ ಮರಳು ಮಿಶ್ರಿತ ಫಲವತ್ತಾದ ಭೂಪ್ರದೇಶವಾಗಿದೆ. ಜೋಳ, ಸಜ್ಜೆ, ನವಣೆ, ರಾಗಿ, ಮುಸುಕಿನ ಜೋಳ ಪ್ರಮುಖ ಆಹಾರ ಬೆಳೆಗಳಾಗಿವೆ. ಇವುಗಳಲ್ಲದೆ ಹೆಸರು, ಉದ್ದು, ತೊಗರಿ ಗುರೊಳ್ಳು, ಎಳ್ಳು ಕಾಳು ಬೆಳೆಯುತ್ತಾರೆ. ಇಲ್ಲಿನ ಕೆಂಪು ಎರೆ ಮಣ್ಣಿನಲ್ಲಿ ಈರುಳ್ಳಿ, ಶೇಂಗಾ, ಸೂರ್ಯಕಾಂತಿ, ವಾಣಿಜ್ಯ ಬೆಳೆಗಳನ್ನು ತರಕಾರಿಗಳನ್ನು ಮಾವಿನ ಕಾಯಿ ಹಣ್ಣು, ಬಾಳೆಹಣ್ಣುಗಳನ್ನು ಬೆಳೆಯುತ್ತಾರೆ.

ಸಂಡೂರು ಬಳ್ಳಾರಿ ಜಿಲ್ಲೆಯಲ್ಲಿ ಅತಿಹೆಚ್ಚು ಮಳೆಬೀಳುವ ಪ್ರದೇಶವಾಗಿದೆ. ಇದು ಮಳೆಯಿಂದಾಗಿ ವಿವಿಧೆಡೆಯಲ್ಲಿ ಸಣ್ಣ-ಪುಟ್ಟ ಕೆರೆಗಳನ್ನು ಹೊಂದಿದೆ. ತಾಲ್ಲೂಕಿನ ಪ್ರಮುಖ ಜಲಮೂಲ ನಾರಿಹಳ್ಳವಾಗಿದೆ. ಇದಕ್ಕೆ ತಾರಾನಗರದ ಹತ್ತಿರ ಆಣೆಕಟ್ಟನ್ನು ಕಟ್ಟಲಾಗಿದೆ. ಈ ಆಣೆಕಟ್ಟು ಸುಮಾರು ೨೯೫ ಮೀಟರ್ ಉದ್ದ, ೨೦.೯೨ ಮೀ. ಅಗಲವಿದೆ. ಈ ಡ್ಯಾಂ ೨೫೫.೦೮ ಹೆಕ್ಟೇರ್ ಜಲವೃತ್ತ ಪ್ರದೇಶವನ್ನು ಹೊಂದಿದೆ. ಸುಮಾರು ೮೦೦ ಹೆಕ್ಟೇರುಗಳಷ್ಟು ಕಾಲುವೆಗಳ ಮೂಲಕ ನೀರನ್ನು ಕೃಷಿಕರಿಗೆ ಉಪಯೋಗಿಸುತ್ತಾರಲ್ಲದೇ ಸುತ್ತ ಮುತ್ತ ಹಳ್ಳಿಗಳಿಗೆ ಕುಡಿಯುವ ನೀರನ್ನು ಈ ಡ್ಯಾಂನಿಂದಲೇ ಸರಬರಾಜು ಮಾಡಲಾಗಿದೆ. ಈ ನೀರಿನ ಶೇಖರಣೆಯಿಂದ ಸುತ್ತ ಮುತ್ತ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಾಗಿದೆ.

ಸಂಡೂರಿನಲ್ಲಿ ಬೆಟ್ಟಗುಡ್ಡಗಳು ಅರಣ್ಯಬಿಟ್ಟರೆ ಉಳಿದೆಡೆ ಗಿಡಮರಗಳು ಕಡಿಮೆ. ಇದನ್ನು ಹುಲ್ಲುಗಾವಲು, ಎಲೆಉದುರುವ ಪ್ರದೇಶವೆಂದು ಗುರುತಿಸಲಾಗಿದೆ. ಇಲ್ಲಿನ ಗುಡ್ಡಗಳು ಸುಮಾರು ೨೦೦೦ಕ್ಕೂ ಹೆಚ್ಚು ಹೂ ಬಿಡುವ ಸಸ್ಯಗಳು ಹಾಗೂ ೨೦,೦೦೦ ಹೆಚ್ಚು ಔಷಧಿಯ ಗಿಡಗಳು ಕಂಡುಬರುತ್ತವೆ. ಇಲ್ಲಿನ ಯಶವಂತನಗರದ ಹತ್ತಿರ ಔಷಧಿವನ ಮಾಡಿದ್ದು ಔಷಧಿಸಸ್ಯಗಳ ಸಂರಕ್ಷಣಾಕೇಂದ್ರ ತೆರೆಯಲಾಗಿದೆ. ಸಂಡೂರಿನ ಕಾಡುಗಳಲ್ಲಿ ಹೆಚ್ಚಾಗಿ ದಿಂಡಿನ ಮರ, ಹುಣಸೆ, ಶ್ರೀಗಂಧ, ಬೇವು, ಈಚಲು, ಬಿಳಿಜಾಲಿ, ಬೀಟೆ, ತೇಗ, ಬಾಗೆ, ಮೋಸಬಾಳೆ, ತೇರದ, ಕತ್ತಾಳೆ ಮುಂತಾದ ಮರಗಳು ಹೆಚ್ಚಾಗಿ ಕಂಡುಬರುತ್ತವೆ. ಬೆಟ್ಟಗುಡ್ಡಗಳಿಂದ ಕೂಡಿದ ದೊಡ್ಡ ಕಾಡುಗಳಿಂದ ತಗ್ಗು ದಿನ್ನೆ ಗಳಲ್ಲಿನ ನೀರಿನ ಸೆಲೆಯಿಂದ. ಯಥೇಚ್ಚವಾಗಿರುವ ಗೆಡ್ಡೆ ಗೆಣಸು, ನೇರಳೆ, ನೆಲ್ಲಿ, ಅತ್ತಿ, ಅಂಜೂರು, ಜೇನು ದೊರೆಯುವ ಕಾರಣ ಚಿರತೆ, ಕರಡಿ, ನರಿ, ಮೊಲ, ಕಾಡು ಹಂದಿ, ಮಂಗ, ಕತ್ತಿ ಮೊದಲಾದ ಜೀವಸಂಕುಲಗಳನ್ನು ಹೊಂದಿದೆ. ಅಂತೆಯೇ ಗೂಬೆ, ಗುಬ್ಬಿ, ಬಾವಲಿ, ಬೆಳವ, ರತ್ನಪಕ್ಷಿ, ಪಾರಿವಾಳ ನವಿಲು ನೂರಾರು ಜಾತಿಯ ಪಕ್ಷಿಗಳನ್ನು ಕಾಣಬಹುದು. ನವಿಲುಗಳು ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಸಂಡೂರಿನ ಬೆಟ್ಟಗಳು ಮೇಲೆ ಕಬ್ಬಿಣದ ಮೇಲ್ಪದರಾಗಿದ್ದು, ಇಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳ ಸಮೃದ್ಧ ಗಣಿಗಳಿಗೆ ಅವಕಾಶಕಲ್ಪಿಸಿದೆ. ಇಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಜೇಡಿಮಣ್ಣು ಹರಡಿದ್ದು ಗ್ರೆನಾಯಿಟ್, ಸಿಸ್ಟ್, ಸ್ಯಾಂಡಸ್ಟೋನ್, ಜಾಸ್ಪರ್ ಮೊದಲಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ ತಾಮ್ರ, ಬಂಗಾರ ಅದಿರಿನಿಂದ ಕೂಡಿದ ಶಿಲೆಗಳಿವೆ. ಸಂಡೂರು ಸುತ್ತ ಮುತ್ತ ನಂದಿಹಳ್ಳಿಯಿಂದ ಹೊಸಪೇಟೆಯವರೆಗೆ ಎತ್ತರದ ಪರ್ವತದಲ್ಲಿ ಕಲ್ಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಅದಿರು ಹೇಮಟೈಟ್ ರೂಪದಲ್ಲಿದೆ ಇದಲ್ಲದೆ ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳು ಸಿಗುತ್ತವೆ. ಈ

ಅದಿರಿನ ವಿಶೇಷಗುಣ ಎಂದರೆ ನಿಗದಿತ ಅಂಶಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಂಜಕ, ಗಂಧಕ, ಹೊಂದಿದೆ. ಆದ ಕಾರಣ ಜಗತ್ತಿನ ಮ್ಯಾಂಗನೀಸ್ ಅದಿರಿನ ಮಾರುಕಟ್ಟೆಯಲ್ಲಿ ಸಂಡೂರಿನ ಮ್ಯಾಂಗನೀಸ್‌ಗೆ ವಿಶೇಷ ಬೇಡಿಕೆ ಇದೆ.

ಸಂಡೂರಿನ ಅದಿದೇವತೆ ಕುಮಾರಸ್ವಾಮಿ

ಸಂಡೂರಿನ ಗಿರಿವನ ಶ್ರೇಣಿ ಲೋಹಾದ್ರಿಯು ಬಳ್ಳಾರಿಯ ಬಯಲುಸೀಮೆ ನಡುವೆ ಮಲೆನಾಡಿನ ದ್ವೀಪದಂತೆ ಇಲ್ಲಿ ಸಂಡೂರಿನ ಅದಿ ದೇವತೆಯಾದ ಶ್ರೀ ಕುಮಾರಸ್ವಾಮಿ ನೆಲೆಸಿ ನಾನಾರೀತಿಯಲ್ಲಿ ಭಕ್ತರಿಂದ ಪೂಜೆಗೊಳ್ಳುತ್ತಾ ಅವರ ಸಂಕಷ್ಟಗಳನ್ನು ನಿವಾರಿಸುತ್ತಾ ಬಂದಿದ್ದಾನೆ. ಕುಮಾರಸ್ವಾಮಿಯು ಪ್ರಾಚೀನ ಕಾಲದಿಂದಲೂ ಭಾರತದ ಪುರಾಣಗಳಲ್ಲಿ ಉಲ್ಲೇಖವಾದ ದೇವತೆಯಾಗಿದ್ದಾನೆ. ಅಂತೆಯೇ ಶೀವಕೋಟಾಚಾರ್ಯನ ವಡ್ಡಾರಾಧನೆಯಲ್ಲಿ ಕಾರ್ತಿಕಸ್ವಾಮಿ ಕಾರ್ತಿಕವನ ಇದೇ ಇರಬಹುದೆಂಬ ನಂಬಿಕೆಯೂ ಇದೆ. ಶಿವ ಶಕ್ತಿಯರ ಉಪಾಸನೆ ಅಥವಾ ಶೈವಧರ್ಮವು ಸಿಂಧೂಸಂಸ್ಕೃತಿಯಷ್ಟು ಪ್ರಾಚೀನವಾದದ್ದು. ಇವರ ಮಗನಾದ ಷಣ್ಮುಖನೂ ಪ್ರಮುಖ ಸ್ಥಾನ ಪಡೆದಿದ್ದಾನೆ.

ದಕ್ಷಿಣ ಭಾರತದ ಲೋಹಾಚಲವು ಬಹಳ ಪ್ರಾಚಿನ ಯುಗದಲ್ಲಿ ಕಬ್ಬಿಣ ಪ್ರಾರಂಭವಾದ ಮುಖ್ಯ ಐತಿಹಾಸಿಕ ನೆಲೆಯಾಗಿತ್ತು. ಇಲ್ಲಿನ ಕುಶಲಕರ್ಮಿಗಳು ಗುಡ್ಡಗಾಡುಗಳಲ್ಲಿ ನೆಲೆಸಿ ಶ್ರಮ ಜೀವಿಗಳಾದ ಇವರು ಕಬ್ಬಿಣ ಕರಗಿಸಿ ಆಯುಧಗಳನ್ನು ಉತ್ಪಾದಿಸುತ್ತಿದ್ದು ದೇಶದಲ್ಲಿ ಹೆಸರುವಾಸಿಯಾಗಿದ್ದರು.

ರಾಮಾಯಣ ಕಾಲಕ್ಕೆ ಕಾರ್ತಿಕೇಯ ಪೂಜ್ಯದೈವನಾಗಿದ್ದ. ಸಂಡೂರಿನ ಪರಿಸರ ಅಥವಾ ಕಾರ್ತಿಕವನವು ಆಯುಧ ಉತ್ಪಾದನೆಗೆ ಜಗತ್ಪ್ರಸಿದ್ಧವಾಗಿತ್ತು. ಕಿಷ್ಕಿಂದೆಯಲ್ಲಿ ರಾಮ ಸುಗ್ರೀವನೊಡನೆ ಪರಸ್ಪರ ಒಪ್ಪಂದ ಮಾಡಿಕೊಂಡು ವಾಲಿಯನ್ನು ಸಂಹರಿಸಲು ಸಿದ್ದನಾದಾಗ ಸುಗ್ರೀವ ರಾಮನನ್ನು ಕುರಿತು ವಾಲಿ ಮಹಾಶೂರ ಆತನಲ್ಲಿ ಆಯುಧಗಳು ಇರುವವೇ ಎಂದಾಗ ಶ್ರೀರಾಮನು ನನ್ನ ಆಯುಧಗಳು ಶ್ರೀಕಾರ್ತಿಕೆಯ ವನದಲ್ಲಿ ತಯಾರಾದವು ಎಂದು ಹೇಳುತ್ತಾನೆ. ವಾಲಿಯ ಸಂಹಾರನಂತರ ಸೀತೆಯನ್ನು ಹುಡುಕುತ್ತಾ ಬಂದ ರಾಮಲಕ್ಷ್ಮಣರು ಕುಮಾರಸ್ವಾಮಿಯನ್ನು ಪೂಜಿಸುತ್ತಾರೆ. ಇದರ ಸಂಕೇತವಾಗಿ ಕುಮಾರಸ್ವಾಮಿಯ ಪ್ರತಿಮೆಯ ಮುಂದೆ ಕೈಮುಗಿದು ಕೊಂಡು ನಿಂತ ರಾಮಲಕ್ಷ್ಮಣದರ ಚಿಕ್ಕ ಮೂರ್ತಿಗಳಿವೆ.

ರಾಮಾಯಣದಂತೆ ಮಹಾಭಾರತದ ಕಥೆಯೊಂದು ಇಲ್ಲಿ ದೊರಕುತ್ತದೆ. ವನವಾಸ ಮಾಡುತ್ತಾ ಬಂದ ಪಾಂಡವರು ಕುಮಾರಸ್ವಾಮಿಯನ್ನು ಪೂಜಿಸಿ ಇಲ್ಲಿ ಐದು ಲಿಂಗಗಳನ್ನು ಸ್ಥಾಪಿಸಿದರೆಂಬ ಐತಿಹ್ಯವಿದೆ. ಹೀಗೆಯೇ ಮುಂದೆ ಭೀಮತೀರ್ಥ ಎಂಬ ಪ್ರದೇಶದೊರಕುತ್ತಿದೆ. ದ್ರೌಪತಿ ಕುಡಿಯಲು ನೀರು ಕೇಳಿದಾಗ ಗದೆಯಿಂದ ಕಲ್ಲೊಂದಕ್ಕೆ ಹೊಡೆದ ಅಲ್ಲಿ ನೀರು ಬಂದಿತು. ಆದ್ದರಿಂದ ಆ ಪ್ರದೇಶ ಭೀಮತೀರ್ಥವೆಂದು ಇಂದಿಗೂ ಪ್ರಸಿದ್ದಿಯಾಗಿದೆ.

ಕ್ರಿ.ಪೂ. ೨೦ರಿಂದ ಕ್ರಿ.ಶ. ೨ನೇ ಶತಮಾನದವರೆಗೆ ಆಳಿದ ದಖ್ಖನ್ ಪ್ರದೇಶದ ಕನ್ನಡರಾಜರಾದ ಶಾತವಾಹನರು ಸಂಡೂರು ಗುಡ್ಡದ ಮೇಲೆ ಸ್ವಾಮಿಯನ್ನು ಸ್ಥಾಪಿಸಿರಬಹುದು. ಅವರ ಶಾಸನಗಳು ಬಳ್ಳಾರಿಯಲ್ಲಿ ಸಿಕ್ಕಿವೆ. ಬನವಾಸಿಯ ಕದಂಬರ ಸ್ಥಾಪಕ 'ಮಯೂರ'ವರ್ಮ ಅವನೂ ಕುಮಾರಸ್ವಾಮಿಯ ಆರಾಧಕನೇ. ಬಾದಾಮಿ ಚಾಲುಕ್ಯರು ಕ್ರಿ.ಶ. ೬ನೇ ಶತಮಾನದಿಂದ ೮ನೇ ಶತಮಾನದ ವರೆಗೆ ಆಳಿದ್ದು ಅವರು ಕುಮಾರಸ್ವಾಮಿ ಪಕ್ಕದ ಪಾರ್ವತಿ ದೇವಸ್ಥಾನ ಕಟ್ಟಿಸಿದರು.

ಸಂಡೂರಿನ ಇತಿಹಾಸ ಮತ್ತು ರಾಜಕೀಯ

ಪ್ರಾಕೃತಿಕ ಕಾಲದಿಂದ ಇಲ್ಲಿಯವರೆಗೆ ಈ ಪ್ರದೇಶ ಹಲವಾರು ರಾಜಕೀಯ ಸ್ಥಿತ್ಯಂತರಗಳನ್ನು ಕಂಡಿದೆ. ಸಂಡೂರಿನ ಪ್ರದೇಶ ಸಿಂಧರು ಆಳುತ್ತಿದ್ದ ಸಿಂಧವಾಡಿ ೧೦೦೦ ವಿಭಾಗಕ್ಕೆ ಒಳಪಟ್ಟಿತ್ತು. ಸಿಂಧವಾಡಿ ಉಪವಿಭಾಗದ ಬಿಲ್ಲಕುಂದೆ ೨೦೦ರ ಉಪವಿಭಾಗದ ದೊರವಡಿ ೨೦ರಲ್ಲಿಯ ಒಂದು ಚಿಕ್ಕಗ್ರಾಮ ಸಂಡೂರು. ದೊರವಡಿ ೭೦ ವಿಭಾಗದ ಮುಖ್ಯ ಪಟ್ಟಣ ಇಂದಿನ 'ದರೋಜಿ' ಗ್ರಾಮ ನಂತರ ಜರಿಮಲೆ ಪಾಳೆಯಗಾರರಿಗೆ ಸೇರಿದ ಬಂದು ಪಟ್ಟಣವಾಗಿದ್ದು ನಂತರ ಘೋರ್ಪಡೆ ವಂಶದವರು ಇದನ್ನು ವಶಪಡಿಸಿಕೊಂಡರು. ನಂತರ ಸಂಡೂರು ಸಂಸ್ಥಾನದ ರಾಜಧಾನಿ ಆಯಿತು. ಇದಕ್ಕೂ ಮೊದಲು ಚಕ್ರವರ್ತಿಗಳಾದ ನಂದರು, ಮೌರ್ಯರು, ಗುಪ್ತರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಆಳಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಸಂಡೂರಿನ ಸಮೀಪವಿರುವ ಹೊಸಮಲೈದುರ್ಗ (ರಾಮಮಲೈ, ರಾಮನದುರ್ಗ) ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನಿಗೆ ರಾಜಧಾನಿಯಾಗಿತ್ತು. ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನ ಇತಿಹಾಸವೇ ಇದೆ. ಇದು ಜನಪದಮಹಾಕಾವ್ಯ ವಾಗಿದ್ದು ಇದನ್ನು ಈ ತಾಲ್ಲೂಕಿನ ದರೋಜಿ ಈರಮ್ಮ ಸುಂದರವಾಗಿ ಹಾಡುತ್ತಾರೆ. ಕುಮಾರರಾಮ ಮುಂದೆ ದೆಹಲಿಯ ಸುಲ್ತಾನರೊಂದಿಗೆ ಹೋರಾಡಿ ಮರಣಿಸಿದ ನಂತರ ಕ್ರಿ.ಶ. ೧೨೨೬ರಲ್ಲಿ ಈ ಪ್ರದೇಶ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡನಂತರ ಅದರಲ್ಲಿ ಲೀನವಾಯಿತು. ಇದರ ಪತನದ ನಂತರ ಅನೇಕ ಪಾಳೆಗಾರರಲ್ಲಿ ಹಂಚಿಹೋದ ಬಳ್ಳಾರಿ ಜಿಲ್ಲೆಯ ಪ್ರದೇಶದಲ್ಲಿ ಸಂಡೂರು ಜರಿಮಲೆ ಪಾಳೆಗಾರರ ಅಧೀನದಲ್ಲಿತ್ತು. ನಂತರ ಶಿವಾಜಿಯ ಸೇನಾನಿ ಸಂತಾಜಿ ಘೋರ್ಪಡೆ ವಂಶಸ್ಥನಾದ ಸಿದ್ದೋಜಿ ಘೋರ್ಪಡೆ ಕ್ರಿ.ಶ. ೧೭೨೮ ರಲ್ಲಿ ಸಂಡೂರನ್ನು ಜರಿಮಲೆ ಪಾಳೇಗಾರರಿಂದ ವಶಪಡಿಸಿಕೊಂಡುನು. ಕ್ರಿ.ಶ. ೧೭೭೫ ರಿಂದ ೨೬ ರಲ್ಲಿ ಸಂಡೂರು ಹೈದರಾಲಿಯ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಟಿಪ್ಪುಸುಲ್ತಾನ್ ಆಳ್ವಿಕೆ ಸಂದರ್ಭದಲ್ಲಿ ಕ್ರಿಷ್ಣಾನಗರದಲ್ಲಿ ಟಿಪುಸುಲ್ತಾನ್ ಕೋಟೆ ಕಟ್ಟಿಸಿದನು.

೧೭೯೨ ರಲ್ಲಿ ಟಿಪ್ಪುಸುಲ್ತಾನ್ ಮತ್ತು ಬ್ರೀಟೀಷ್ ಈಸ್ಟ್ ಇಂಡಿಯಾ ಕಂಪನಿಯೂ ನಡೆದ ಒಪ್ಪಂದದಂತೆ ಸಂಡೂರಿನ ಅಧಿಕಾರವನ್ನು ಪುನಃ ಘೋರ್ಪಡೆ ವಂಶಸ್ಥರಿಗೆ ವಹಿಸಲಾಯಿತು. ೧೯೨೮ರಲ್ಲಿ ಪಟ್ಟಕ್ಕೆ ಬಂದ **ಯಶವಂತರಾವ್ ಹಿಂದೂರಾವ್ ಘೋರ್ಪಡೆ** ಸಂಡೂರು ಸಂಸ್ಥಾನದ ಕೊನೆಯ ಅರಸರು. ನಂತರ ಭಾರತವು ಸ್ವಾಂತಂತ್ರ್ಯ ಪಡೆದುಕೊಂಡಾಗ ಈ ಸಂಸ್ಥಾನವೂ ಪ್ರಜಾಪ್ರಭುತ್ವದಲ್ಲಿ ವಿಲೀನವಾಯಿತು. ನಂತರ ಹಲವಾರು ಜನರು ಎಂ.ಎಲ್.ಎ ಗಳಾಗಿ ಸೇವೆಸಲ್ಲಿಸಿದ್ದಾರೆ.

ಎಂ.ಎಲ್.ಎ.ಗಳಲ್ಲಿ ಪ್ರಮುಖರಾದವರು ಮಾನ್ಯ ಶ್ರೀ **ಸಂತೋಷ್ ಲಾಡ್** ಅವರು. ಇವರು ಬಡವರಿಗೆ ವಸ್ತ್ರದಾನ, ಖಾಲಿ ನಿವೇಷನ, ಸಿಮೆಂಟ್, ತಗಡು, ಇತ್ಯಾದಿಗಳನ್ನು ನೀಡಿದ್ದಾರೆ. ಸಂಡೂರಿನ ಹಲವು ಗ್ರಾಮಗಳಲ್ಲಿ ಸಾಮೂಹಿಕ ವಿವಾಹ ಮಾಡಿಸಿದ್ದಾರೆ. ಸಂಡೂರಿನ ವಿದ್ಯಾರ್ಥಿಗಳಿಗೆ ಉಚಿತ ಸಹಾಯ ಮಾಡುತ್ತಿದ್ದಾರೆ. ಪದವೀಧರರಿಗೆ ಶಾಸಕರ ಅನುದಾನದ ಅಡಿಯಲ್ಲಿ ಸಂಡೂರಿನ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರನ್ನಾಗಿ ನೇಮಿಸಿ ತಮ್ಮ ಸ್ವಂತ ಖರ್ಚಿನಲ್ಲಿ ಅವರಿಗೆ ವೇತನ ನೀಡುತ್ತಿದ್ದಾರೆ. ಸಂಡೂರಿನಲ್ಲಿ ಸರ್ಕಾರಿ ಶಾಲೆ ಹಾಗೂ ಕಾಲೇಜುಗಳ ಕಟ್ಟಡಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಹಲವಾರು ನಿರುದ್ಯೋಗಿಗಳಿಗೆ ತಮ್ಮ ಗಣಿಗಳಲ್ಲಿ, ಕಛೇರಿಗಳಲ್ಲಿ ಉದ್ಯೋಗ ನೀಡಿದ್ದಾರೆ. ಹೀಗೆ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ.

ಇವರ ನಂತರ ಪ್ರಸ್ತುತ ಶಾಸಕರಾದ **ತುಕಾರಾಮ್** ಅವರು ಇದೇ ಹಾದಿಯಲ್ಲಿ ಮುಂದುವರೆದಿದ್ದು ಶಿಕ್ಷಣ, ಆರೋಗ್ಯ, ಸಾಮಾಜಿಕ ಸ್ಥರಗಳ ಉನ್ನತಿಗಾಗಿ ಶ್ರಮಪಡುತ್ತಿದ್ದಾರೆ

ಸಂಡೂರಿನ ಗಣಿಗಾರಿಕೆ

ಪ್ರಕೃತಿಯ ಸೊಬಗಿನೊಂದಿಗೆ ಖನಿಜ ನಿಕ್ಷೇಪವೂ ಸಂಡೂರಿನ ವರ. ದಟ್ಟವಾದ ಅರಣ್ಯ ಸಂಪತ್ತಿನಲ್ಲಿ ಅನೇಕ ಬೆಲಬಾಳುವ ಮರಗಿಡ, ಔಷಧಿ ಸಸ್ಯಗಳು ಕಾಡು ಪ್ರಾಣಿಗಳು ಹೇರಳವಾಗಿವೆ. ಇವುಗಳನ್ನು ಸಂಡೂರಿನ ಅಧಿದೇವತೆ ಕುಮಾರಸ್ವಾಮಿ ಕಾಪಾಡುತ್ತಿದ್ದಾನೆ. ಇದರಿಂದ ಸಂಡೂರಿನ ಜನತೆ ಪ್ರಾಣಿಸಂಕುಲ ಸುಖ ಸಂಪತ್ತಿನಿಂದ ಇದ್ದಾರೆ. ಆದರೆ ಆಧುನಿಕ ಯುಗದಲ್ಲಿ ಈ ಪರಿಸರ ಕಂಡಾಗ ಬೇರೆಯೇ ಕಾಣುತ್ತದೆ. ಸಂಡೂರಿನ ರಾಜ ಮನೆತನ ಹಾಗೂ ಪ್ರಸ್ತುತ ಶಾಸಕರು ಆಳ್ವಿಕೆ ಅಡಿಯಲ್ಲಿ ಅವರ ಅಧೀನದಲ್ಲಿರುವ ಖನಿಜ ನಿಕ್ಷೇಪಗಳು ೨೦೦೦ ಹೆಕ್ಟೇರ್ ಪ್ರದೇಶ. ಇಲ್ಲಿ ಅನೇಕ ಶ್ರೀಮಂತರ ಗಣಿ ಮಾಲೀಕರು ಗೇಣಿ ರೂಪದಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ.

ಸಂಡೂರಿನ ಬಹುತೇಕ ಜನರು ವ್ಯವಸಾಯ ಮಾಡುವವರಾಗಿದ್ದಾರೆ. ಕೆಲವು ಭೂಮಿಗಳು ನೀರಾವರಿ ಹಾಗೂ ಹಲವು ಭೂಮಿಗಳು ಮಳೆ ಆಧರಿಸಿವೆ. ಮಳೆ ಕಡಿಮೆ

ಯಾದ ಕಾರಣ ಮಳೆ ಆಧಾರಿತ ಭೂಮಿಗಳನ್ನು ಇಂದಿನ ದಿನ ಗಣಿಗಾರಿಕೆ ಮಾಡಿಸಿ ಸಂಡೂರಿನ ಸುಮಾರು ೬೦% ಜನರು ಸುಖ ಜೀವನ ನಡೆಸುತ್ತಿದ್ದಾರೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಆಧುನಿಕ ಸೌಲಭ್ಯ ಹೊಂದಿರುವ ಸಂಡೂರು ಉತ್ತಮ ಕಟ್ಟಡಗಳಿಂದ, ವಿದ್ಯುತ್ ವ್ಯವಸ್ಥೆಗಳಿಂದ ವಾಹನಗಳ ಸೌಲಭ್ಯಗಳಿಂದ, ಮೊಬೈಲ್‌ಗಳು ತಮ್ಮದೇ ಸ್ಥಾನ ಪಡೆದಿವೆ. ಹೊರರಾಜ್ಯಗಳಿಂದ ಬಂದವರಿಗೆ ಗಣಿಗಾರಿಕೆ ಕಲ್ಪವೃಕ್ಷವಾಗಿದೆ. ಆದರೆ ಪರಿಸರದ ಕಳಕಳಿ ಯಾರಿಗೂ ಇಲ್ಲ. ಎಲ್ಲರಿಗೂ ಸಂಡೂರು ಆದಾಯದ ಮೂಲವಾಗಿದೆ.

ಸಂಡೂರು ತಾಲ್ಲೂಕಿನ ಕಬ್ಬಿಣದ ಅದಿರಿಗೆ ವಿದೇಶದಲ್ಲಿ ಭಾರೀ ಬೇಡಿಕೆ ಇರುವುದರಿಂದ ಇದರ ಪ್ರಮಾಣ ಗುಣಮಟ್ಟದ್ದಾಗಿರುವುದರಿಂದ ವಿದೇಶಿ ಕೈಗಾರಿಕೋದ್ಯಮದವರು ದಿನೇದಿನೇ ಸಂಡೂರಿನತ್ತ ಪ್ರಯಾಣ ಬೆಳೆಸುತ್ತಿದ್ದಾರೆ. ಇದರಿಂದ ಇಲ್ಲಿನ ಉದ್ಯಮಿಗಳೊಂದಿಗೆ ಸಂಪರ್ಕ ಉತ್ತಮವಾಗಿದೆ. ಇಲ್ಲಿನ ಗಣಿಗಾರಿಕೆಯ ವಸ್ತುಗಳು ವಿದೇಶದಲ್ಲಿ ಭಾರೀ ಬೇಡಿಕೆ ಇರುವುದರಿಂದ ಇದನ್ನು ಸಾಗಿಸಲು ರಸ್ತೆಗಳ ಮೂಲಕ ಲಾರಿಗಳನ್ನು, ರೈಲುಗಳನ್ನು ಉಪಯೋಗಿಸಿ ನಂತರ ವಿದೇಶಕ್ಕೆ ಹಡಗಿನ ಮೂಲಕ ಅದಿರನ್ನು ಸಾಗಿಸಲಾಗುತ್ತಿದೆ. ಇದರಿಂದ ಮಾರ್ಗ ಮಧ್ಯದಲ್ಲಿ ಜನರ ಉಪಜೀವನ ನಡೆಯುತ್ತದೆ. ಹೇಗೆಂದರೆ ಸಾರಿಗೆಯಿಂದ ಅನೇಕರೀತಿಯ ವ್ಯಾಪಾರಿಗಳು ತಮ್ಮ ಮೂಲ ಅವಶ್ಯಕ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

ಇಂದು ಕರ್ನಾಟಕ ರಾಜ್ಯದಲ್ಲಿ ಅತ್ಯಧಿಕ ತೆರಿಗೆಯನ್ನು ಸಲ್ಲಿಸುವ ಸಾಲಿನಲ್ಲಿ ಸಂಡೂರು ಎರಡನೇ ಸ್ಥಾನದಲ್ಲಿದೆ. ಒಂದು ತಿಂಗಳಿಗೆ ಸುಮಾರು ೨೦ರಿಂದ ೨೫ ಕೋಟಿ ಇತರ ಎಲ್ಲಾ ರೀತಿಯ ತೆರಿಗೆ ಸರ್ಕಾರಕ್ಕೆ ಹೋಗುತ್ತಿದೆ. ಇದರಿಂದ ಸರ್ಕಾರದ ಆದಾಯ ಲಾಭದಾಯಕವಾಗಿದೆ.

ಗಣಿಗಾರಿಕೆಯಿಂದಾಗುವ ಪರಿಣಾಮಗಳು

೧. ಅನಾರೋಗ್ಯ
೨. ಅರಣ್ಯ ನಾಶ
೩. ಸಾರಿಗೆ ಅವ್ಯವಸ್ಥೆ
೪. ಅನಕ್ಷರತೆ
೫. ಬಾಲಕಾರ್ಮಿಕ ಪದ್ಧತಿ

೧. ಅನಾರೋಗ್ಯ

ಅರಣ್ಯದಲ್ಲಿರುವ ಖನಿಜಾಂಶಗಳನ್ನು ಅಂದರೆ ಅದಿರನ್ನು ಹೊರತೆಗೆಯುವುದರಿಂದ ಅಲ್ಲಿ ಧೂಳು ಅಧಿಕ ಮಟ್ಟದಲ್ಲಿದೆ. ಇದರಿಂದ ಗಣಿಗಾರಿಕೆಗಳಲ್ಲಿ ಸಂಡೂರಿನಲ್ಲಿ ಸಂಪೂರ್ಣ

ಧೂಳುಮಯ ವಾತಾವರಣವಿದೆ. ಇದು ಹಲವಾರು ಮಾರಕ ರೋಗಗಳಿಗೆ ಕಾರಣವಾಗಿದೆ. ಅಸ್ತಮಾ ಇಲ್ಲಿ ಪ್ರಮುಖವಾಗಿದೆ. ಜನರಿಗೆ ಅಧಿಕ ಹಣ ದೊರೆಯುವುದರಿಂದ ಜನ ಅನೇಕ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಗುಟಕಾ ಸೇವನೆ, ಲೈಂಗಿಕ ಚಟುವಟಿಕೆ, ಕುಡಿತ, ಅನೈತಿಕತೆ, ಸ್ವಚ್ಛವಿಲ್ಲದ ಆಹಾರ ಸೇವನೆ ಅಶುದ್ಧವಾದ ಗಾಳಿ ವಾತಾವರಣದ ಕೊರತೆ ಇಲ್ಲಿ ತಾಂಡವಾಡುತ್ತಿದೆ.

೨. ಅರಣ್ಯನಾಶ

ಖನಿಜ ನಿಕ್ಷೇಪಗಳಿಗಾಗಿ ಕಡಿದಾದ ಅರಣ್ಯವನ್ನು ಕಡಿದು ಅರಣ್ಯಸಂಪತ್ತನ್ನ ಹಾಳುಮಾಡುತ್ತಿದ್ದಾರೆ. ಇದರಿಂದ ಸರಿಯಾಗಿ ಮಳೆ ಬರದೇ ಹೋಗುತ್ತದೆ. ರೈತರಿಗೆ ಬೆಳೆ ಸರಿಯಾಗಿ ಬರುವುದಿಲ್ಲ. ಜೊತೆಗೆ ಅಧಿಕವಾದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಶುದ್ದವಾದ ನೀರು ಗಾಳಿಗೂ ಕೊರತೆ ಉಂಟಾಗಿದೆ. ಜೊತೆಗೆ ಜನರು ದಿಢೀರನೆ ಶ್ರೀಮಂತರಾಗಲು ಆಹಾರ ಧಾನ್ಯಗಳನ್ನು ಬೆಳೆಯುವ ಹೊಲಗಳಿಂದ ಖನಿಜಾಂಶವನ್ನು ಸರ್ಕಾರಿ ಪರವಾನಿಗೆ ಇಲ್ಲದೆ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ.

೩. ಸಾರಿಗೆ

ಸಂಡೂರು ಪ್ರದೇಶದಲ್ಲಿ ಬಹುದೊಡ್ಡ ಸಮಸ್ಯೆ ಎಂದರೆ ಇಲ್ಲಿನ ರಸ್ತೆಗಳು ಅಸ್ತವ್ಯಸ್ಥವಾಗಿರುವುದು. ಹೊರ ರಾಜ್ಯ ಜಿಲ್ಲೆಗಳಿಗೆ ಲಾರಿಗಳ ಮೂಲಕ ಅದಿರು ಸಾಗಣಿಕೆ ಮಾಡುವಾಗ ಲಾರಿಗಳಲ್ಲಿ ಅಧಿಕ ತೂಕದ ಅದಿರು ತುಂಬುವಕಾರಣ ರಸ್ತೆಗಳು ಹಾಳಾಗಿವೆ. ರಸ್ತೆಗಳಲ್ಲಿ ಅನೇಕ ಗುಂಡಿಗಳು ಬಿರುಕುಗಳು ಇವೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗಿದೆ. ಅಪಘಾತದ ಭಯವೂ ತಪ್ಪಿದ್ದಲ್ಲ. ಪ್ರತಿನಿತ್ಯ ಶೇ ೧೫% ರಷ್ಟು ಅಪಘಾತಗಳು ೫% ರಷ್ಟು ಸಾವು ಸಂಭವಿಸುತ್ತಿವೆ.

೪. ಅನಕ್ಷರತೆ ಮತು ್ತಬಾಲಕಾರ್ಮಿಕ ಪದ್ಧತಿ

ಹಣದ ಆಸೆಗಾಗಿ ಹಿರಿಯರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಿದ್ದಾರೆ. ಮಕ್ಕಳ ಉಜ್ವಲ ಭವಿಷ್ಯ ಕೈಬಿಟ್ಟು ಗಣಿಗಾರಿಕೆಯಲ್ಲಿ ಹಲವು ಕೆಲಸ ಮಾಡುತ್ತಿದ್ದಾರೆ. ಮಳೆ ಆಧಾರಿತ ಭೂಮಿಗಳ ಒಡೆಯರು ಇಂದು ಹಣಕ್ಕಾಗಿ ಉತ್ತಮ ಜೀವನ ಪದ್ಧತಿಗಾಗಿ ಈ ಗಣಿಗಾರಿಕೆಯನ್ನು ನಂಬಿದ್ದಾರೆ. ಇದು ಮಕ್ಕಳ ಶೈಕ್ಷಣಿಕ ಬದುಕಿಗೆ ಧಕ್ಕೆ ಯಾಗುತ್ತಿದೆ. ಬಾಲಕಾರ್ಮಿಕ ಪದ್ಧತಿ ಸರಾಗವಾಗಿದ್ದು, ಶಿಕ್ಷಣ ಇವರಿಗೆ ಸಿಗದಂತಾಗಿದೆ.

ಹಿಂದೆ ೧೯೪೨ ರಲ್ಲಿ ಗಾಂಧೀಜೀಯವರು SEE SANDUR IN SEPTEMBER ಎಂದು ಹೇಳಿದ್ದರು. ಆದರೆ ಇಂದು ಇಲ್ಲಿನ ಪರಿಸರ ವಾತಾವರಣ ನೋಡಿದರೆ ಅವರ ಮಾತು ಕೇವಲ ನೆನಪು ಮಾತ್ರವಾಗಿದೆ. ಅದು ಮರಳಲು ಸಾಧ್ಯವಿಲ್ಲ.


ಶ್ರೀ ಕುಮಾರ ಸ್ವಾಮಿ ದೇವಸ್ಥಾನ


ನಾರಿಹಳ್ಳ ಜಲಾಶಯ


ನಾರಿಹಳ್ಳ ಜಲಾಶಯ



ಶ್ರೀ ಎಂ. ವೈ.ಘೋರ್ಪಡೆ
ಮಾಜಿ ಸಚಿವರು



ಶ್ರೀಮಾನ್ಯ ಸಂತೋಷ ಲಾಡ್
ಮಾಜಿ ಶಾಸಕರು

ಅಧ್ಯಾಯ - ಮೂರು

ಬಯಲಾಟಪದ ವಿವೇಚನೆ ಮತ್ತು ಕನ್ನಡ ಬಯಲಾಟ ಪರಂಪರೆ


ಅಧ್ಯಾಯ – ಮೂರು

ಬಯಲಾಟಪದ ವಿವೇಚನೆ ಮತ್ತು ಕನ್ನಡ ಬಯಲಾಟ ಪರಂಪರೆ

'ಬಯಲಾಟ' ಎಂಬುದಕ್ಕೆ ಬಯಲಿನಲ್ಲಿ ಆಡುವ ಆಟ ಎಂದು ಸಾಮಾನ್ಯ ಅರ್ಥ ಹೇಳಬಹುದು. ಇಲ್ಲಿ ಮುಖ್ಯವಾಗಿರುವುದು ಬಯಲು + ಆಟ = ಬಯಲಾಟವಾಗಿದೆ ಎಂದು ಅರ್ಥೈಸಬಹುದು. 'ಆಟ' ಎಂಬ ಪದಕ್ಕೆ dance, acting, stage Performance, a show ಎಂಬ ಆಂಗ್ಲ ಭಾಷೆಯ ಪದಗಳು ಸಿಗುತ್ತವೆ. ಇದಕ್ಕೆ ಕನ್ನಡದಲ್ಲಿ ಕುಣಿತ, ಅಭಿನಯ, ರಂಗಪ್ರದರ್ಶನ ಎನ್ನುವ ಪದಗಳು ದೊರೆಯುತ್ತವೆ. ಇದಕ್ಕೆ ಪೂರಕವಾಗಿ ತಮಿಳು, ಮಲೆಯಾಳಂ, ತೆಲುಗು, ತುಳು ಮುಂತಾದ ದ್ರಾವಿಡ ಭಾಷೆಗಳಲ್ಲಿ ಹಲವು ಪದಗಳು ಸಿಗುತ್ತವೆ. ದ್ರಾವಿಡದಲ್ಲಿ 'ಅಟ್ಟಂ (ತಮಿಳು) 'ಆಟ್ಟಲ್' ಅಥವಾ 'ಆಟ್ಟ' ಎಂಬುದು 'ಆಡ್' ಧಾತುವಿನಿಂದ ನಿಷ್ಪನ್ನವಾಗಿದೆ. ಬಯಲಾಟಕ್ಕೆ 'ಅಟ್ಟದಾಟ' ಎಂಬ ಹೆಸರೂ ರೂಢಿಯಲ್ಲಿದೆ. ಕೇರಳದಲ್ಲಿನ 'ರಾಮನಾಟ್ಟಂ' ೧೬–೧೭ನೇ ಶತಮಾನದ ಅವಧಿಯಲ್ಲಿ 'ಅಟ್ಟಕಥೆ' ಎಂಬ ಹೆಸರಿನಿಂದಲೇ ಪ್ರಚಾರಗೊಂಡಿದೆ. ತುಳು ಮಲೆಯಾಳಂ ಭಾಷೆಗಳಲ್ಲಿ 'ಆಟ' ಪದವೇ ಅಟ್ಟ ಎಂದಾಗುತ್ತದೆ. ಅಟ್ಟ ಪದ ಕರ್ನಾಟಕದಲ್ಲಿನ ಬಯಲಾಟಗಳಲ್ಲೂ ಸಹ ಅಟ್ಟಗಳನ್ನು ಹಾಕಿ ಆಡುವ ಪದ್ಧತಿ ಇರುವುದರಿಂದ ಇದನ್ನು 'ಅಟ್ಟದಾಟ' ಎಂದು ಕರೆಯುವುದು ವಾಡಿಕೆಯಾಗಿದೆ. ನಾಟಕ ಮೊದಲಾದ ರಂಗ ಮಾಧ್ಯಮಗಳಿಗೆ ಒಂದು ನಿರ್ದಿಷ್ಟ ರಂಗಸ್ಥಳ ಬೇಕಾಗುತ್ತದೆ. ಅಲ್ಲಿ 'ರಂಗ' (Stage) ಎಂದರೆ ಅಟ್ಟಕ್ಕೆ ಪ್ರಾಧಾನ್ಯ. ಬಯಲಾಟ ಎಂಬುದು ಬಯಲಿನಲ್ಲೇ ನಡೆಯುವ ಆಟವಾಗಿರುವಾಗ ಅಲ್ಲಿ ರಂಗಸ್ಥಳಕ್ಕೆ

ಮಹತ್ವವಿಲ್ಲ. ಆಂಧ್ರದ ವೀಧಿನಾಟಕ, ತಮಿಳಿನ ತೆರುಕೊತ್ತು (ತೆರ–ರಸ್ತೆ–ಬೀದಿ) ಇದಕ್ಕೆ ಸಂವಾದಿಯಾಗಿಯೇ ನಮ್ಮಲ್ಲಿ ಬಯಲಾಟ ಪದ ರೂಢಿಯಲ್ಲಿದೆ. 'ಆಟ' ಎಂಬ ಪದ ಪ್ರಯೋಗವನ್ನು ಬಯಲಿನಲ್ಲಿ ಹೊರಾಂಗಣ, ಬೀದಿಗಳಲ್ಲೇ ಪ್ರಯೋಗವಾಗುವ ಕಾರಣ ಇಲ್ಲಿ ಬಯಲಾಟ ಪದವು ಸರಿಯಾಗಿದೆ.

ಒಟ್ಟಾರೆ ಬಯಲಾಟ ಎಂದರೆ ಬಯಲಿನಲ್ಲಿ ಪ್ರದರ್ಶನಗೊಳ್ಳುವ ಕುಣಿತ ಎಂಬುದನ್ನು ಹೇಳಬಹುದು.


ಬಯಲಾಟ
ಮೂಡಲಪಾಯ
ಪಡುವಲಪಾಯ
ದೊಡ್ಡಾಟ
ಸಣ್ಣಾಟ
ಯಕ್ಷಗಾನ
ತಾಳಮದ್ದಲೆ
ಬ್ಯಾಲೆ
ತೆಂಕತಿಟ್ಟು
ಬಡಗತಿಟ್ಟು
ರಾಧಾನಾಟ
ದಾಸರಾಜ
ಶರಣಾಟ
ದಶವತಾರ ದಾಟ
ರಾಜಾನಾಟ
ಭಾವನಾಟ

ಕನ್ನಡ ಬಯಲಾಟ ಪರಂಪರೆ

ಬಯಲಾಟದ ಮೂಲವನ್ನು ನಾವು ಕನ್ನಡ ಜಾನಪದ ರಂಗಭೂಮಿಯನ್ನ ಅನ್ವೇಷಿಸಿದಾಗ ದೇವತಾರಾಧನೆಯ ಹಿನ್ನಲೆಯಲ್ಲಿ ಸಂಗೀತ, ನೃತ್ಯ, ಆಚರಣೆಗಳ ಜೊತೆಯಲ್ಲಿಯೇ ಜನಪದರಲ್ಲಿ ಮೂಡಿ ಬಂದಿದ್ದು ನಂತರದ ದಿನಗಳಲ್ಲಿ ಮನೋರಂಜನೆಯ ರೂಪ ಪಡೆದು ವಸ್ತ್ರಾಲಂಕಾರ, ಹಾವ, ಭಾವ, ಕುಣಿತ, ಸಂಗೀತ, ಹಲವು ರೀತಿ ವಿಕಾಸಗೊಂಡು ಕನ್ನಡ ನಾಡಿನ ಮಹತ್ವ ಪೂರ್ಣ ಸ್ವತ್ತಾಗಿದೆ. ಈ ಬಯಲಾಟದ ಕಲೆಯು ಕರ್ನಾಟಕದ ಜಾನಪದ ರಂಗಭೂಮಿಯನ್ನ ಪ್ರತಿನಿಧಿಸುವ ಪ್ರಮುಖ ಪ್ರದರ್ಶನ ಕಲೆಯಾಗಿ ಹಾಗೂ ಪ್ರಾದೇಶಿಕವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ಬಯಲಾಟದ ಒಂದು ಕವಲಾಗಿ ಕರಾವಳಿ ಪ್ರದೇಶದ ಯಕ್ಷಗಾನವಾಗಿದ್ದರೆ ಮತ್ತೆರಡು ಕವಲಾಗಿ ಬಯಲು ಸೀಮೆಯ ದೊಡ್ಡಾಟ, ಸಣ್ಣಾಟಗಳಾಗಿ ರೂಪುಗೊಂಡಿವೆ. ಇಂದು ಬಯಲಾಟ ಗೀತ, ನೃತ್ಯ, ಸಂಗೀತ, ವಸ್ತ್ರಾಲಂಕಾರ ಮೊದಲಾದ ವಿಶೇಷತೆಯಿಂದ ಹಲವು ಕಲೆಗಳಿಗೆ ಸರಿಸಾಟಿಯಾಗಿ ಮೈತಳೆದಿದೆ. ಪಾರಂಪರಿಕ ಕಲೆಯಾದ ಇದು ರೈತಾಪಿ ಜನಗಳ ಅದರಲ್ಲೂ ಕೆಳವರ್ಗದ ಜನಗಳ ಮಧ್ಯೆ ಜೀವಂತಿಕೆ ಪಡೆದಿದ್ದು ಈ ಕಲೆಯು ಬಿಡುವಿನ ವೇಳೆಯಲ್ಲಿ ಮನೋರಂಜನೆಯ ಸಾಧಕವಾಗಿದೆ. ಇದರ ಹುಟ್ಟು ಬೆಳವಣಿಗೆ ಪರಂಪರೆಯನ್ನು ಈ ಮುಂದೆ ಕಾಣಬಹುದು.

ಕರ್ನಾಟಕ ಜನಪದ ರಂಗಭೂಮಿಯ ಪರಂಪರೆ ಅತ್ಯಂತ ಪ್ರಾಚೀನವಾದದ್ದು. ಕ್ರಿ.ಶ. ಆರಂಭ ಕಾಲದ 'ಶಿಲಪ್ಪದಿಗಾರಂ' ತಮಿಳು ಕೃತಿಯಲ್ಲಿ 'ಶೆಂಗುಟ್ಟುವನ್' ಎಂಬ ಚೇರ ದೊರೆಯನ್ನು ನೀಲಗಿರಿಯಲ್ಲಿ ಕನ್ನಡ ನರ್ತಕಿಯರು ತಮ್ಮ ನೃತ್ಯದಿಂದ ರಂಜಿಸಿದರೆಂದು ತಿಳಿದು ಬರುತ್ತದೆ. ಈ ಕಾವ್ಯದಲ್ಲಿ ಅವರ ನೃತ್ಯದೊಂದಿಗೆ ವೇಷಭೂಷಣಗಳ ವರ್ಣನೆಯೂ ಇದೆ. ಈ ವಿವರ ಅವರು ಜಾನಪದ ನರ್ತಕಿಯರೆಂದು ತಿಳಿಸುತ್ತದೆ. ಇದೇಕನ್ನಡ ಜನಪದ ರಂಗಭೂಮಿಯ ಅತ್ಯಂತ ಹಳೆಯ ದಾಖಲೆ.

ಕೆರೋಡಿ ಸುಬ್ಬರಾಯರು 'ಭಾಗವತದ ಹರಿವಂಶ ಪುರಾಣದಲ್ಲಿ (ಕ್ರಿ.ಶ. ೨೦೦-೪೦೦ರ ಮಧ್ಯ) ಭದ್ರನಟನ ನಾಯಕತ್ವದಲ್ಲಿ ಭಾಗವತರ ಮೇಳದ ಪ್ರಸ್ತಾಪ ಬರುವುದನ್ನು ತಿಳಿಸುತ್ತಾರೆ.

ಕನ್ನಡ ಬಯಲಾಟದ ಪ್ರಾಚೀನತೆಯನ್ನು ಗ್ರೀಕ್ ಮೂಲದಲ್ಲಿ ಕಾಣುತ್ತೇವೆ. "ಬಯಲಾಟದಲ್ಲಿ ದೇವತಾ ಪಾತ್ರಗಳು ಅಟ್ಟದೊಳಗಿಂದ ಪ್ರವೇಶ ಮಾಡಿದರೆ ರಾಕ್ಷಸ, ಖಳನಾಯಕ ಪಾತ್ರಗಳು ಹೊರಗಡೆಯಿಂದ ಆರ್ಭಟಿಸುತ್ತಾ ಅಟ್ಟವನ್ನು ಪ್ರವೇಶಿಸುತ್ತವೆ. ಇದು

ಬಯಲಾಟದ ಸಂಪ್ರದಾಯ. ಇದೇ ಸಂಪ್ರದಾಯ ಗ್ರೀಕ್ ನಾಟಕಗಳಲ್ಲಿಯೂ ಇದೆ. ಬಯಲಾಟಗಳು ಗ್ರೀಕ್‌ರಿಂದ ಬಳುವಳಿಯಾಗಿ ಬಂದಿರಬೇಕೆಂದು ನಂಬಿಕೆ.

ಎಂ.ಎಸ್. ಸುಂಕಾಪುರ ಅವರು ಗ್ರೀಕ್ ಮೂಲ ಎಂಬುದರ ಜೊತೆಗೆ ಇವು ಮೂಲತಃ ದ್ರಾವಿಡರ ಮೂಲವೆಂಬ ಅಭಿಪ್ರಾಯವನ್ನು ಹೇಳುತ್ತಾರೆ. ಬಯಲಾಟ ಗ್ರೀಕ್ ರಂಗ ಭೂಮಿ ಹೋಲುವುದರೊಂದಿಗೆ ಈ ಬಗೆಯ ಆಟಗಳು ಕುಚಿಪುಡಿ, ರಾಮನಾಟಂ ಮುಂತಾದ ಹೆಸರಿನಲ್ಲಿ ತಮಿಳು, ಆಂಧ್ರ, ಮಲೆಯಾಳಂ ಮೊದಲಾದ ಕರ್ನಾಟಕ ದ್ರಾವಿಡ ಪ್ರದೇಶಗಳಲ್ಲಿ ಕಂಡು ಬರುವ ಕಾರಣ ಇವು ದ್ರಾವಿಡರ ಬಳುವಳಿ ಎಂಬುದು ಸ್ಪಷ್ಟವಾಗುತ್ತದೆ. ನಟುವರು ದ್ರಾವಿಡ ಜನಾಂಗಕ್ಕೆ ಸೇರಿದವರು. ಹಾಡಿ ಕುಣಿಯುವುದು ಕುಣಿಯುತ್ತ ನಟನೆ ಮಾಡುವುದು ಈ ಜನಾಂಗದ ವೈಶಿಷ್ಟ್ಯ ಇವರಿಂದಲೇ ಆಟದ ಕಲ್ಪನೆ ಮೂಡಿಬಂದಿದೆ ಎಂದು ಚರ್ಚಿಸಬಹುದು. ಹೀಗೆ ಬಯಲಾಟಕ್ಕೆ ಮೂಲ ದ್ರಾವಿಡರು ಎಂದು ಹೇಳಬಹುದು.

ಬಯಲಾಟವು ಆಯಾ ಪ್ರದೇಶಕ್ಕೆ ತಕ್ಕಂತೆ ಹೆಸರು ಮಾತ್ರ ಬದಲಾಗಿದೆ. ಅಂತೆಯೇ ಪ್ರಾದೇಶಿಕವಾಗಿ ಕುಣಿತ ವೇಷಭೂಷಣವೂ ಬದಲಾಗಿದೆ.

ಜನಪದ ರಂಗ ಕಲೆಯ ಉಗಮ ವಿಚಾರವಾಗಿ ಪಾಶ್ಚಾತ್ಯ ಹಾಗೂ ಭಾರತೀಯರಲ್ಲಿ ಹೆಚ್ಚಿನ ಸಾಮ್ಯಗಳು ಕಂಡುಬರುತ್ತವೆ. ಆದರೆ ನಾಟ್ಯ, ಅಭಿನಯ, ವಿಷಯ ಜಾನಪದ ಇಲ್ಲವೇ ಅಭಿಜಾತ ಎರಡೂ ರಂಗಪದ್ಧತಿಗೆ ಸಂಬಂಧಿಸಿದ ವಿಷಯಗಳೇ ಆಗಿವೆ. ಭಾರತದಲ್ಲಿ 'ನಾಟ್ಯಶಾಸ್ತ್ರ'ವನ್ನು ಕುರಿತು ಮೊಟ್ಟಮೊದಲಿಗೆ ಶಾಸ್ತ್ರಗ್ರಂಥವೊಂದನ್ನು ರಚಿಸಿದ 'ಭರತಮುನಿ' ಲೋಕವೃತ್ತದ ಅನುಕರಣವೇ ನಾಟಕ ಎನ್ನುತ್ತಾನೆ. ಅನುಕರಣೆಯ ಮೂಲಕ ಭಾವಾಭೀರಂಜನೆ ಮಾಡುವುದು ಮಾನವೀಯ ಸಹಜ ಪ್ರವೃತ್ತಿ. ಅನುಕರಣೆ ಮತ್ತು ರಂಜನೆ ರಂಗಭೂಮಿಯ ಮೂಲಾಂಶಗಳಾಗಿರುವುದರಿಂದ ಇವೆರಡೂ ಅಷ್ಟೇ. ಪ್ರಾಚೀನ. ಸಮ್ಮುಖವಾಗಿ ಬೆಳೆದು ಬಂದ ಈ ರಂಗಕಲೆ ಪ್ರಾಚೀನ ಕಾಲದಲ್ಲಿ ಅನುಕರಣ ಯೋಗ್ಯವಾದ ಇನ್ನು ಹಲವು ರೂಪಗಳಲ್ಲಿ ಕಾಣಿಸಿಕೊಂಡಿವೆ. ಸೂತ್ರದ ಗೊಂಬೆಯಾಟ, ತೊಗಲು ಬೊಂಬೆಯಾಟಗಳು ಈ ಕಲೆಯ ಆದಿಮ ಅವಸ್ಥೆಯನ್ನು ನಮಗೆ ತಿಳಿಸುತ್ತವೆ. ಕುಣಿತ, ಮುಖವಾಡ ಮೇಳಗಳು ಯಾವುದೇ ಜನಾಂಗದವರಲ್ಲಿ ಇಂಥವೇ ಪ್ರಾಚೀನ ರೂಪಗಳನ್ನು ಉಳಿಸಿಕೊಂಡಿವೆ. ಆದರೆ ಮಾನವನು ಬೇಸಾಯ ಪದ್ಧತಿಯನ್ನು ಕಟ್ಟಿಕೊಂಡ ಮೇಲೆ ಇಂದಿನ ಬಯಲಾಟ ಮೊದಲಾದ ಕಲೆಗಳು ಆರಂಭಗೊಂಡಿವೆ. ಮನುಷ್ಯ ಮೊದಲು ಪ್ರಾಣಿ, ಪಕ್ಷಿ ಹಾಗೂ ಗೊಂಬೆಗಳ ಅನುಕರಣೆ ಮಾಡದಯೇ ತಾನೇ ಮೊದಲು ಈ ಕಲೆಯಲ್ಲಿ ಭಾಗಿಯಾದ. ಇದು ಕಲೆಯ ಬೆಳವಣಿಗೆಯ ಪ್ರಮುಖ ಹೆಜ್ಜೆ.

ನಾಟ್ಯ ನಟನೆ ಎಂಬುದು ಮಾನವನ ಮೂಲ ಅಭಿವ್ಯಕ್ತಿ. ಇವುಗಳು ಈ ಮೊದಲೇ ಹೇಳಿದಂತೆ ದೇವತಾರಾಧನೆಯ ಹಿನ್ನಲೆಯಲ್ಲಿಯೇ ಹುಟ್ಟಿವೆ. ಕರ್ನಾಟಕ ಜಾನಪದ

ರಂಗಭೂಮಿಯ ಪ್ರಥಮ ಹಾಗೂ ಪ್ರಮುಖ ಲಕ್ಷಣ ವೆಂದರೆ ಮೇಳಗಾರಿಕೆ ಕುಣಿತ ಮತ್ತು ಹಾಡು. ನೃತ್ಯ ಮತ್ತು ಗೀತಗಳನ್ನು ಪ್ರಧಾನವಾಗಿ ಉಳ್ಳ ರಂಗ ಪರಂಪರೆಗಳು ದ್ರಾವಿಡರ ಬಳುವಳಿ, ಕುಣಿತ ಮತ್ತು ಹಾಡುಗಾರಿಕೆಯನ್ನು ಪ್ರಧಾನವಾಗಿ ಹೊಂದಿದ್ದ ಈ ರಂಗ ಪ್ರಕಾರಗಳೇ ಮುಂದೆ ಭಕ್ತಿ ಆಂದೋಲನದ ಕಾಲದಲ್ಲಿ ಶಾಸ್ತ್ರೀಯ ನೃತ್ಯ ಹಾಗೂ ಸಂಗೀತವನ್ನೊಳಗೊಂಡ ಇಂದಿನ ಬಯಲಾಟಗಳ ಬೆಳವಣಿಗೆಗೆ ಕಾರಣವಾದವು.

ಜಾನಪದ ರಂಗಭೂಮಿಯ ಕೆಲವು ಪ್ರಾಚೀನ ಮಾದರಿಗಳು ಬಯಲಾಟದ ಮೂಲವೆಂದು ವಿದ್ವಾಂಸರು ಹೇಳುತ್ತಾರೆ. ಅವುಗಳನ್ನು ಈ ರೀತಿಯಾಗಿ ಕಾಣಬಹುದು.

೧. **ಪರಗಣ**

ಕಿಟಲ್ ಕೋಶದಲ್ಲಿ 'ಪ್ರಕರಣ' ಪದಕ್ಕೆ a kind of drama with a fictious plot ಎಂಬರ್ಥವಿದೆ. ಕವಿರಾಜ ಮಾರ್ಗದಲ್ಲಿ ಪ್ರಕರಣಕ್ಕೆ ಸಂವಾದಿಯಾದ 'ಪರಗಣದ ಬಳಕೆ ಇದೆ.

ಮಿಗೆ ದುಷ್ಕರ ಕಾವ್ಯಂಗಳೊ
ಳಗರ್ಹಿತ ಪ್ರಾಯಮಕ್ಕುಮಾ ಶೃತಿಕಷ್ಟಂ
ಪರಗಣದೊಳುಳಿದ ಮೂರುಂ
ನಗಿಸುಗುಮಪ್ಪುದರಿನಲ್ಲಿಗಂತವ ದೋಷಂ

ಪರಗಣದ ಪ್ರಸ್ತಾಪ ಇನ್ನೂ ಕೆಲವು ಕಡೆ ಬಂದಿದೆ. ಆದಿಪುರಾಣದಲ್ಲಿ ಅದರ ನಿಷ್ಪನ್ನ ರೂಪಗಳಾದ ಪರಗಣಿಗ-ವಡ್ಡಾರಾಧನೆ (೧೧-೧೨), ನಾಳ್ವಗರಣ-ಶಬ್ದಮಣಿದರ್ಪಣ, ರಕ್ಕಸವಗರಣ (ಶಬ್ದಮಣಿದರ್ಪಣ ರಾಕ್ಷಸ ಪ್ರಕರಣಂ-೩೦೭) ಗಳಲ್ಲೂ ಬಂದಿದೆ. ಧರ್ಮಾಮೃತ ಹೀಗೆ ಇವುಗಳ ಪರೀಶೀಲನೆಯಿಂದ ಪರಗಣವೆಂಬುದು ಒಂದು ರೀತಿಯ 'ಆಟ' ಅಭಿನಯಿಸುವಂಥದ್ದು ಎಂದು ತಿಳಿದು ಬರುತ್ತದೆ. ಇಲ್ಲಿ ವೇಷ, ಅಭಿನಯಗಳೇ ಪ್ರಧಾನವಾಗಿದ್ದು ವಾಚಿಕಾಂಶವು ಅವುಗಳಿಗೆ ಅಧೀನವಾಗಿದ್ದ ಒಂದು ಬಗೆಯ ಬಯಲು ನಾಟಕ ಎಂಬ ಭಾವನೆ ಬರುತ್ತದೆ.

ಪರಗಣವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಹಾಕುವ ವೇಷಭೂಷಣಗಳಿಂದ ಕುಣಿತದ ಜೊತೆಯಲ್ಲಿ ಪ್ರದರ್ಶನಗೊಳ್ಳುವ ಒಂದು ಜನಪದ ಕಲೆ.

೨. **ಚೆತ್ತಾಣ-ಬೆದಂಡೆ-ಬಾಜನೆಗಬ್ಬ**

ಕಾವ್ಯ ಪ್ರಭೇದಗಳನ್ನು ಹೇಳುವಾಗ ಕವಿರಾಜಮಾರ್ಗಕಾರ "ಚೆತ್ತಾಣ ಬೆದಂಡೆ"ಗಳನ್ನು ಉಲ್ಲೇಖಿಸುತ್ತಾನೆ. ಒಂದು ಕಾಲಕ್ಕೆ ಸಾಮಾನ್ಯರ ಸಾಹಿತ್ಯರೂಪಗಳಾಗಿದ್ದ ಈ ಚೆತ್ತಾಣ-

ಬೆಂದಡೆ ಗಬ್ಬಗಳನ್ನು ಈ ಕಾಲದ ಸುಪ್ರಸಿದ್ಧ ಕಾವ್ಯಗಳ ಜೊತೆ ಬಡಂಬಡಿಕೆ ಮಾಡಿದರೆಂದು ಆತ ಹೇಳಿದ್ದಾನೆ. ಈ ಬಗೆಯ ಕಾವ್ಯ ಪ್ರಕಾರಗಳು ಸಂಸ್ಕೃತ ಸಾಹಿತ್ಯದಲ್ಲಿ ಇಲ್ಲವಾದುದರಿಂದ ಇವು ದೇಶೀಕಾವ್ಯಗಳು, ಮೃದಂಗಾದಿ ಹಿಮ್ಮೇಳಗಳಿಂದ ಕೂಡಿದ ಯಕ್ಷಗಾನ 'ಏಕ್ಕಲಗಾನ'ವೇ ಬೆದಂಡೆಗಬ್ಬವಾಗಿತ್ತೆಂದು ಮುಳಿಯ ತಿಮ್ಮಪ್ಪಯ್ಯನವರ ಹೇಳಿಕೆ. "ಯಕ್ಷಗಾನವು ವರ್ಣಕ ಕವಿಗಳ ಗೀತಗೋಷ್ಠಿಯಾಗಿದ್ದುದರಿಂದ ಅದರೊಳಗಿನ ಪ್ರಸಂಗವೆಂಬ ಪ್ರಭೇದವು ಚತ್ತಾಣವೆಂದೂ, ಅಭಿನಯವೆಂಬ ಪ್ರಭೇದವು ಬೆದಂಡೆಗಬ್ಬವೆಂದೂ ಪ್ರಾಚೀನ ಜನಪದ ರೂಪಕದ ಶ್ರಾವ್ಯ ಹಾಗೂ ದೃಶ್ಯ ಪ್ರಭೇದಗಳನ್ನೇ ಕವಿರಾಜಮಾರ್ಗಕಾರ ಉಲ್ಲೇಖಿಸಿರುವನೆಂದು ಡಾ॥. ಸದಾನಂದ ನಾಯಕರು ಹೇಳಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರಲ್ಲಿ ಬೆದರಂಡೆಯ ಹಾಡು ಪ್ರಚಲಿತವಿದೆ. ಒಂದು ಕಾಲಕ್ಕೆ ಅತಿ ಉದ್ದವಾಗಿದ್ದ ಈ ನೃತ್ಯಾಭಿನಯ ಗೀತವನ್ನು ಬೆಳತನಕ ಹಾಡಿಕುಣಿದು ಅಭಿನಯಿಸುತ್ತಿದ್ದರಂತೆ. ಹಾಡಿನ ಬಹುಭಾಗ ಈಗ ಜಾನಪದರಿಗೆ ಮರೆತುಹೋಗಿದೆ. ಜೀರ್ಣವಾಗುಳಿದ ಈ ಹಾಡಿನ ಭಾಗವನ್ನು ಹಾಡುತ್ತ ನೃತ್ಯಮಾಡುತ್ತಾರೆ. ಮಳೆರಾಯನ ಆಗಮನಕ್ಕಾಗಿ, ಹಾಡಿ, ಕುಣಿದು ಅಭಿನಯಿಸುವ ಸವಕಳಿ ರೂಪದಲ್ಲಿ ಇಂದು ಉಪಲಬ್ದವಿರುವ ಈ ಆರಾಧನಾ ನೃತ್ಯ ಗೀತದಲ್ಲಿ ಹೆಣ್ಣುಗಂಡುಗಳ ಮದುವೆ. ಅವರ ಕೂಟದ ಅನುಕರಣೆಯಿದೆ. ಫಲ ಸಮೃದ್ಧಿಯ ಹಾರೈಕೆ ಇದೆ. ಇಲ್ಲಿ ಬೆದರಂಡೆ ಬೆದಂಡೆ ಯಾಗಿರಬಹುದೇ? ಎಂಬ ಅನುಮಾನವಿದೆ. ಈ ಚೆತ್ತಾಣದಲ್ಲಿ ಅಡಕವಾದ ಕಂದ, ವೃತ್ತ, ಅಕ್ಕರ ಚೌಪದಿ ಗೀತಿಕಾದಿಗಳು ಇಂದಿನ ಯಕ್ಷಗಾನ ಪ್ರಬಂಧಗಳಲ್ಲಿವೆ.

೩. ಬಹುರೂಪಿ

ಭಕ್ತಿಯ ಆಂದೋಲನದಲ್ಲಿ ಕ್ರಿ.ಶ. ೧೨ ನೇ ಶತಮಾನದ ಸಂದರ್ಭದಲ್ಲಿ ಧರ್ಮಪ್ರಚಾರಕ್ಕಾಗಿ ಶಿವಶರಣರು ಈ ಕಲೆಯನ್ನು ರೂಢಿಸಿಕೊಂಡರು. ಬಹುರೂಪಿ ಚೌಡಯ್ಯ ಎಂಬ ವ್ಯಕ್ತಿ ಹೇಳುವಂತೆ ಶಿವಶರಣರು ಧರ್ಮ ತತ್ವ ಪ್ರಸಾರ ಕೈಗೊಂಡಾಗ ಶಿವನ ಲೀಲೆಗಳ ವೇಷ ಧರಿಸಿ ಹಾಡಿಕುಣಿಯುತ್ತಿದ್ದರು. ಇದರಿಂದ 'ಬಹುರೂಪಿ' ಪದ್ದತಿ ಬಂದು ವೃತ್ತಿಕಲೆಯಾಗಿ ಆ ಕಾಲಕ್ಕೆ ಇತ್ತು ಎಂಬುದು ಗೊತ್ತಾಗುತ್ತದೆ. ಇದು ಒಂದು ಮಾದರಿಯಲ್ಲಿ ಬಯಲಾಟವನ್ನೇ ಹೋಲುತ್ತದೆ. ಚೌಡಯ್ಯನ ಕಾಲದಿಂದ ಬೆಳೆದದ್ದನ್ನು ಕಂಡಾಗ ಬಯಲಾಟಗಳಿಗೆ ಪ್ರಾಚೀನ ಮಾದರಿ ಎನ್ನಿಸುವಂಥ ಅನುಮಾನ ಬರುವುದು ಸಹಜ.

೩. ನಾಟಕ

ಕುಮಾರ ವ್ಯಾಸ 'ವಿಜಯೋಪಚಿತ ರಣನಾಟಕಕ್ಕೆ ಜವನಿಕೆಯಾಯ್ತು' ಎಂದು ಹೇಳುತ್ತಾನೆ. ನಾಟಕವನ್ನು ಬಯಲಾಟ, ದೇಶೀಯ ಆಟ ಪದ್ಧತಿ ಎಂದು ಹೇಳುವುದಾದರೆ

ಇಲ್ಲಿ ಇದಕ್ಕೆ ಯಾವ ನಾಟಕ ಎನ್ನಬೇಕು? ಇಲ್ಲಿ ವ್ಯಕ್ತಿಗಳ ಗಂಭೀರ ವೀರ ಸ್ವಭಾವಾದಿಗಳ ಪ್ರದರ್ಶನ ಎಂಬ ಧ್ವನಿ ಇದೆ. ಕುಮಾರವ್ಯಾಸ 'ನಾಟಕ' ಎಂಬ ಪದವನ್ನು ಅಭಿನಯ ಅಥವಾ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿರುಸುತ್ತಾನೆ. ಆದರೂ ಆತನ ಕಾಲದಲ್ಲಿ 'ಆಟ' 'ನಾಟಕ' ಎಂಬ ಅಭಿನಯಗಳು ಪ್ರಸಾರದಲ್ಲಿದ್ದವೆಂಬುದು ತಿಳಿದು ಬರುತ್ತದೆ.

ಪುರಂದರದಾಸರಾದಿಯಾಗಿ ಇಡೀ ದಾಸಪಂಥ ಭಕ್ತಿಮಾರ್ಗದ ಪ್ರಚಾರಾರ್ಥವಾಗಿ ಜನಮನದಲ್ಲಿ ಬೇರೂರಿದ್ದ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ಮಠಗಳಲ್ಲಿ ಬೀದಿಯಲ್ಲಿ ಹಾಡಿ ಕುಣಿದರು. ಇವರು ರಚಿಸಿದ ಅನೇಕ ಹಾಡುಗಳಲ್ಲಿ ರಂಗಭೂಮಿಯ ಮೂಲಾಂಶಗಳನ್ನು ಗುರುತಿಸಬಹುದು. ದಾಸರ ಹಾಡುಗಳಲ್ಲಿ ಕೃಷ್ಣಭಕ್ತಿಪರವಾದ ಕೀರ್ತನೆಗಳು ವಿಶೇಷವಾಗಿ ಬಯಲಾಟ ಕವಿಗಳ ಗಮನ ಸೆಳೆದಿವೆ. ಕವಿಗಳು ಇಲ್ಲಿಯ ಗೋಕುಲ ವರ್ಣನೆ ಹಾಗೂ ಕೃಷ್ಣಾವತಾರದ ಹಿರಿಮೆಯನ್ನು ಸಾರುವ ಸಂಧರ್ಭಗಳು ಮೊದಲಾದವುಗಳನ್ನು ಬಯಲಾಟ ಕವಿಗಳು ದಾಸರ ಕೀರ್ತನೆಯ ರೂಪದ ಹಾಡುಗಳನ್ನು ಸ್ವತಃ ರಚಿಸಿ ತಮ್ಮ ಆಟಗಳಲ್ಲಿ ಸೇರಿಸಿದ್ದುಂಟು. ವೈಷ್ಣವ ಆಟಗಳಿಗೆ ಈ ಹಿನ್ನೆಲೆಯಿದ್ದರೆ. ಶೈವ ಆಟಗಳು ವೀರಭದ್ರದೇವರ ಒಡಬು ಮುಂತಾದ ಆಚರಣೆಯ ಸಾಹಿತ್ಯವನ್ನು ಬಯಲಾಟದಲ್ಲಿ ಸಮಾವೇಷಗೊಳಿಸಿರುವುದು ಕಂಡು ಬರುತ್ತದೆ. ಸಾಲಿ ವೆಂಕಣ್ಣಯ್ಯ ಅವರು ಸಂಗ್ರಹಿಸಿದ ದಕ್ಷಬ್ರಹ್ಮನ ಕಥೆಯಲ್ಲಿ ನೇರವಾಗಿ ಒಡಬುಗಳನ್ನು ಸೇರಿಸಿಕೊಳ್ಳಲಾಗಿದೆ. ಬಯಲಾಟಕ್ಕೆ ದೊರೆತ ಪ್ರೇರಣೆಯನ್ನು ಇನ್ನೂ ಹಲವು ಮೂಲಗಳಲ್ಲಿ ಗುರುತಿಸಲು ಸಾಧ್ಯ. ಸೂತ್ರದ ಬೊಂಬೆಯಾಟ, ತೊಗಲು ಗೊಂಬೆಯಾಟಗಳು ಬಯಲಾಟದ ಶಿಲ್ಪವನ್ನೇ ಒಳಗೊಂಡಿದ್ದು ಮಾಧ್ಯಮದಲ್ಲಿ ಮಾತ್ರ ಬೇರೆಯಾಗುತ್ತದೆ. ಆದ್ದರಿಂದ ಬಯಲಾಟಗಳ ಉಗಮವನ್ನು ಈ ಕಲೆಗಳ ಪ್ರಾಚೀನತೆಯೊಡನೆ ಅನ್ವೇಷಿಸಿ ಹೇಳಬಹುದಾಗಿದೆ.

ಅಧ್ಯಾಯ - ನಾಲ್ಕು

ನೈಸರ್ಗಿಕವಾಗಿ ಸಂಡೂರು ಪರಿಸರದ ಬಯಲಾಟಗಳು

ಅಧ್ಯಾಯ - ನಾಲ್ಕು

ನೈಸರ್ಗಿಕವಾಗಿ ಸಂಡೂರು ಪರಿಸರದ ಬಯಲಾಟಗಳು

ಬಯಲಾಟಗಳು ಪ್ರದರ್ಶನಾತ್ಮಕ ಕಲೆಗಳಾಗಿರುವುದರಿಂದ ಕಲಾತ್ಮಕ ದೃಷ್ಟಿಯೊಂದಿಗೆ ಜನಪದರಲ್ಲಿ ಅವು ನೈಸರ್ಗಿಕವಾಗಿಯೇ ಮೂಡಿಬಂದಿವೆ. ಜಾನಪದ ರಂಗಭೂಮಿಯ ಉಗಮ ವಿಕಾಸವು ದೇವತಾರಾಧನೆಯ ಹಿನ್ನಲೆಯಲ್ಲಿ ಸಂಗೀತ ನೃತ್ಯ ಆಚರಣೆಗಳೊಂದಿಗೆ ಮೂಡಿದೆ. ಹಾಗೆಯೇ ಸಂಡೂರು ಪರಿಸದ ಬಯಲಾಟಗಳು ಕರ್ನಾಟಕದ ಜನಪದ ರಂಗಭುಮಿಯ ಒಂದು ಪ್ರಾದೇಶಿಕ ವಿಭಾಗವಾಗಿದ್ದು ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಡು ಗುಡ್ಡಗಳಿದ್ದು ಬಳ್ಳಾರಿಯಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ಅಂತೆಯೇ ಇಲ್ಲಿ ಹಿಂದಿನಿಂದಲೂ ವ್ಯವಸಾಯ ಪ್ರಮುಖ ಕಸುಬಾಗಿದ್ದು ಇಲ್ಲಿನ ಕೆಂಪು ಬಣ್ಣದ ಮರಳು ಮಿಶ್ರಿತ ಭೂಮಿ ಆಹಾರ, ಬೇಳೆ ಕಾಳುಗಳನ್ನು ಬೆಳೆಯಲು ಅನುಕೂಲವಾಗಿದೆ.

ಸಂಡೂರಿನ ದೈವದತ್ತವಾದ ಪ್ರಕೃತಿಯೇ ಜನರಲ್ಲಿ ಹಲವು ಕಲೆ ಮೂಡಿಸಲು ಕಾರಣವಾಗಿದೆ. ೧೯೪೭ ರಲ್ಲಿ ಸ್ವಾತಂತ್ರ್ಯಗಳಿಸಿದರೂ ಸಹ ಸಂಡೂರು ಸಂಸ್ಥಾನಕ್ಕೆ ಮಾತ್ರ ಸ್ವಾತಂತ್ರ್ಯ ಲಭಿಸಿರಲಿಲ್ಲ. ಆಗ ಘೋರ್ಪಡೆ ವಂಶದ ಅಧೀನ ದಲ್ಲಿದ್ದ ಸಂಡೂರು ೩೩ ಹಳ್ಳಿಗಳ ವ್ಯಾಪ್ತಿ ಹಾಗೂ ಕೇವಲ ೧೫ ಸಾವಿರ ಜನ ಸಂಖ್ಯೆ ಒಳಗೊಂಡಿತ್ತು. ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶವಾದ ಕಾರಣ ಇಲ್ಲಿ ನೈಸರ್ಗಿಕವಾಗಿಯೇ ಈ ಕಲೆಯು ಬೆಳೆದು ಬಂದಿತು ಎಂದು ಹೇಳಬಹುದಾಗಿದೆ.

ವ್ಯವಸಾಯ ಪ್ರಮುಖ ಕಸುಬಾದ ಕಾರಣ ಇಲ್ಲಿನ ಜನರು ತಮ್ಮ ಬಿಡುವಿನ ವೇಳೆಯಲ್ಲಿ ಮನೋರಂಜನೆಗಾಗಿ ಈ ಕಲೆಯನ್ನು ಕಲಿತು ಬೆಳೆಸುತ್ತಾ ಬಂದಿದ್ದಾರೆ.

ಪ್ರಾರಂಭದಲ್ಲಿ ಬರಿ ಮನೋರಂಜನೆಗಾಗಿ ಇದ್ದ ಈ ಕಲೆ ದಿನಕಳೆದಂತೆ ಜನರ ಉತ್ಸಾಹ, ಪ್ರೇರಣೆಗಳಿಂದ ಅದ್ಭುತ ಕಲೆಯಾಗಿ ರೂಪುಗೊಂಡಿತು. ಕೆಲವರಿಗೆ ಇದು ಹವ್ಯಾಸವಾಗಿ, ಕೆಲವರಿಗೆ ವೃತ್ತಿಯಾಗಿ ಈ ಕಲೆ ಇಂದಿಗೂ ಉಳಿದು ಕೊಂಡಿದೆ.

ಮೊದಲು ಬಿಡುವಿನ ವೇಳೆಯಲ್ಲಿ ತಮ್ಮ ಸಂತೋಷಕ್ಕೆ ಹಾಡುತ್ತಾ ಕುಣಿಯುತ್ತಿದ್ದ ಜನರು ದಿನ ಕಳೆದಂತೆ ಅದರಲ್ಲಿ ತೀವ್ರವಾದ ಉತ್ಸಾಹ ಮೂಡಿ ವೇಷ ಭೂಷಣ, ಅಲಂಕಾರ, ರಂಗಮಂಚ, ಬೆಳಕಿನ ವ್ಯವಸ್ಥೆ ಪ್ರತಿಯೊಂದರಲ್ಲೂ ಮರುಹುಟ್ಟು ಪಡೆದು ಜನರ ಮೆಚ್ಚಿನ ಕಲೆಯಾಯಿತು. ೧೯೨೦-೧೯೨೨ ರ ಸುಮಾರು **ಅಕ್ಕಸಾಲಿ ಷಣ್ಮುಕಪ್ಪ** ಎಂಬುವವರೇ ಸಂಡೂರಿನಲ್ಲಿ ಬಯಲಾಟದಲ್ಲಿ ಪರಿಣಿತಿ ಹೊಂದಿದ ವ್ಯಕ್ತಿ ಯಾಗಿದ್ದರು ಎಂಬುದು ಸರಾಯದ ತಿಪ್ಪೇಸ್ವಾಮಿ ಯವರ ಹೇಳಿಕೆ ಇದಕ್ಕೂ ಮೊದಲಿದ್ದ ಕಲಾವಿದರ ಬಗ್ಗೆ ಹಲವಾರು ಸಂದರ್ಶನ, ಅನ್ವೇಷಣೆಯಿಂದ ನನಗೆ ತಿಳಿದು ಬಂದಿಲ್ಲ. ಸಂಡೂರಲ್ಲಿ ಅತೀ ಹಿರಿಯ ಕಲಾವಿದರಾದ ತಿಪ್ಪೇಸ್ವಾಮಿ ಯವರ ಹೇಳಿಕೆಯಲ್ಲಿ ಅಕ್ಕಸಾಲಿಷಣ್ಮುಕಪ್ಪ, ದಾಸರಹನುಮಂತಪ್ಪ, ಕಮ್ಮಾರಸುಬ್ಬಣ್ಣ ಅಂದಿನ ಕೆಲವು ಬಯಲಾಟ ಕಲಾವಿದರಾಗಿದ್ದು ಅವರಲ್ಲಿ **ಅಕ್ಕಸಾಲಿಷಣ್ಮುಕಪ್ಪ ಕಥಾನಾಯಕ** ನಾಗಿದ್ದು ಈ ಕಲೆಯನ್ನು ಎಲ್ಲರಿಗೂ ಧಾರೆಯೆರೆದ ಗುರುವಾಗಿದ್ದಾರೆ.

ಬಯಲಾಟಗಳ್ನು ಪ್ರತಿಯೊಂದು ಕೇರಿಯಲ್ಲಿ ತಮ್ಮತಮ್ಮಲ್ಲಿ ಅಭ್ಯಾಸಮಾಡಿ ಆಡುತ್ತಿದ್ದರು. ಕಥಾನಾಯಕ ಆದವನು ಉತ್ಸಾಹಿಯುವಕರನ್ನು ಅವರ ಮೈಕಟ್ಟು, ಎತ್ತರ, ಬಣ್ಣ ಅನುಗುಣವಾಗಿ ಪಾತ್ರಗಳನ್ನು ನೀಡಿ ಅವರಿಗೆ ಕಥೆ ತಿಳಿಸಿ ಅವರವರ ಮಾತುಗಳನ್ನು ಪ್ರತಿರಾತ್ರಿ ಒಂದೆರಡು ಘಂಟೆ ಅಭ್ಯಾಸ ಮಾಡಿಸುತ್ತಿದ್ದರು. ನಿಗದಿ ಪಡಿಸಿದ ದಿನಾಂಕದಂದು ಎಲ್ಲಾ ರೀತಿಯ ವ್ಯವಸ್ಥೆಯೊಂದಿಗೆ ರಾತ್ರಿ ೧೦ ರಿಂದ ಬೆಳಗಿನ ವರೆಗೆ ಆಟ ಆಡುತ್ತಿದ್ದರು.

ಬಯಲಾಟಗಳ ಸಾಂಸ್ಕೃತಿಕ ಹಿನ್ನೆಲೆ

ಸಂಡೂರಿನ ಬಯಲಾಟಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದಾಗ ಸಾಂಸ್ಕೃತಿಕ ಹಿನ್ನೆಲೆಯನ್ನು ಇಲ್ಲಿನ ವೈಯಕ್ತಿಕ, ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಳಲ್ಲಿ ಕಂಡುಕೊಳ್ಳಬೇಕು. ಮಾನವ ತಮ್ಮ ಅನುಕೂಲಕ್ಕಾಗಿ ಕುಟುಂಬ, ಸಮಾಜ, ರೀತಿ ರಿವಾಜು, ಧರ್ಮಗಳನ್ನು ರೂಪಿಸಿಕೊಂಡನು. ಅಂತೆಯೇ ಆ ರೀತಿ ರಿವಾಜುಗಳಲ್ಲಿ ಹಲವು ಆಚರಣೆಗಳು ಮಾನವನ ಸಂಸ್ಕೃತಿಯನ್ನು ತೋರಿಸುತ್ತವೆ.

ಬಯಲಾಟದ ಕಥೆಗಳಲ್ಲಿ ಈ ಸಂಸ್ಕೃತಿಯನ್ನು ನಾವು ಕಾಣಬಹುದು. **'ದುಷ್ಟ ಶಿಕ್ಷೆ ಮತ್ತು ಶಿಷ್ಟ ರಕ್ಷೆ'** ಎಂಬ ಸರಳ ಸೂತ್ರಕ್ಕೆ ಸಂಬಂಧವಾಗಿ ಬಯಲಾಟ ಕಥೆಗಳು ಒಂದು ಸಮಾಜದ ಸಂಸ್ಕೃತಿಯನ್ನು ಎತ್ತಿಹಿಡಿಯುತ್ತವೆ. ಇಲ್ಲಿ ಕಲಾವಿದ ತನ್ನ ಪಾತ್ರ ಮತ್ತು

ಅಭಿನಯದ ಮೂಲಕ ಜನರ ಮೇಲೆ ಪ್ರಭಾವ ಬೀರುತ್ತಿರುತ್ತಾನೆ. ಇಲ್ಲಿ ಆತನ ಸಂಸ್ಕೃತಿ ವ್ಯಕ್ತವಾಗುತ್ತದೆ. ಆತ ತನ್ನ ವೈಯಕ್ತಿಕ ಜೀವನದಲ್ಲಿ ಏನೇ ಆಗಿದ್ದರೂ ಪಾತ್ರ, ಅಭಿನಯ ಸಂದರ್ಭದಲ್ಲಿ ಒಳ್ಳೆಯವನಂತೆ ಸುಸಂಸ್ಕೃತನಂತೆ ಪ್ರಭಾವಿಸುತ್ತಾನೆ. ಅಲ್ಲಿ ತನ್ಮಯನಾಗಿ ತನ್ನ ಪಶುತ್ವ ಮರೆಯುತ್ತಾನೆ.

ಇಲ್ಲಿನ ಧಾರ್ಮಿಕ ಆಚರಣೆಗಳಾದ ಹಬ್ಬ, ಹರಿದಿನ ಉತ್ಸವ, ಜಾತ್ರೆಗಳ ಸಂದರ್ಭದಲ್ಲಿಯೇ ಈ ಕಲೆಯ ಪ್ರದರ್ಶನ ಹೆಚ್ಚಾಗಿ ನಡೆಯುತ್ತಿತ್ತು. ಆದಕಾರಣ ಧಾರ್ಮಿಕ ಸಂದರ್ಭವೇ ಈ ಕಲೆಯ ಅಡಿಪಾಯಕ್ಕೆ ಕಾರಣ. ಇಂಥ ಸಂದರ್ಭಗಳಲ್ಲಿ ಊರಿಗೆಊರೇ ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ಧಾರ್ಮಿಕ ಆಚರಣೆಗಳಾದ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಿತ್ತು. ಅಂತಹ ಸಂದರ್ಭಗಳಲ್ಲಿ ವರ್ಷಕ್ಕೆ ಒಂದು ಇಲ್ಲವೇ ಎರಡು ಬಾರಿ ಈ ಕಲೆಗಳು ಪ್ರದರ್ಶನ ಗೊಳ್ಳುತ್ತಿದ್ದವು. ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೇ ಜಾನಪದ ರಂಗಭೂಮಿ ಬೆಳೆದು ಬಂದಿರುವ ಕಾರಣ ಈ ಬಯಲಾಟಗಳೂ ಸಂಡೂರಿನಲ್ಲಿ ಇಂಥ ಹಲವು ಕಾರಣ ಪ್ರಭಾವಗಳೊಂದಿಗೆ ಮೂಡಿ ಬಂದಿದೆ. ಬಯಲಾಟಗಳು ಸಂಸ್ಕೃತಿಗೆ ಆಕಾರ ಕೊಡುತ್ತವೆ. ಇವು ಗಂಭೀರವಾದ ಕಲೆಯೊಂದಿಗೆ ಹೋಲಿಸುವಷ್ಟು ಸಮರ್ಥವಾಗಿವೆ.

ಸಂಡೂರಿನಲ್ಲಿ ಈ ಮೊದಲೇ ತಿಳಿಸಿರುವಂತೆ ಹಬ್ಬ ಹುಣ್ಣಿಮೆ ಜಾತ್ರೆ ಸಂದರ್ಭದಲ್ಲಿ ಹೆಚ್ಚಾಗಿ ಬಯಲಾಟಗಳು ಪ್ರದರ್ಶನ ಗೊಳ್ಳುತ್ತವೆ. ಭರತ, ಹೋಳಿಹುಣ್ಣಿಮೆ, ಯುಗಾದಿ, ಶಿವರಾತ್ರಿ, ಕಾರಹುಣ್ಣಿಮೆ, ಉಡಸಲಮ್ಮ, ಊರಮ್ಮನಜಾತ್ರೆ, ಕುಮಾರಸ್ವಾಮಿ, ನರಸಿಂಹಸ್ವಾಮಿಜಾತ್ರೆ, ಗಣೇಶಹಬ್ಬ ಸಂದರ್ಭ ಶ್ರಾವಣದ ವಿಶೇಷ ದಿನಗಳಂದು ಬಯಲಾಟಗಳನ್ನು ಆಡುವುದುಂಟು. ಹಾಗೇ ಆಯಾ ಸಂದರ್ಭಕ್ಕೆ ತಕ್ಕಂತೆ ಆಟಗಳನ್ನು ಆಡುತ್ತಾರೆ. ಇವು ಭಕ್ತಿಪ್ರಧಾನವೂ, ಮನೋರಂಜನೀಯವೂ, ಗಂಭೀರವೂ ಆಗಿರುತ್ತವೆ.

ಸಂಸ್ಕೃತಿಯ ಒಂದು ಅಂಗವಾಗಿರುವ ಈ ಬಯಲಾಟಗಳಲ್ಲೂ ಆರಂಭದಿಂದ ಕೊನೆಯ ವರೆಗೂ ಒಂದೊಂದು ನಂಬಿಕೆ-ಆಚರಣೆ ಇದ್ದು ಇವೆಲ್ಲಾ ಸಂಸ್ಕೃತಿಯ ಪ್ರತೀಕವಾಗಿವೆ, ವೈಶಿಷ್ಟತೆಯಾಗಿವೆ.

೧. ಅಟ್ಟವನ್ನು (ರಂಗಮಂಚ) ಸಿದ್ಧ ಪಡಿಸಿದ ನಂತರ ಚಮ್ಮಾರನ ಚಪ್ಪಲಿಯ ನೀರು ಸಿಂಪಡಿಸುತ್ತಾರೆ ಕಾರಣ ಪಾತ್ರಧಾರಿಗಳಿಗೆ ಆಗದವರು, ಶತೃಗಳು ಮಾಟ, ಕೈಚಳಕವೇನಾದರೂ ಮಾಡಿದರೆ ಅದು ಯಾವುದೇ ಪರಿಣಾಮ ವಾಗದಂತೆ ತಡೆಯುತ್ತದೆ. ಪಾತ್ರಧಾರಿಗೇನಾದರೂ ಅನಾಹುತವಾದರೆ ಆಟ ನಿಲ್ಲುವ ಕಾರಣ ಈ ರೀತಿ ಮುಂಜಾಗ್ರತೆ ವಹಿಸುವುದು ಇಲ್ಲಿನ ಕಟ್ಟಾಪದ್ಧತಿ.

೨. ಆಟಕ್ಕೆ ಮೊದಲು ಗಣೇಶನ ಪೂಜೆ ಆಟಕ್ಕೆ ನಡುವೆ ಯಾವುದೇ ವಿಘ್ನವಾಗಬಾರದೆಂದು ಇದನ್ನು ಮಾಡಲಾಗುತ್ತದೆ.

೩. ಆಟವು ದೇವತಾ ಸ್ಥುತಿ ಯೊಂದಿಗೆ ಪ್ರಾರಂಭವಾಗುತ್ತದೆ.

೪. ಪ್ರತಿಯೊಂದು ಪಾತ್ರಗಳು ಅಟ್ಟಕ್ಕೆ ಬಂದಾಗ ನಿಂಬೆ ಹಣ್ಣು, ಕಾಯಿ, ನಿವಾಳಿಸಿ ದೃಷ್ಟಿತೆಗೆಯಲಾಗುತ್ತದೆ. (ಕುಂಬಳಕಾಯಿಯನ್ನು ಬಳಸುತ್ತಾರೆ)

೫. ಆಟದಲ್ಲಿ ಮದುವೆ, ಸಂಸ್ಕಾರ, ಸಾಮಾಜಿಕ ಕಳಕಳಿ ವಿಚಾರ ಬಂದಾಗ ಕ್ರಮಬದ್ಧ ರೀತಿಯಿಂದ ನಡೆಸುತ್ತಾರೆ. ಈ ಕ್ರಿಯೆಗಳಿಗೆ ಸಂಬಂಧಿಸಿದಂತೆ ಯಾವುದೇ ತಪ್ಪು, ಪ್ರಮಾದಗಳು ನಡೆಯದಂತೆ ಎಚ್ಚರ ವಹಿಸುತ್ತಾರೆ.

೬. ರಾಕ್ಷಸ ಪಾತ್ರಗಳ ಆಗಮನ ಸಂದರ್ಭದಲ್ಲಿ ಪಂಜು ಹಿಡಿದು ಹಲಗೆ ವಾದ್ಯ ಪಟಾಕಿ ಭಯ ತರುವಂಥ ಕೇಕೆ ಯೊಂದಿಗೆ ಅಟ್ಟಕ್ಕೆ ಕರೆ ತರಲಾಗುತ್ತದೆ.

೭. ಆಟದ ಮುಕ್ತಾಯವೂ ಬೆಳಗಿನ ಜಾವದಲ್ಲಿ ವಿಧಿವತ್ತಾಗಿ ನಡೆಯತ್ತವೆ. ರಂಗದೇವತೆಯ ಮುಂದೆ ಮಂಗಳಾರತಿ ಹಾಡಿ ಮಂಗಳಾರತಿ ಯೊಂದಿಗೆ ಮುಗಿಸುತ್ತಾರೆ. ನಂತರ ಊರಿನ ದೇವರ ಗುಡಿಗೆ ಹೋಗಿ ಪೂಜೆ ಮಾಡಿಸಿ ಮಂಗಳಾರತಿ ಕಾಯಿ, ಕರ್ಪೂರ, ಮಾಡಿಸಿದ ನಂತರ ವೇಷ ಕಳಿಯಲಾಗುತ್ತದೆ.

ಇಂತಹ ಆಚರಣೆ, ಚೌಕಟ್ಟು, ನಿಯಮಗಳು ಬಹಿರಂಗ ಪೂಜೆ ಒಳಗೊಂಡ ಬಯಲಾಟವು ಸಂಸ್ಕೃತಿಯ ಪ್ರತೀಕವಾಗಿದೆ.

೮. "ದಕ್ಷಬ್ರಹ್ಮ" ಬಯಲಾಟ ಕಥೆಯನ್ನು ಆಡಿದರೆ ತಪ್ಪದೇ ಗಿರಿಜಾ ಕಲ್ಯಾಣ ಕಥೆ ಆಡಬೇಕು ಇಲ್ಲದಿದ್ದರೆ ಊರಿಗೆ ಬರ ಬರುತ್ತದೆ ಎಂಬ ನಂಬಿಕೆ ಕೂಡ ಇಲ್ಲಿ ಇದೆ.

ಬಯಲಾಟಕ್ಕೆ ರಾಜ ಮನೆತನದವರ ಪ್ರೋತ್ಸಾಹ

೧೯೨೮ರಲ್ಲಿ ಶ್ರೀ ಯಶವಂತರಾವ್ ಘೋರ್ಪಡೆಯವರು ಅಧಿಕಾರ ವಹಿಸಿಕೊಂಡ ನಂತರ ಸಂಡೂರನ್ನು, ಆರ್ಥಿಕವಾಗಿ, ಸಾಮಾಜಿಕವಾಗಿ ಹಲವಾರು ರೀತಿ ಅಭಿವೃದ್ಧಿ ಗೊಳಿಸಿದರು. ಪ್ರಜೆಗಳಿಂದ ಆರಿಸಲ್ಪಟ್ಟ ಇವರು 'ಪ್ರಜಾಮಂಡಳಿ' ಯನ್ನು ಸ್ಥಾಪಿಸಿದರು. ಮೇಲು ಕೀಳೆನ್ನದೆ ಎಲ್ಲಾ ಜಾತಿಯವರಿಗೆ ದೇವಾಲಯ ಪ್ರವೇಶ ಕಲ್ಪಿಸಿ ಶರಣರತತ್ವವನ್ನು ಜಾರಿಗೆ ತಂದರು. ಸಂಡೂರಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ್ದರು. ಜಾನಪದೀಯತೆ ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡಿದ್ದರು. ಪ್ರತಿಭಾವಂತ ಕಲಾವಿದರನ್ನು ಪ್ರಶಂಸಿದ್ದರು. ಅವರಂತೆಯೇ ಅವರ ಮಗ ಎಂ.ವೈ. ಘೋರ್ಪಡೆಯವರೂ ಕೂಡ ಪ್ರೋತ್ಸಾಹ

ನೀಡಿದರು. ಒಳ್ಳೆಯ ಛಾಯಾ ಚಿತ್ರಕಾರರಾಗಿದ್ದ ಇವರು ಕಲೆ ಮತ್ತು ಕುಶಲ ಕಲೆಗಳ ಉಳಿವಿಗಾಗಿ ಕರಕುಶಲ ಕೇಂದ್ರ ಸ್ಥಾಪಿಸಿದರು.

ಸಂಡೂರಿನ ಬಯಲಾಟಕಲಾವಿದರು ಇವರ ಕೃಪಾಕಟಾಕ್ಷದಿಂದ ಹೊರತಾಗಿಲ್ಲ. ರಾಜಮಹಾರಾಜರನ್ನು ಸಾಮಾನ್ಯವಾಗಿ ಜನರು ದಸರಾಹಬ್ಬದಲ್ಲಿ ಬನ್ನಿ ನೀಡಿ ಶುಭಾಷಯ ಹೇಳುವುದರು ಇಲ್ಲಿನ ಪಾರಂಪರಿಕವಾಗಿ ಬೆಳೆದು ಬಂದ ಸಂಪ್ರದಾಯ. ಘೋರ್ಪಡೆಯವರು ಈ ಕಲಾವಿದರು ಹಬ್ಬದ ದಿನ ಒಂದು ಆಟ ಆಡುವಂತೆ ಹೇಳುತ್ತಿದ್ದರು. ಮತ್ತು ಅದಕ್ಕೆ ಸಂಪೂರ್ಣ ಖರ್ಚನ್ನು ಅವರೇ ನೀಡುತ್ತಿದ್ದರು. ಅದಕ್ಕಾಗಿ ಗಣಪತಿ ಹಬ್ಬ ಮುಗಿದ ನಂತರವೇ ರಂಗ ತಾಲೀಮನ್ನು ಕಲಾವಿದರು ಪ್ರಾರಂಭಿಸುತ್ತಿದ್ದರು. ದಸರಾ ಹಬ್ಬದ ದಿನ ಭರ್ಜರಿಯ ಆಟ ನಡೆಯುತ್ತಿತ್ತು. ಈ ಆಟಕ್ಕೆ ಅರಮನೆಯ ಹತ್ತಿರವಿರುವ ಯಶವಂತವಿಹಾರ ಕ್ಲಬ್ ಮೈದಾನದಲ್ಲಿ ಅಟ್ಟ (ರಂಗಮಂಚ) ನಿರ್ಮಿಸುತ್ತಿದ್ದರು. ರಾತ್ರಿ ೧೦ ಗಂಟೆಗೆ ಪ್ರಾರಂಭವಾಗುವ ಈ ಆಟವನ್ನು ನೋಡಲು ಛಳಿಯಲ್ಲಿಯೂ ಊರಿಗೆ ಊರೇ ಸೇರಿರುತ್ತಿತ್ತು. ಇದರೊಂದಿಗೆ ಅಟ್ಟದ ಎಡಭಾಗ ಅಥವಾ ಬಲಭಾಗದಲ್ಲಿ ರಾಜಪರಿವಾರದವರಿಗೆ ವಿಶೇಷ ಆಸನಗಳನ್ನು ಹಾಕುತ್ತಿದ್ದು ರಾಜ,ರಾಣಿ ಸಂಪೂರ್ಣ ಪರಿವಾರದವರು ಇದನ್ನು ನೋಡಲು ಬರುತ್ತಿದ್ದುರು. ಯಶವಂತರಾವ್ ಘೋರ್ಪಡೆ ಯವರು ಇರುವವರೆಗೂ ಪ್ರತಿ ದಸರಾ ಹಬ್ಬಕ್ಕೆ ಹಣನೀಡಿ ಬಯಲಾಟಗಳನ್ನು ಆಡಿಸುತ್ತಿದ್ದರು. ಮೆಚ್ಚಿಗೆ ಯಾದ ಪಾತ್ರಗಳಿಗೆ ವಿಶೇಷ ಬಹುಮಾನ ನೀಡುತ್ತಿದ್ದರು. ಅವು ಹೆಚ್ಚಾಗಿ ಉಡುಗೆ ತೊಡುಗೆಗಳು ಅಥವಾ ಹಣದ ರೂಪದಲ್ಲಿರುತ್ತಿದ್ದವು.

ಪಿಂಜಾರ್ ಸುಲ್ತಾನ್ ಸಾಬ್ ಅವರು ತಮ್ಮ ಓಣಿ (ಪಿಂಜಾರ್ ಓಣಿ) ಯಲ್ಲಿ "ಬಾಲಸುಬ್ರಮಣ್ಯ ಬಯಲಾಟ ಮಂಡಳಿ" ಪಿಂಜಾರಿ ಓಣಿ ಎಂಬ ಸಂಘ ಸ್ಥಾಪಿಸಿದ್ದು ಈ ಸಂಘಕ್ಕಾಗಿ ಯಶವಂತರಾವ್ ಘೋರ್ಪಡೆಯವರು ಹಣ ನೀಡುತ್ತಿದ್ದರು.

೧೯೪೨ ರಲ್ಲಿ ಅರಮನೆಕಟ್ಟಿಸಿದ ನಂತರ ಅದರ ಗೃಹ ಪ್ರವೇಶದಂದು ಬಯಲಾಟ ಪ್ರದರ್ಶನ ಏರ್ಪಡಿಸಲಾಗಿತ್ತು. ಅಂದು ಆಡಿದ ಕಥೆ "ಹೇಮರೆಡ್ಡಿ ಮಲ್ಲಮ್ಮ"ನದ್ದಾಗಿತ್ತು. ಆ ಆಟದಲ್ಲಿ ಸಂಡೂರಿನ ಹಿರಿಯ ಕಲಾವಿದ ಸರಾಯದ ತಿಪ್ಪೆಸ್ವಾಮಿ ಹೇಮರೆಡ್ಡಿ ಮಲ್ಲಮ್ಮನ ಪಾತ್ರ ಮಾಡಿದ್ದರು. ಹೆಣ್ಣು ಪಾತ್ರ ಮಾಡುವಲ್ಲಿ, ಒನಪು ವೈಯಾರದಲ್ಲಿ, ಸ್ತ್ರೀಯರನ್ನು ಮೀರಿಸುವ ಸಾಮರ್ಥ್ಯ ಅವರದಾಗಿದ್ದು, ಅರಮನೆಯ ಗೃಹ ಪ್ರವೇಶದಂದು ಆಡಿದ ಹೇಮರೆಡ್ಡಿ ಮಲ್ಲಮ್ಮನ ಪಾತ್ರಕ್ಕೆ ಮೆಚ್ಚಿದ ಸುಶಿಲಾದೇವಿ ಘೋರ್ಪಡೆ ಯವರು ಸರಾಯದ ತಿಪ್ಪೇಸ್ವಾಮಿ ಯವರಿಗೆ ಉಡುಗೊರೆ ನೀಡಿದರು. ಅಂದು ಆ ಪಾತ್ರಕ್ಕೆ ಧರಿಸಿದ ಬಳೆಗಳು ಬಹಳ ಹಳೆಯವಾಗಿದ್ದು ಅಷ್ಟು ಸರಿಯಾಗಿ ಇರದ ಕಾರಣ ಮಾರನೆ ದಿನವೇ ರಂಗುರಂಗಿನ ಪ್ಲಾಸ್ಟಿಕ್ ಸ್ಪ್ರಿಂಗ್‌ಗಳನ್ನು ಹೊಸದಾಗಿ ಅವರ ಸಂಘಕ್ಕೆಂದೇ ತರಿಸಿಕೊಟ್ಟರು.

ಹೀಗೆ ರಾಜಕೀಯ ಪರಿಸರದಲ್ಲಿ ಈ ಕಲೆಗಳು ಪ್ರೋತ್ಸಾಹಪಡೆದಿದ್ದವು. ನಂತರದ ದಿನಗಳಲ್ಲಿ ಸಂಡೂರು ಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆ ಈ ಕಲೆಗಳನ್ನು ಉಳಿಸಿ ಬೆಳೆಸುವುದರಲ್ಲಿ ತನ್ನ ಕೆಲಸ ನಿರ್ವಹಿಸುತ್ತಿದೆ. ಇಂದು ಬಳ್ಳಾರಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿಯ ಸೆಂಟ್ರಲ್ ಲೈಬ್ರರಿ ಆವರಣದಲ್ಲಿದ್ದು ಅದರ ಉಸ್ತುವಾರಿ ವಹಿಸಿರುವ ಸಂಡೂರಿನ ಚೋರುನೂರು ಕೊಟ್ರಪ್ಪ ಇವರು ಇಂಥ ಹಲವು ಕಲಾವಿದರನ್ನು ಜಿಲ್ಲೆಯ ಹಲವಾರು ಕಡೆಗಳಲ್ಲಿ ಗುರುತಿಸಿ ಅವರಿಗೆ ಮಾಶಾಸನ ಬರುವಂತೆ ಮಾಡಿ. ಅಂತರಾಷ್ಟ್ರೀಯ, ರಾಷ್ಟ್ರೀಯ ಮಟ್ಟದಲ್ಲಿ ಕಲಾಮೇಳಗಳು ನಡೆದಲ್ಲಿ ಸರ್ಕಾರದ ವತಿಯಿಂದ ಅವರನ್ನು ಕಳುಹಿಸಿ ಪ್ರದರ್ಶನ ನೀಡುವ ವ್ಯವಸ್ಥೆ ಮಾಡಿದ್ದಾರೆ. ಸರಳಜೀವಿ, ಸಮಾಧಾನ ಚಿತ್ತರಾದ ಇವರು ಈ ಹಿನ್ನಲೆಯಲ್ಲಿ ಬಳ್ಳಾರಿಯ ಕಲೆ ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನ ಹೊಂದಿದ್ದು ಅವುಗಳ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಈ ಕುರಿತು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಇದರತ್ತ ಒಲವನ್ನು ಆರಸಿಬರುವ ಜನಸ್ತೋಮಕ್ಕೆ ಆದರದ ಸ್ವಾಗತವನ್ನು ಮಾಹಿತಿಯನ್ನೂ, ಪ್ರೋತ್ಸಾಹವನ್ನೂ ನೀಡುತ್ತಿದ್ದಾರೆ. ಪ್ರಸ್ತುತ ಬಳ್ಳಾರಿಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಡೂರಲ್ಲಿರುವ ಇತರೆ ಕಲೆಗಳು

ಪ್ರದರ್ಶನ ಕಲೆ ಜನಪದ ಕಲೆಗಳ ಜೀವಧಾತು. ಜನಪದರ ಮನಸ್ಸಿನ ಭಾವನೆಗಳಿಂದ ಮೂಡಿ, ಜನಪದ ವೃಂದದ ಮನಸ್ಸಿನ ಭಾವನೆಗಳನ್ನು ಸ್ಪಂದಿಸಿ ಉದ್ದೀಪನಗೊಳಿಸಿ ಚೈತನ್ಯಪೂರ್ಣವನ್ನಾಗಿ ಮಾಡುವ ಜನಪದದ ಪ್ರದರ್ಶನ ಕಲೆ ಅತ್ಯಂತ ಪ್ರಾಚೀನವಾದುದಾಗಿದೆ. ಆದ್ದರಿಂದಲೆ ಹಿಂದೆ ಜನಪದರ ಜೀವನ ಮತ್ತು ಕಲೆಗಳ ಸಂಬಂಧ ಬೇರ್ಪಡಿಸಲಾಗದ ಸಾವಯವ ಸಂಬಂಧವಾಗಿದೆ. ಸಂಗೀತ, ನೃತ್ಯ ಮತ್ತು ಅಭಿನಯಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸೇರಿರುವ ಕಲೆಗಳನ್ನು ಪ್ರದರ್ಶನ ಕಲೆಗಳೆನ್ನುತ್ತಾರೆ. ಈ ತಾಲ್ಲೂಕಿನಲ್ಲಿ ಕಂಡುಬರುವ ಪ್ರದರ್ಶನ ಕಲೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ತೊಗಲುಗೊಂಬೆ ಆಟಗಾರರು

ತೊಗಲುಗೊಂಬೆ ಅತೀ ಪುರಾತನವಾದ ಒಂದು ಕಲ್ಪನೆ. ಇದರ ಹೆಸರೇ ಹೇಳುವಂತೆ ಚರ್ಮದಿಂದ ಮಾಡಿದ್ದು, ಮರಾಠಿ ಭಾಷೆಯಲ್ಲಿ ಈ ಆಟವನ್ನು 'ಕಿಲ್ಲಾಭಾವಿ ಖೇಲ್' ಎನ್ನಲಾಗುತ್ತದೆ. ಕಿಲ್ಲೆ (Wood bork or leaf or papers) ನಿಂದ ಮಾಡಿದ ಭಾವಲಿ (ಗೊಂಬೆಗಳ) ಖೇಲ (ಆಟ) ಎಂಬುದು ಇದರ ಅರ್ಥ. ಈ ತೊಗಲುಗೊಂಬೆ ವಿಶಿಷ್ಟವಾದ ಕಲಾಕೃತಿಯಾಗಿದ್ದು, ಇದನ್ನು ತೆಳುವಾದ ಪಾರದರ್ಶಕ ಬಿಳಿಯ ಪರದೆಯ ಮೇಲೆ ಚರ್ಮದ ಗೊಂಬೆಗಳಿಂದ ಆಡಿಸುವರು. ಈ ಕಲೆಯು ಒಬ್ಬ ವ್ಯಕ್ತಿಯಿಂದ ನಿರ್ಮಾಣಗೊಳ್ಳದೇ

ಕುಟುಂಬದ ಎಲ್ಲಾ ಜನರು ಈ ತೊಗಲುಗೊಂಬೆಯಾಟದ ಕಲೆಯಲ್ಲಿ ಭಾಗವಹಿಸುತ್ತಾರೆ. ಕರ್ನಾಟಕದಲ್ಲಿ ಇವರನ್ನು 'ಕಿಳ್ಳೇಕ್ಯಾತರು' ಎನ್ನುವರು. ಸಂಡೂರು ತಾಲ್ಲೂಕಿನಲ್ಲಿ ಕಂಡುಬರುವ ಈ ತೊಗಲುಗೊಂಬೆ ಆಟಗಾರರ ಬಗ್ಗೆ ಇಲ್ಲಿ ಗಮನಿಸಲಾಗಿದೆ.

ಸಂಡೂರು ತಾಲ್ಲೂಕಿನಲ್ಲಿ ತೊಗಲುಗೊಂಬೆಯ ಆಟವನ್ನಾಡಿಸುವ ಕಲಾವಿದರು ಕಂಡು ಬಂದರೂ ಸಹ ಅವರೇ ಸ್ವತಃ ತೊಗಲುಗೊಂಬೆಗಳನ್ನು ಹೊಂದಿಲ್ಲ. ಆದರೆ ಈ ಜಿಲ್ಲೆಯ ತೋಗಲುಗೊಂಬೆ ಆಟವನ್ನು ಪ್ರದರ್ಶಿಸುವುದರಲ್ಲಿ ಪ್ರಖ್ಯಾತರಾದ ಬೆಳಗಲ್ಲ ವೀರಣ್ಣನವರ ಜೊತೆಗೂಡಿ ಇವರು ಸಹ ತೊಗಲುಗೊಂಬೆ ಆಟವನ್ನು ಆಡಿಸಬಲ್ಲವರಾಗಿದ್ದಾರೆ. ಅವರುಗಳಲ್ಲಿ ಸಣ್ಣರಾಮಪ್ಪ, ಯರ್ರಿಸ್ವಾಮಿ, ಜಯಂತಪ್ಪ, ತಿಪ್ಪೇಸ್ವಾಮಿ, ಮೊದಲಾದವರು.

ಬುರ್ರಾಕಥಾ ಕಲೆ

ಬುರ್ರಾ ಎಂದರೆ ತಂಬೂರಿ, ತಂಬೂರಿ ವಾದ್ಯ ನುಡಿಸುತ್ತ ಸಹಕಲಾವಿದರೊಂದಿಗೆ ಕಾವ್ಯ ಹಾಡುವುದು ಈ ಕಲೆಯ ವೈಶಿಷ್ಟ್ಯತೆ. ಜಾನಪದ ಆಶಯವಿರುವ ಹಾಗೂ ಜನ ಪರವಾಗಿ ಮೂಡಿಬರುವ ಕಲೆ ಇದು.

ಬುರ್ರಾಕಥಾ ಈರಮ್ಮ ಎಂದು ಗುರುತಿಸಲ್ಪಡುವ ಇವರು ಸಂಡೂರು ತಾಲ್ಲೂಕಿನ ಹಳೆದರೋಜಿಯವರು. ಇವರು ಅಲೆಮಾರಿ ಬುಡ್ಗ ಜಂಗಮ ಜಾತಿಯವರು. ಅದ್ವಿತೀಯ ಜಾನಪದ ಕಲಾವಿದೆಯಾಗಿರುವ ಇವರು ಇಲ್ಲಿಯವರೆಗೆ ಸು. ೭೦೦೦ ಪುಟಗಳಷ್ಟಾಗುವ ೨ ಲಕ್ಷ ಸಾಲುಗಳ, ೧೨ ಜನಪದ ಮತ್ತು ಬುಡಕಟ್ಟು ಮಹಕಾವ್ಯಗಳನ್ನು ನಿರರ್ಗಳವಾಗಿ ಹಾಡಿರುವ ಶ್ರೀಮಂತ ಕಲಾವಿದೆಯಾಗಿ ಹೆಸರು ಗಳಿಸಿರುವ ಇವರು ಮುಖ್ಯವಾಗಿ ಗ್ರಾಮಗಳ ಹೊರಗಿನ ಗುಡಾರ ನಿವಾಸಿಯಾಗಿ ಜೀವಿಸುತ್ತಿರುವುದು ಖೇದದ ಸಂಗತಿಯಾಗಿದೆ.

ಇವರು ತಂದೆ, ತಾಯಿಗಳಿಂದ ಬುರ್ರಾಕಥೆಗಳನ್ನು ಹಾಡಲು ಮತ್ತು ತಂಬೂರಿ, ಡಿಮ್ಕಿ, ಗಗ್ಗರ ಮುಂತಾದ ಬುರ್ರಾವಾದ್ಯಗಳನ್ನು ನುಡಿಸಲು ಕಲಿತಿದ್ದಾರೆ. ಕನ್ನಡ, ತೆಲುಗು, ಬುಡ್ಗ, ಹಿಂದಿ ಭಾಷೆಗಳನ್ನು ಮಾತನಾಡುವ ಈರಮ್ಮನವರು ಸಹಿ ಮಾಡುವಷ್ಟು ಮಾತ್ರ ವಿದ್ಯೆ ಕಲಿತಿದ್ದಾರೆ. ಇವರು ಹಾಡಿರುವ ೩ ಮಹಾಕಾವ್ಯಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದೆ.

೧. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ

೨. ಸ್ಯಾಸಿ ಚಿನ್ನಮ್ಮನ ಕಾವ್ಯ

೩. ಎಲ್ಲಮ್ಮನ ಕಾವ್ಯ

ಉಳಿದಂತೆ ಬಬ್ಬುಲಿ ನಾಗಿರೆಡ್ಡಿ, ಆದೋನಿ ಲಕ್ಷಮ್ಮನ ಕಾವ್ಯ, ಬಾಲ ನಾಗಮ್ಮನ ಕಾವ್ಯ, ಬಲಿಚಕ್ರವರ್ತಿ ಕಾವ್ಯ, ಮಾರವಡಿ ಸೇರಿಕಾವ್ಯ, ಜೈಸಿಂಗ್‌ರಾಜ ಮತ್ತು ಮಹಮದ್ ಖಾನರ ಕಾವ್ಯ ಇವುಗಳು ಪ್ರಕಟಣೆಗೊಳ್ಳಬೇಕಾಗಿದೆ.

ಬಳ್ಳಾರಿ, ದಾವಣಗೆರೆ, ಕೊಪ್ಪಳ, ರಾಯಚೂರು ಹೀಗೆ ನಾಡಿನಾದ್ಯಂತ ಹಲವಾರು ಗ್ರಾಮ ಮತ್ತು ನಗರಗಳಲ್ಲಿ ಬುರ್ರಾಕಥೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಪ್ರಿಯರಾಗಿದ್ದಾರೆ. ಕಲಾಮೇಳ, ಸಾಂಸ್ಕೃತಿಕ ಉತ್ಸವ, ಬುಡಕಟ್ಟು ಉತ್ಸವ, ಜಾನಪದ ಉತ್ಸವ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಹೀಗೆ ವಿವಿಧ, ಕಲಾ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಈರಮ್ಮನ ಕಲಾಸಾಧನೆಯನ್ನು ಗುರ್ತಿಸಿರುವ ಸಂಘ ಸಂಸ್ಥೆ, ಅಕಾಡೆಮಿ ಮತ್ತು ಸರ್ಕಾರಗಳು ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

೧. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೯)

೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (೨೦೦೩)

೩. ಕರ್ನಾಟಕ ಸರ್ಕರದಿಂದ ಅಂಬೇಡ್ಕರ್ ಪ್ರಶಸ್ತಿ (೨೦೦೩)

೪. ಸಂದೇಶ ಪ್ರಶಸ್ತಿ ೨೦೦೪

೫. ನಾಡೋಜ ಪ್ರಶಸ್ತಿ (೨೦೦೬), ಕ.ವಿ.ವಿ. ಹಂಪಿ.

ಇವಷ್ಟೆ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೀಗೆ ಹಲವಾರು ಸಾಂಸ್ಕೃತಿಕ, ಸಾಹಿತ್ಯಿಕ, ರಾಜಕೀಯ ಸಂಘ, ಸಂಸ್ಥೆಗಳಿಂದ ನಾಗರಿಕ ಸನ್ಮಾನಗಳು, ಪ್ರಶಸ್ತಿಗಳು, ಪ್ರಶಂಸನೀಯ ಪತ್ರಗಳು ಲಭಿಸಿವೆ. ೪೫ ವರ್ಷ ವಯಸ್ಸಿನ ಈರಮ್ಮ ತನ್ನ ಸಹ ಕಲಾವಿದರಾದ ಶ್ರೀಮತಿ ಶಿವಮ್ಮ, ಶ್ರೀಮತಿ ಪಾರ್ವತಮ್ಮನವರೊಂದಿಗೆ ಈಗಲೂ ತಮ್ಮ ಕಲೆಯನ್ನು, ಅಲೆಮಾರಿ ಜೀವನ ಸಾಗಿಸುತ್ತಾ ಮುಂದುವರೆಸಿದ್ದಾರೆ.

ಸಂಡೂರು ತಾಲ್ಲೂಕಿನ ಹಳೆ ದೋಜಿಯವರಾದ ಪಾರ್ವತಮ್ಮ ಬಿ.ಜಿ.ಯವರು ಬುರ್ರಾಕಥಾ ಈರಮ್ಮನ ಸಹಕಲಾವಿದೆಯಾಗಿದ್ದಾರೆ. ಪಾರ್ವತಮ್ಮನವರು ಬುರ್ರಾಕಥೆಯನ್ನು ಹಾಡುವಾಗ, ಡುಮಿಕಿ ವಾದ್ಯವನ್ನು ನುಡಿಸುತ್ತಾರೆ. ವಂಶಪಾರಂಪರ್ಯವಾಗಿ ಕಲಿತಿರುವ ಈ ಕಲೆಯನ್ನು ಗುರ್ತಿಸಿರುವ ಸಂಘ, ಸಂಸ್ಥೆ, ಅಕಾಡೆಮಿಗಳು ಪ್ರಶಸ್ತಿ ಮತ್ತು ಪ್ರಶಂಸನೀಯ ಪತ್ರಗಳನ್ನು ನೀಡಿ ಗೌರವಿಸಿವೆ. ೨೦೦೩ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿರುವ ಇವರು ಗಡಿನಾಡ ಉತ್ಸವ (೨೦೦೦) ಹಂಪಿ ಉತ್ಸವ (೨೦೦೨)ಗಳಲ್ಲಿ ಭಾಗವಹಿಸಿ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ವಿವಿಧ ಮಾದರಿಯ ಕಲಾ ಪ್ರಕಾರಗಳನ್ನು ತಮ್ಮದಾಗಿಸಿಕೊಂಡಿರುವ ಚಿತ್ರಕಲಾವಿದರು ಈ ತಾಲ್ಲೂಕಿನಲ್ಲಿ ಕಂಡುಬಂದರೂ, ಅವರನ್ನು ಕಾಡುತ್ತಿರವು ಬಡತನ, ಸರಕಾರದ ನಿರ್ಲಕ್ಷತೆ, ಸೌಲಭ್ಯದ ಕೊರತೆಯಿಂದ ವಂಚಿತರಾದ ಈ ಕಲಾವಿದರು ಬೆಳಕಿಗೆ ಬರದಿರುವುದು ಖೇಧದ

ಸಂತಿಯಾಗಿರುವುದು. ಆದರೆ ಇಂತಹ ಕಲಾವಿದರನ್ನು ಮತ್ತು ಕಲಾಪ್ರಕಾರಗಳನ್ನು ಉಳಿಸಿ, ಬೆಳಸಿ, ನಮ್ಮ ಮುಂದಿನ ಪೀಳಿಗೆಗೆ ಇದರ ಜ್ಞಾನ ತಲುಪುವಂತೆ ಮಾಡಬೇಕಾದ ಜವಾಬ್ದಾರಿ ನಮ್ಮದಾಗಬೇಕಿದೆ.

ಸುಮಾರು ೧೯೨೦-೨೨ರಲ್ಲಿ ಮೂಡಿದ ಬಯಲಾಟ (ಸರಾಯದ ತಿಪ್ಪೇಸ್ವಾಮಿ) ಅವರ ಹೇಳಿಕೆಯಂತೆ) ಸಮಾಜದ ಒಂದು ಅಂಗವಾಗಿ ಬೆಳೆದು ಬಂದಿದೆ. ವ್ಯವಸಾಯದ ಬಿಡುವಿನಲ್ಲಿ ಉತ್ಸಾಹಿಯುವಕರು ಹಾಡುತ್ತಾ, ಕುಣಿಯುತ್ತಾ ಇದ್ದರು. ಇದು ಮುಂದೆ ಮಹಾಭಾರತ, ರಾಮಾಯಣ ಕಥೆಗಳ ಭಾಗಗಳನ್ನು ಆಯ್ಕೆಮಾಡಿ ಅದಕ್ಕೊಂದು ರೂಪುಗೊಟ್ಟು ಅದಕ್ಕೆ ಸಾಹಿತ್ಯ ಬರೆದು ಅದರಲ್ಲಿನ ರಸ, ಭಾವ, ಪಾತ್ರಕ್ಕೆ ತಕ್ಕಂತೆ ಮಾರ್ಪಡಿಸಿ ಕಲಿಸುವ ಕಥಾನಾಯಕನನ್ನು ರೂಪಿಸಿತು. ಇದೇ ಉತ್ಸಾಹ ಸಂಗೀತ, ನೃತ್ಯ, ವೇಷಭೂಷಣ, ಅಲಂಕಾರ, ರಂಗ ಮಂಚ ಮೊದಲಾದ ವಿಕಾಸಕ್ಕೆ ದಾರಿ ಮಾಡಿ ಕೊಟ್ಟಿತು.

ಒಂದು ಕಾಲದ ಜನಪದ ನಂಬಿಕೆ, ಆಚರಣೆ ಸಂಪ್ರದಾಯಗಳು ನಂಬಿಕೆಗಳೇ ಕಥಾರೂಪ ಪಡೆದು ಆವರಣ ನಿರ್ಮಿಸಿದವು. ಅವುಗಳೇ ಮಾನವ ಜೀವನದ ಪ್ರಾಯೋಗಿಕ ನಿಯಮ ರೂಪಿಸಿದವು. ಬಯಲಾಟ ಕಥೆಗಳಿಗೆ ಪುರಾಣ, ಪುಣ್ಯ ಕಥೆಗಳೇ ಮೂಲ ಆಕರ. ದೇವರ ಮತ್ತು ಮಾನವರ ಸಂಬಂಧ ಪ್ರೀತಿ, ವೈರತ್ವ, ದೇವ-ರಾಕ್ಷಸರ ಯುದ್ಧ ಮೊದಲಾದವುಗಳೇ ಈ ಕಥೆಗಳು ಮೂಡಲು ಕಾರಣ ಮಾನವನಿಗೆ ದೇವರ ಮೇಲಿನ ಭಕ್ತಿ ಆರಾಧನೆಯೇ ಇವುಗಳು ಹುಟ್ಟಲು ಕಾರಣ.

ಸಂಡೂರು ಚಿಕ್ಕತಾಲ್ಲೂಕು ಆಗಿದ್ದರೂ ಇದು ಎಲ್ಲಾ ಜಾತಿ ಪಂಥ ಬುಡಕಟ್ಟುಗಳನ್ನು ಒಳಗೊಂಡ ಪ್ರದೇಶ. ಪ್ರತಿಯೊಂದು ಸಮುದಾಯವು ತನ್ನದೇ ಆದ ವಿಶೇಷತೆ ಹೊಂದಿದೆ. ಸಂಡೂರಿನ ಸಾಮಾಜಿಕವಾಗಿ ಧಾರ್ಮಿಕವಾಗಿ ಹಲವಾರು ರೀತಿಯ ಜಾತ್ರೆ ಉತ್ಸವಗಳು ನಡೆಯುತ್ತವೆ. ಹಲವು ಹಬ್ಬಹರಿದಿನಗಳೂ ಇವೆ. ಗ್ರಾಮ ದೇವತೆಗಳ ಆರಾಧನೆ ಯಾವುದೇ ಜಾತಿಬೇಧ ವಿಲ್ಲದಂತೆ ನಡೆಯುತ್ತದೆ. ಈ ಸಾಮಾಜಿಕ ಅಂಶಗಳ ಹಿನ್ನಲೆಯಲ್ಲಿ ಬಯಲಾಟಗಳು ಹಲವು ಸಾಂಸ್ಕೃತಿಕ ಚಟುವಟಿಕೆಗಳು ಸಂಡೂರಲ್ಲಿ ಕಾಣಸಿಗುತ್ತವೆ. ಬೊಂಬೆಯಾಟ, ಬುರ್ರಾಕಥಾಕಲೆ, ವಿ.ಟಿ. ಕಾಳೆಯವರ ಚಿತ್ರಕಲೆ ಇಲ್ಲಿನ ಪ್ರಮುಖ ಅಂಶಗಳಾಗಿವೆ.

ಅಧ್ಯಾಯ – ಐದು

ಸಂಡೂರು ಪರಿಸರದ ಬಯಲಾಟದ ವಿಶೇಷತೆಗಳು

ಅಧ್ಯಾಯ - ಐದು

ಸಂಡೂರು ಪರಿಸರದ ಬಯಲಾಟದ ವಿಶೇಷತೆಗಳು

ರಂಗ ಸಜ್ಜಿಕೆಯ ವಿಶೇಷತೆ

೧. ಅಟ್ಟ

೨. ಮಂಟಪ (ಸಭಾ ಮಂಟಪ)

೩. ಪರದೆಗಳು

೪. ಬೆಳಕಿನ ವ್ಯವಸ್ಥೆ

೫. ಮೇಳದವರು

೬. ಧ್ವನಿ

೭. ಪ್ರೇಕ್ಷಕರು ಕುಳಿತು ಕೊಳ್ಳುವ ಸ್ಥಳ

ರಂಗಸಜ್ಜನ್ನು ಮಾಡುವಾಗ ಹೆಚ್ಚುಜನ ಸೇರಲು ಅವಕಾಶ ವಿರುವ ಸ್ಥಳಗಳನ್ನು ಆಯ್ಕೆ ಮಾಡಿ ಕೊಳ್ಳುತ್ತಾರೆ. ದೇವಸ್ಥಾನದ ಹಜಾರದಲ್ಲಿ, ಅಟ್ಟ ಮಾಡಿದರೆ ದೇವಸ್ಥಾನದ ಮುಂದೆ ಪ್ರೇಕ್ಷಕರವರ್ಗ ಕುಳಿತುಕೊಳ್ಳಲು ಸಹಾಯ ವಾಗುತ್ತದೆ. ಸಂಡೂರಿನಲ್ಲಿ ರಾಮಸ್ವಾಮಿದೇವಸ್ಥಾನದ ಹಜಾರ, ವಿಠ್ಠೊಬದೇವಸ್ಥಾನದ ಬಯಲು, ಮಠದಲ್ಲಿ ಪುರಾಣ ಹೇಳುವ ಬಯಲು ಪ್ರದೇಶಗಳು ಆಯ್ಕೆ ಮಾಡಿಕೊಂಡಿರುತ್ತಾರೆ. ಇಂಥ ದಿಕ್ಕಿಗೆ ಮುಖ ಮಾಡಿಕೊಂಡಿರ ಬೇಕೆಂದೇನಿಲ್ಲ. ಪಾತ್ರಗಳ ಆಗಮನ ನಿರ್ಗಮನಕ್ಕೆ ಅನುಕೂಲ, ಮೇಳದವರು ಕುಳಿತುಕೊಳ್ಳಲು ಅನುಕೂಲವಿರುವ ಮತ್ತು ಅಪಾರಪ್ರೇಕ್ಷಕ ವರ್ಗ ಕುಳಿತು ಕೊಳ್ಳಲು ಇರುವ ವಿಶಾಲಬಯಲು ಪ್ರದೇಶವನ್ನು ಆಟಕ್ಕೆ ಆಯ್ಕೆ ಮಾಡುತ್ತಾರೆ.

ಸಂಡೂರಿನಲ್ಲಿ ಪ್ರತಿಯೊಂದು ಓಣಿಯಲ್ಲಿ ಒಂದೊಂದು ತಂಡವಿರುವ ಕಾರಣ ಆ ಓಣಿಯ ವಿಶಾಲ ಪ್ರದೇಶಗಳಲ್ಲಿ ರಂಗಸ್ಥಳ ಆಯ್ಕೆ ಮಾಡಿಕೊಂಡು ಅಟ್ಟ ಹಾಕುತ್ತಾರೆ.

೧. ಅಟ್ಟ

ಇದರ ವಿಸ್ತೀರ್ಣ ೧೪ ಅಡಿ ಉದ್ದ ೮ ಅಡಿ ಅಗಲ ೧೨ ಅಡಿ ಎತ್ತರ ಇರುತ್ತದೆ ಮತ್ತು ನೆಲದಿಂದ ೨. ೧/೨ ಯಿಂದ ೩. ೧/೨ ಅಡಿ ಎತ್ತರ ವಿರುತ್ತದೆ. ಡ್ರಮ್‌ಗಳನ್ನು, ತೆನೆ ಒಡೆಯುವ ಗುಂಡುಗಳನ್ನು ೩-೪ ಅಡಿ ಅಂತರದಲ್ಲಿ ಕುಂಟದಂತೆ ಇಟ್ಟು ಅದರ ಮೇಲೆ ೨. ೧/೨ ಯಿಂದ ೩ ಇಂಚು ದಪ್ಪವಿರುವ ೧ ಅಡಿ ಅಗಲ ೧೪ ಅಡಿ ಉದ್ದ ಹಲಗೆ ಗಳನ್ನು ಸಮಾಂತರದಲ್ಲಿ ಜೋಡಿಸಿ ಸರಿದಾಡದಂತೆ ಹಗ್ಗ ಕಟ್ಟುತ್ತಾರೆ.

ಆಡಬೇಕೆಂದು ನಿರ್ಧರಿಸಿದ ಸ್ಥಳದಲ್ಲಿ ಚೌಕಗೆರೆ ಎಳೆದು ಬಲಗಡೆಯ ಮುಂದಿನ ಸ್ಥಳದಲ್ಲಿ ಕಲ್ಲು ಇಟ್ಟು ಕಾಯಿ ಒಡೆದು ಹೂವು ಗಳಿಂದ ಪೂಜಿಸಲಾಗುತ್ತದೆ. ನಂತರ ಚಮ್ಮಾರನ ಚಪ್ಪಲಿ ಅದ್ದುವ ನೀರನ್ನು ಸಿಂಪಡಿಸಿ ಅದರಲ್ಲಿ ಡ್ರಮ್ ಅಥವಾ ತೆನೆ ಒಡೆಯುವ ಗುಂಡನ್ನು ಜೋಡಿಸಿ ಹಲಗೆ ಜೋಡಿಸುತ್ತಾರೆ.

ಚಮ್ಮಾರನ ಚಪ್ಪಲಿ ಅದ್ದಿದ ನೀರು ಸಿಂಪಡಿಸುವ ಉದ್ದೇಶವೆಂದರೆ ಪಾತ್ರಧಾರಿಗಳಿಗೆ ಆಗದವರು ಶತೃಗಳು ಮಾಟ, ಮಂತ್ರ ಕೈಚಳಕ ಮಾಡಿ ಪಾತ್ರಗಳು ಸೋಲುವಂತೆ, ಪಾತ್ರಗಳು ಡೈಲಾಗ್ ಹೇಳದಂತೆ ಅಥವಾ ಪಾತ್ರಗಳಿಗೆ ಅಭಿನಯ ಸಂಧರ್ಭದಲ್ಲಿ ತೊಂದರೆ ಉಂಟಾಗಿ ಆಟ ಕೆಡುವಂತೆ ಮಾಡುತ್ತಾರೆ. ಈ ಚಪ್ಪಲಿ ಅದ್ದಿದ ನೀರು ಸಿಂಪಡಿಸಿ ಕಾಯಿಯಿಂದ ದೃಷ್ಟಿತೆಗೆದು ಪೂಜಿಸಿದ ನಿಂಬೆಹಣ್ಣು ಕತ್ತರಿಸಿ ಅರಿಸಿನ ಕುಂಕುಮ ಹಚ್ಚಿ ನಾಲ್ಕು ದಿಕ್ಕಿನಲ್ಲಿ ಇಡುತ್ತಾರೆ.

೨. ಸಭಾ ಮಂಟಪ ಸಿದ್ಧತೆ

ಹಲಗೆ ಕಟ್ಟಿದ ನಂತರ ಅವುಗಳಿಂದ ೧೦-೧೨ ಅಡಿ ಎತ್ತರದಲ್ಲಿ ಚಪ್ಪರ ಹಾಕುತ್ತಾರೆ. ಬಿದಿರಿನ ಮಳೆ ಜೋಡಿಸಿ ಕಣಗೀಲು ತಪ್ಪಲಿನ ಹಂದರ ಹಾಕುತ್ತಾರೆ. ಚಪ್ಪರದ ಮುಂಭಾಗ ಮತ್ತು ಎಡಬಲಗಳಲ್ಲಿ ಮಾವಿನ ತೋರಣ ಕಟ್ಟುತ್ತಾರೆ. ಮುಂಭಾಗದ ಕಂಭಗಳಿಗೆ ತೆಂಗಿನಗರಿ ಅಥವಾ ಎಳೆಯ ಬಾಳೆಕಂಬಗಳನ್ನು ಕಟ್ಟುತ್ತಾರೆ. ಹಿಂಭಾಗದಲ್ಲಿ ಬಿದಿರಿನ ತಟ್ಟಿ ಕಟ್ಟಿ ಬಣ್ಣದ ಪರದೆ ಹಾಕಿರುತ್ತಾರೆ. ಅದು ಕೊನೆಯವರೆಗೆ ಇರುತ್ತದೆ. ಮುಂಭಾಗದಲ್ಲಿ ಗಣೇಶ ಇರುವ ನಾಂದಿಪರದೆ ಹಾಕುತ್ತಾರೆ. ಅದನ್ನು ತೆಗೆದು ಮುಚ್ಚುವ ವ್ಯವಸ್ಥೆ ಇರುತ್ತದೆ. ಬಲಭಾಗದಲ್ಲಿ ಮೇಳದವರಿಗೆ ಕೂಡಲು ಹಾರ್ಮೋನಿಯಂ ತಬಲವಾದಕರು ಕುಳಿತುಕೊಳ್ಳಲು ಜಮಖಾನೆ ಮತ್ತು ಹಗುರವಾದ ಟೀಪಾಯಿಗಳನ್ನು ಇಡುತ್ತಾರೆ. ಈ ಸಭಾಮಂಟಪಕ್ಕೆ ಮೇಲೆ

ಹತ್ತಿ ಬರಲು ತಾತ್ಕಾಲಿಕವಾಗಿ ಮೆಟ್ಟಿಲುಗಳನ್ನು ಹಲಗೆಯಿಂದ ಅಥವಾ ಕಲ್ಲುಗಳಿಂದ ಗಟ್ಟಿಮುಟ್ಟಾಗಿ ನಿರ್ಮಿಸುತ್ತಾರೆ.

೩. ಪರದೆಗಳು

ಇಲ್ಲಿ ಹೆಚ್ಚಾಗಿ ಎರಡು ಅಥವಾ ೩ ರೀತಿಯ ಪರದೆಗಳಿರುತ್ತವೆ. ಹಿಂದೆ ಒಂದು ಖಾಯಂ ಪರದೆ ಇರುತ್ತದೆ. ಮುಂಭಾಗದ ನಾಂದಿ ಪರದೆಯೂ ಖಾಯಂ ಆಗಿರುತ್ತದೆ. ದೇವಲೋಕದ ಚಿತ್ರಣ ಬಂದಾಗ ತಿಳಿನೀಲಿ ಪರದೆ ಹಾಕಿ ಮತ್ತೆ ಭೂಲೋಕ ಬಂದಾಗ ಹಿಂದಿನ ಪರದೆಯೇ ಇರುತ್ತದೆ. ಈ ಪರದೆಗಳನ್ನು ಹಾಕಲು ತೆಗೆಯಲು ಕೆಲವೊಮ್ಮೆ ವ್ಯಕ್ತಿ ಇರುತ್ತಾರೆ. ಇಲ್ಲದಲ್ಲಿ ಸಾರಥಿಯೇ ಈ ಕೆಲಸ ಮಾಡುತ್ತಾನೆ. ಅಂದರೆ ಇದು ಭೂಲೋಕ ಇದು, ನರಕ, ಸ್ವರ್ಗ ಎಂದು ಪರಿಚಯಿಸುತ್ತಾನೆ.

೪. ಬೆಳಕಿನ ವ್ಯವಸ್ಥೆ

ಅಟ್ಟದ ಮುಂಭಾಗದ ಎರಡೂ ಕಂಭಗಳಿಗೆ ೬ ರಿಂದ ೮ ಅಡಿ ಎತ್ತರದಲ್ಲಿ ಪಂಜುಗಳನ್ನು ಕಟ್ಟುತ್ತಿದ್ದರು ಸುತ್ತಲು ಕತ್ತಲಿರುವ ಕಾರಣ ಆ ಬೆಳಕು ಮಂಟಪದಲ್ಲಿ ಸಂಪೂರ್ಣವಿರುತಿತ್ತು. ರಾಕ್ಷಸ ಪಾತ್ರ ಬಂದಾಗ ಅರದಾಳ ಪುಡಿಹಾಕಿ ಜ್ವಾಲೆ ಹೆಚ್ಚಾಗುವಂತೆ ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಪ್ರೆಟ್ರೋಮ್ಯಾಕ್ಸ್, ಪುಟ್ಲೈಟ್, ವಿದ್ಯುತ್ ದೀಪಗಳನ್ನು ಹಾಕುತ್ತಿದ್ದರು. ಟ್ಯೂಬ್ ಲೈಟ್‌ಗಳನ್ನು ೧೦೦ ಓಲ್ಟ್ಸ್‌ಬಲ್ಬ್ ಗಳನ್ನು ಹಾಕುತ್ತಿದ್ದರು.

೫. ಮೇಳದವರು

ಮೇಳದವರಿಗೆ ಬಲಭಾಗದಲ್ಲಿ ಜಮಖಾನ ಹಾಕಿ ತಬಲ ವಾದಕರು ಮುಂದೆ ಅವರ ಹಿಂದೆ ಹಾರ್ಮೋನಿಯಂ ಇಟ್ಟುಕೊಳ್ಳಲು ಟೀಪಾಯಿ ಹಾಕಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡುತ್ತಿದ್ದರು. ಹಾಡುವ ಹಿಮ್ಮೇಳ ಮುಮ್ಮೇಳದವರಿಗೆ ಕುರ್ಚಿಗಳನ್ನು ಹಾಕುತ್ತಿದ್ದರು. ಕುಳಿತು ಕೊಂಡ ಇವರು ಪಾತ್ರಗಳು ಬಂದಂತೆ ಅದಕ್ಕೆ ಇರುವ ಹಾಡು ಹಾಡುತ್ತಿದ್ದರು. ತಾಳದವರೂ ಇರುತ್ತಿದ್ದರು.

೬. ಧ್ವನಿ ವ್ಯವಸ್ಥೆ

ಮೈಕ್‌ಗಳಿಲ್ಲದ ಕಾಲದಲ್ಲಿ ಇವರು ಎತ್ತರದ ದನಿಯಿಂದಲೇ ಹಾಡುತ್ತಿದ್ದರು. ಅದು ಸುತ್ತ ೫–೬ ಕಿ.ಮೀ. ವರೆಗೆ ಕೇಳುತಿತ್ತು. ಪಾತ್ರಧಾರಿಗಳು ಕೂಡ ದೊಡ್ಡ ಧ್ವನಿಯಿಂದಲೇ ಹೇಳುತ್ತಿದ್ದರು. ನಂತರದ ದಿನಗಳಲ್ಲಿ ಮೈಕ್‌ಗಳು ಬಂದವು.

೭. ಪ್ರೇಕ್ಷಕರು ಕುಳಿತು ಕೊಳ್ಳುವ ಸ್ಥಳ

ಪ್ರೇಕ್ಷಕರು ಅಟ್ಟದಿಂದ ೬ ರಿಂದ ೮ ಅಡಿ ದೂರದಲ್ಲಿ ಅಟ್ಟದ ಮುಂಭಾಗ ಮತ್ತು ಎಡಬಲಗಳಲ್ಲಿ ಕುಳಿತು ಕೊಂಡಿರುತ್ತಾರೆ. ಪ್ರೇಕ್ಷಕರಿಗೆ ಆಸನದ ಸೌಕರ್ಯ ಇರದೆ

ನೆಲದ ಮೇಲೆ ಕುಳಿತುಕೊಂಡಿರುತ್ತಾರೆ. ಬೇಸಿಗೆ ಸಂದರ್ಭದ ಕಾರಣ ಮೇಲ್ಛಾವಣಿ ಅಥವಾ ಶಾಮಿಯಾನ ಯಾವುದೇ ವ್ಯವಸ್ಥೆಯಿರದೆ ಬಯಲುಪ್ರದೇಶವೇ ಪ್ರೇಕ್ಷಕರ ಸ್ಥಳವಾಗಿರುತ್ತದೆ.

ವೇಷಭೂಷಣ (ವಸ್ತ್ರಾಲಂಕಾರ) ವಿಶೇಷತೆ

ಬಯಲಾಟದ ಪ್ರಮುಖ ಅಂಶವೆಂದರೆ ಅಲ್ಲಿನ ವೇಷಭೂಷಣ. ಇಲ್ಲಿ ಸ್ತ್ರೀ, ಪುರಷ ಹಾಗೂ ದೇವತೆ ಮತ್ತು ರಾಕ್ಷಸ ಪಾತ್ರಗಳು ಪ್ರಮುಖವಾಗಿದ್ದು ಋಷಿಮುನಿಗಳ ಪಾತ್ರಗಳೂ ಇರುತ್ತವೆ. ಪಾತ್ರಗಳಿಗೆತಕ್ಕಂತೆ ರೇಷ್ಮೇ, ಪೀತಾಂಬರ, ಜರತಾರಿ, ನಾರುಮಡಿ, ಕಿರೀಟ, ಭುಜಕೀರ್ತಿ, ಆಭರಣ, ಆಯುಧ, ಕಾಲ್ಗೆಜ್ಜೆಗಳು ವೇಷಭೂಷಣಗಳೇ ಪ್ರಮುಖವಾದವುಗಳು.

ವೇಷಭೂಷಣಗಳನ್ನು ಪ್ರಮುಖವಾಗಿ ಈ ರೀತಿ ಪಟ್ಟಿ ಮಾಡಬಹುದು

೧. ವಸ್ತ್ರಗಳು

೨. ಆಭರಣ

೩. ಕಿರೀಟ, ಭುಜಕೀರ್ತಿ ಕರ್ಣಕುಂಡಲ

೪. ಆಯುಧಗಳು

೫. ಹೂವಿನ ಹಾರ ಇತ್ಯಾದಿ

ಈ ಐದು ವಿಧಾನದ ವೇಷೂಷಣಗಳು ಪ್ರತಿಯೊಂದು ಪಾತ್ರಕ್ಕೂ ಪ್ರಮುಖವಾಗಿರುತ್ತವೆ.

ಪುರಷ ಪಾತ್ರಗಳ ವೇಷ ಭೂಷಣಗಳು

ಪುರುಷ ಪಾತ್ರಗಳಿಗೆ ಪ್ರಮುಖವಾದವು ಮುಂಗೈವರೆಗೆ ಇರುವ ಉದ್ದತೋಳಿನ ಕಪ್ಪುಕೋಟನ್ನು ಮೊದಲು ಹಾಕುತ್ತಾರೆ. ನಂತ ಕುಣಿಯಲು ಅನುಕೂಲವಾಗುವಂತೆ ವೀರಗಚ್ಚೆ ಹಾಕಿ ಸೀರೆ ಉಡಿಸುತ್ತಾರೆ. ಸೀರೆಯ ಅಂಚು, ಸೆರಗು, ಉದ್ದ ಕಾಣುವಂತೆ ಸೀರೆ ಉದ್ದವಾಗಿ ಜೋಡುಹಿಡಿದು ಗಂಟುಹಾಕಿ ಕಚ್ಚೆಹಾಕಿ ಕೊನೆಗೆ ಉಳಿಯುವ ಸೆರಗನ್ನು ಗೊಂಚಲಿನಲ್ಲಿ ನಡುವಿನ ಎಡ-ಬಲ ಬದಿಗಳಲ್ಲಿ ಬಿಡುತ್ತಾರೆ. ಕಪ್ಪು ಕೋಟಿನ ಮೇಲೆ ರೇಷ್ಮೇವಲ್ಲಿಯನ್ನು ಎರಡು ಬದಿ ಭುಜಗಳಿಗೆ ಸಮನಾಗಿ ಹಾಕಿ ನಡುಪಟ್ಟಿ ಕಟ್ಟುತ್ತಾರೆ. ಅಂತೆಯೇ ಅದರ ಮೇಲೆ ಕೊರಳಿಗೆ ಕಂಠಹಾರ, ಪದಕಹಾರ ಉದ್ದನೆಯ ಮುತ್ತಿನ ಹಾರ, ಬಣ್ಣಬಣ್ಣದ ಮಣಿಗಳ ಹಾರಗಳನ್ನು ಹಾಕುತ್ತಾರೆ. ಬೆರಳಿಗೆ ಉಂಗುರಗಳನ್ನು ಹಾಕುತ್ತಾರೆ. ಮಣಿಕಟ್ಟನ್ನು ತೋಳುಬಂದಿಗಳನ್ನು ಭುಜಕೀರ್ತಿಗಳನ್ನು ಕಟ್ಟುತ್ತಾರೆ. ಪಾದಗಳಿಗೆ ಕಾಲ್ಚೀಲ ಹಾಕಿ ೩ ರಿಂದ ೫ ಇಂಚಿನ ಗೆಜ್ಜೆ ಕಟ್ಟುತ್ತಿದ್ದರು. ಇದೆಲ್ಲಾ ಆದ ಮೇಲೆ ಕೃಷ್ಣ ವಿಷ್ಣು, ಮೊದಲಾದ ಪಾತ್ರಗಳಿಗೆ ಹೂವಿನಹಾರ ಹಾಕುತ್ತಾರೆ. ಪಾತ್ರಗಳಿಗೆ ತಕ್ಕಂತೆ ಕಿರೀಟಗಳನ್ನು ಕಟ್ಟುತ್ತಾರೆ.

ಸ್ತ್ರೀ ಪಾತ್ರಗಳ ವೇಷಭೂಷಣ

ಸ್ತ್ರೀ ಪಾತ್ರಗಳಿಗೆ ಸಾಮಾನ್ಯವಾಗಿ ಸ್ತ್ರೀಯರು ಉಡುವಂತೆ ಸೀರೆ ಉಡಿಸುತ್ತಾರೆ. ಅಗಲ ಅಂಚಿನ, ಸೆರಗಿನ, ಕೆಂಪು, ಹಸಿರು ರೇಷ್ಮೆ ಸೀರೆ ಅಗಲ ಅಂಚಿನ ರವಿಕೆಗಳು

ಇವರಿಗೆ ಶೋಭೆಯನ್ನು ತಂದು ಕೊಡುತ್ತವೆ. ಇವರಿಗೆ ಕುಣಿತಕ್ಕಿಂತ ಹಾವಭಾವಗಳೇ ಹೆಚ್ಚಾಗಿದ್ದು ಎರಡು ಹೆಜ್ಜೆಯ ಕುಣಿತಕ್ಕಿಂತ ಹೆಚ್ಚಾಗಿರುವುದಿಲ್ಲ. ರಂಭೆ, ಮೇನಕೆ ಮೊದಲಾದ ದೇವತಾಸ್ತ್ರೀ ಪಾತ್ರಗಳಿಗೆ ಚಿಕ್ಕ ಕಿರಿಟ. ಮಿಂಚಿನ ಜರಿಯ ಮೇಲು ಹೊದಿಕೆಯನ್ನು ಕಿರೀಟಗಳ ಪಕ್ಕದಲ್ಲಿ ಚಿಕ್ಕ ನೆರಿಗೆ ಹಾಕಿ ಕಟ್ಟಿದ್ದು ಅವು ತಲೆಯಿಂದ ಮಂಡಿಯವರೆಗೆ ಹಿಂಬದಿ ಮತ್ತು ಎಡ ಬಲಗಳಲ್ಲಿ ಹರಡಿಕೊಂಡಿದ್ದು ಪಾತ್ರಗಳಿಗೆ ಶೋಭೆಯನ್ನು ತಂದು ಕೊಡುತ್ತವೆ. ಬಳೆಗಳು, ಕಿವಿಯ ಆಭರಣ, ಬೈತಲೆಬೊಟ್ಟು ವಂಕಿ, ವಡ್ಡಾಣ, ತೋಳುಬಂಧಿ ತಲೆಗೆ ಹೂವು ಮುಡಿಸುತ್ತಾರೆ. ಕೇಶಾಲಂಕಾರವೂ ಇವುಗಳಲ್ಲಿ ಪಾಶಸ್ತ್ಯ ಪಡೆದಿದೆ. ಉದ್ದ ಜಡೆ ಗೊಂಡೆ ಹಾಕುತ್ತಾರೆ. ಕೆಲವೊಮ್ಮೆ ಬನ್ ಹಾಕಿ ಮುಡಿ ಕಟ್ಟಿ ವಿವಿಧ ವಿನ್ಯಾಸಗಳಲ್ಲಿ ಹಾಕಿ ಹೂವುಗಳಿಂದ ಅಲಂಕರಿಸಿರುತ್ತಾರೆ. ಗರಗಸದಂತಹ ಮುಡಿಯ ಸುತ್ತ ಸೂರ್ಯನಂತೆ ಇರುವ ರಟ್ಟಿನ ಅಥವಾ ಬೆಂಡಿನ ಒಂದು ಆಭರಣ ಕಟ್ಟಿರುತ್ತಾರೆ.

ರಾಕ್ಷಸ ಪಾತ್ರಧಾರಿಗಳ ವೇಷಭೂಷಣ

ಇವು ರೌದ್ರ ಹಾಗೂ ಭಯಾನಕ ವಾಗಿರುತ್ತವೆ. ಹೆಚ್ಚಾಗಿ ಕಪ್ಪು, ಕೆಂಪು ಮಿಶ್ರಿತ ಪಟ್ಟಿಯ ಅಗಲ ಹೆಚ್ಚು ನೆರಿಗೆ ಉಳ್ಳ ವಸ್ತ್ರ ಕಟ್ಟುತ್ತಾರೆ. ರಾಕ್ಷಸರಿಗೆ ಎತ್ತರವಾದ ಕಿರೀಟ, ದಪ್ಪ ಮೀಸೆ, ಕೆಂಪು ಬಣ್ಣ, ದೊಡ್ಡ ದಪ್ಪನಾದ ಹಾರಗಳು ದೊಡ್ಡ ಭುಜಕೀರ್ತನಗಳು ಪ್ರಮುಖ ವೇಷಭೂಷಣಗಳೂ ರಾಕ್ಷಸಿಯ ಪಾತ್ರಕ್ಕೆ ಕಪ್ಪು,ಕೆಂಪು ಮಿಶ್ರಿತ ಹೆಚ್ಚು ನೆರಿಗೆಯುಳ್ಳ ಲಂಗ ಅಥವಾ ಎರಡು ಮೂರು ಸೀರೆಗಳನ್ನು ಕಟ್ಟುತ್ತಾರೆ. ಕಪ್ಪು ಅಥವಾ ಕೆಂಪು ರವಿಕೆ, ಅತಿಯಾದ ತುಂಬಿದ ಎದೆ. ಪೃಷ್ಠ, ಕೆದರಿದ ಕಪ್ಪು ಕೂದಲುಗಳು ಆಪಾತ್ರಗಳ ಘೋರತೆಯನ್ನು ಎತ್ತಿ ತೋರುತ್ತವೆ. ಅದಕ್ಕೆ ತಕ್ಕಂತೆ ಕೈಯಲ್ಲಿನ ಆಯುಧಗಳು ದಪ್ಪ-ದಪ್ಪ ಸರಳುಗಳು, ಅಗಲ ಬಳೆಗಳು, ಮುಳ್ಳಿನಂತೆಕಾಣುವ ಕಿರೀಟ, ತೋಳುಬಂಧಿ ಭುಜಕೀರ್ತಿ, ಮಣಿಕಟ್ಟು ಗಳಿಂದ ಮತ್ತಷ್ಟು ಉಗ್ರತೆಯನ್ನು ಪ್ರದರ್ಶಿಸುತ್ತದೆ. ಕೊರಳಿಗೆ ಹಿಟ್ಟಿನಿಂದ ಮಾಡಿದ ರುಂಡಮಾಲೆ, ನಿಂಬೆಹಣ್ಣಿನ ಹಾರಗಳನ್ನು ಹಾಕಿರುತ್ತಾರೆ.

ಋಷಿ ಪಾತ್ರಧಾರಿಗಳು

ನಾರು ಮಡಿ, ಕಾವಿವಸ್ತ್ರ, ಜಡೆ, ಮುಡಿ, ಕಮಂಡಲ ಗಡ್ಡ ಮೀಸೆಗಳನ್ನು ಹಾಕಿರುತ್ತಾರೆ. ಯುವಕ ಪಾತ್ರಗಳಿಗೆ ಕಪ್ಪು ಬಣ್ಣದ ಜಡೆಮುಡಿಗಡ್ಡ ಮೀಸೆ ಹಚ್ಚುತ್ತಿದ್ದರು. ರುದ್ರಾಕ್ಷಿಸರಗಳನ್ನು ಕೈಗೆ, ತೋಳಿಗೆ ಕೊರಳಿಗೆ ಹಾಕಿಕೊಳ್ಳುಕತ್ತಿದ್ದರು. ವೃದ್ಧ ಪಾತ್ರಗಳಿಗೆ ಬಿಳಿ ಬಣ್ಣದ ಜಡೆ ಮುಡಿ ಗಡ್ಡ ಮೀಸೆಗಳನ್ನು ಹಾಕುತ್ತಿದ್ದರು. ಗಡ್ಡವನ್ನು ನಾರಿನಿಂದ ಮಾಡಿಕೊಳ್ಳುತ್ತಿದ್ದರು.

ಸಾರಥಿಯ ಪಾತ್ರಧಾರಿ

ಈತನ ವೇಷವು ಹಾಸ್ಯಮಯ ವಾಗಿರುತ್ತದೆ. ಇವನು ಯಾವರೀತಿಯ ವೇಷವನ್ನಾದರೂ ಧರಿಸಬಹುದು ಹಕ್ಕಿಯ ಪುಕ್ಕ, ಬಣ್ಣದ ಕಾಗದ, ಬಟ್ಟೆಗಳಿಂದ ಕೂಡಿದ ಕಿರೀಟ ಉದ್ದನೆಯ ನಿಲುವಂಗಿ, ಹಲವು ಬಣ್ಣಗಳಿಂದ ಮುಖದ ಅಲಂಕಾರ, ಕಪ್ಪು, ಬಿಳಿ ಬಣ್ಣದ ಮೀಸೆ, ಸೊಂಟಕ್ಕೊಂದು ಬಣ್ಣ-ಬಣ್ಣದ ಬಟ್ಟೆ ಕಟ್ಟಿಕೊಂಡು ಕೈಯಲ್ಲೊಂದು ದೊಣ್ಣೆ ಹಾಸ್ಯ ನುಡಿಗಳು ಈತನ ಪಾತ್ರಕ್ಕೆ ಮೆರುಗು ತಂದುಕೊಡುತ್ತವೆ.

ಆಯುಧಗಳು

ಬಯಲಾಟದ ಮತ್ತೊಂದು ಆಕರ್ಷಣೆ ಎಂದರೆ ಪಾತ್ರಧಾರಿಗಳ ಕೈಯಲ್ಲಿನ ಆಯುಧಗಳು ಇವುಗಳನ್ನು ಮರ, ರಟ್ಟುಗಳಿಂದ ಮಾಡಿರುತ್ತಾರೆ. ಇವುಗಳಲ್ಲಿ ಪ್ರಮುಖವಾಗಿ ತ್ರಿಶೂಲ, ಗಧೆ, ಹಲಾಯುಧ, ಮನ್ಮಥನ ಹೂವಿನ ಬಾಣ, ಬಿಲ್ಲು, ಬಣ್ಣದ ಕಾಗದ ಮಿಂಚಿನಿಂದ ಕೂಡಿದ ಧನಸ್ಸು, ರಾಕ್ಷಸರ ಮುಳ್ಳಿನಿಂದ ಕೂಡಿದ ಆಯುಧಗಳು ಖಡ್ಗ ಇತ್ಯಾದಿಗಳು ಪ್ರಮುಖ ಆಯುಧಗಳಾಗಿದ್ದು ಬಲಗೈಯಲ್ಲಿ ಆಯುಧಗಳನ್ನು ಹಾಗೂ ಎಡಗೈಯಲ್ಲಿ ತುರಾಯಿ ಅಥವಾ ಶಲ್ಯ (ಕೆಂಪು ಬಟ್ಟೆ) ಹಿಡಿದಿರುತ್ತವೆ.

ಆಭರಣಗಳು

ಸಂಡೂರಿನಲ್ಲಿ ಆಭರಣಗಳನ್ನು ಹೆಚ್ಚಾಗಿ ಅಂಗಡಿಗಳಿಂದ ಬಾಡಿಗೆ ತರುತ್ತಿದ್ದರು. ಇವು ಗೋಲ್ಡ್‌ಕವರಿಂಗ್ ಮಾಡಿದ ಆಭರಣಗಳಾಗಿವೆ. ಪ್ಲಾಸ್ಟಿಕ್‌ನ ಸ್ಪ್ರಿಂಗ್ ಬಳೆಗಳು ಕಡಗಗಳು ಇವೆಲ್ಲಾ ಸಂಪೂರ್ಣ ಸೆಟ್ ದೊರಕುತ್ತವೆ. ಭುಜಕೀರ್ತಿಗೆ ಕಟ್ಟಿದ ದಾರ ಕಾಣದಂತೆ ಕುತ್ತಿಗೆಯಿಂದ ಎದೆಯ ಮೇಲೆ ಮುಂಭಾಗದಲ್ಲಿ ರೇಷ್ಮೆ, ಜರತಾರಿ ಶಲ್ಯ, ವಲ್ಲಿಗಳನ್ನು ಇಳಿಬಿಟ್ಟು ಅದರ ಮೇಲೆ ಆಭರಣ ಹಾಕುತ್ತಾರೆ. ಕುಣಿದಾಡುವ ಪಾತ್ರಗಳಿಗೆ ದೊಡ್ಡ ದೊಡ್ಡದಾದ ಒಂದೆರಡು ಆಭರಣಗಳನ್ನು ಮತ್ತು ಸ್ತ್ರೀ ಪಾತ್ರಗಳಿಗೆ ಎಲ್ಲಾ ರೀತಿಯ ಆಭರಣ ಹಾಕುತ್ತಾರೆ. ಅವುಗಳೆಂದರೆ ಬೈತಲೆಬೊಟ್ಟು, ದೊಡ್ಡನತ್ತು ಕಿವಿಯ ಓಲೆ, ಕೊರಳ ವಂಕಿಹಾರ, ಕಂಠಹಾರ, ಮುತ್ತಿನ ಪದಕದ ಸರಗಳು, ನಡುವಿನ ವಡ್ಯಾಣ ವಂಕಿ, ತೋಳುಬಂಧಿ, ಬಳೆ ಕಡಗಳು ಉಂಗುರಗಳು ಕಾಲಿಗೆ ಗೆಜ್ಜೆ, ಪ್ರಮುಖವಾದವುಗಳಾಗಿವೆ.

ಪುರಷ ಮತ್ತು ಸ್ತ್ರೀ ಪಾತ್ರಗಳಿಗೆ ನಯವಾದ ಕುಸುರಿ ವಿನ್ಯಾಸವಿರುವ ಆಭರಣಗಳನ್ನು ಹಾಕಿದರೆ ರಾಕ್ಷಸ ಮತ್ತು ರಾಕ್ಷಸಿಯ ಪಾತ್ರಗಳಿಗೆ ಘೋರವಾಗಿ ಕಾಣುವಂತೆ ದೊಡ್ಡ ಪದ, ಕಪ್ಪೆಚಿಪ್ಪು, ಹುಲಿಯ ಉಗುರು, ಶಂಕುಗಳಿಂದ ಕೂಡಿದ ಹಾರಗಳನ್ನು ಸುಲ್ತಾನ ಸಾಬ್, ತಿಪ್ಪೇಸ್ವಾಮಿಯವರು ತಾವೇ ತಯಾರಿಸುತ್ತಿದ್ದರು. ಮತ್ತು ಋಷಿಮುನಿಗಳ ಪಾತ್ರಕ್ಕೆ

ರುದ್ರಾಕ್ಷಿಮಾಲೆ, ಕೈಗೆ ರುದರಾಕ್ಷಿ, ಜೆಡೆಮುಡಿಗಳಿಗೆ ರುದ್ರಾಕ್ಷಿ ಸುತ್ತುತ್ತಿದ್ದರು. ಸಾರಥಿ ಪಾತ್ರಕ್ಕೆ ಬಣ್ಣಬಣ್ಣದ ಪ್ಲಾಸ್ಟಿಕ್ ಕಾಗದ ಗಳಿಂದ ತಯಾರಿಸಿದ ಸುಂದರವಾದ ಹಾರಗಳನ್ನು ಮಾಡುತ್ತಿದ್ದರು. ಅವು ನೋಡುಗರಿಗೆ ವಿಚಿತ್ರವಾಗಿ ಹಾಸ್ಯಮಯವಾಗಿ ಕಾಣುತ್ತಿದ್ದವು. ಮೌನಾಚಾರಿ ತೆಳುವಾದ ಮರದ ತುಂಡುಗಳಿಂದ ಕೆತ್ತಿದ ಪದಕ ಮಣಿಗಳನ್ನು ದಪ್ಪದಾರದಲ್ಲಿ ಪೋಣೀಸಿ ಅದಕ್ಕೆ ಬಣ್ಣ ಬಳಿದು ದೇವತ, ರಾಕ್ಷಸ ಪಾತ್ರಗಳಿಗೆ ಹಾರ ಮಾಡುತ್ತಿದ್ದರು.

ಕಿರೀಟಗಳು–ಭುಜಕೀರ್ತಿಗಳು

ಬಯಲಾಟದ ಮತ್ತೊಂದು ಆಕರ್ಷಣೆ ಎಂದರೆ ಇಲ್ಲಿನ ಕಿರಿಟ ಹಾಗೂ ಭುಜಕೀರ್ತಿಗಳು. ಇದರಲ್ಲಿ ಹಲವಾರು ಮಾದರಿಗಳಿವೆ. ರೆಕ್ಕೆಯಂತಿರುವ ಭೂಜಕೀರ್ತಿಗಳು ೧ ಅಡಿ ಅಗಲ ಎತ್ತರ ವಿದ್ದರೆ ತಲೆ ಕಿರೀಟಗಳು ೨ ರಿಂದ ೨ ೧/೨ ಅಡಿ ಎತ್ತರ ವಿರುತ್ತದೆ. ಇವುಗಳನ್ನು ಹಿಂದೆ ಅಂಟು ಕಾಗದ ರುಬ್ಬಿ ತಯರಿಸುತ್ತಿದ್ದರು. ನಂತರ ತೆಳುವಾದ ಮರದ ಹಾಳೆಗಳಿಂದ, ನಂತರ ರಟ್ಟುಗಳಿಂದ ಈಗ ಹಗೂರವಾದ ಬೆಂಡಿನಿಂದ ತಯಾರಿಸುತ್ತಾರೆ. ಇವುಗಳ ಮೇಲೆ ಬಣ್ಣ ಲೇಪನ ಅಥವಾ ಮಿಂಚಿನ ಬಣ್ಣದ ಕಾಗದಗಳು ಅಂಟಿನಿಂದ ಹಚ್ಚಿ ಅದಕ್ಕೆ ಬಣ್ಣ ಬಣ್ಣದ ಪ್ಲಾಸ್ಟಿಕ್ ಮಣಿಗಳ ಹಾರ, ಗಾಜಿನ ಮಣಿಗಳಿಂದ ಹರಳುಗಳಿಂದ, ಕನ್ನಡಿಯ ಚೂರು, ಉಲ್ಲನ್‌ಗೊಂಡೆ, ಬಣ್ಣದ ಉಲ್ಲನ್‌ಗಳಿಂದ ತಯಾರಿಸುತ್ತಾರೆ. ಹಿಂದೆ ಜೀರಂಗಿ ರೆಕ್ಕೆ ಕತ್ತರಿಸಿ ಅಂಟಿಸುತ್ತಿದ್ದರು. ಗಾಜಿನ ಚೂರುಗಳಿಗೆ ವಿವಿಧ ಬಣ್ಣ ಬಳಿದು ಮತ್ತು ಬಳೆಚೂರುಗಳಿಂದ ಅಲಂಕರಿಸುಕತ್ತಿದ್ದರು. ಇವು ವಿವಿಧ ಬಣ್ಣಗಳಿಂದ ಕನ್ನಡಿ ಗಾಜು, ಮಣಿಗಳಿಂದ ಹೊಳೆಯುತ್ತವಲ್ಲದೆ ವಿಶಿಷ್ಟವಾಗಿ ಕಂಗೊಳಿಸುತ್ತವೆ.

ಕಿರೀಟಗಳು ಗೋಪುರಗಳಂತೆ ಇರುತ್ತಿದ್ದವು. ಅವನ್ನು ಬೇರೆ ಬೇರೆ ವಿನ್ಯಾಸಗಳಿಂದ ಕತ್ತರಿಸಿ ಅಂಟಿಸುತ್ತಿದ್ದರು. ಕೆಲವೊಮ್ಮೆ ದಾರದಿಂದ ಹೊಲಿಯುತ್ತಿದ್ದರು. ಇವು ಸ್ತ್ರೀಯರಿಗೆ ಕಮಾನಿನ ಆಕಾರದ ಚಿಕ್ಕ ಕಿರೀಟಗಳಾದರೆ ಪುರಷರಿಗೆ, ರಾಕ್ಷಸರಿಗೆ ೨ ರಿಂದ ೩ ಅಡಿ ಎತ್ತರ ವಿರುತ್ತಿದ್ದವು. ಕಿರೀಟ ಕಟ್ಟುವ ಮೊದಲು ತಲೆಗೆ ಒಂದು ರುಮಾಲು ಸುತ್ತಿ ಕಿರೀಟ ಅಲುಗಾಡದಂತೆ ಆಧಾರವಾಗಿಟ್ಟುಕೊಂಡು ನಂತರ ಅದಕ್ಕಾಗಿ ಇರುವ ದಾರದಿಂದ ಬಿಗಿಯಾಗಿ ಕಟ್ಟುತ್ತಾರೆ.

ಭುಜ ಕೀರ್ತಿಗಳನ್ನು ಭುಜಗಳಿಗೆ ಕಟ್ಟುತ್ತಾರೆ. ಇವು ೧ ಅಡಿಯಿಂದ ೨ ಅಡಿ ಎತ್ತರ ೧ ಅಡಿ ಅಗಲ ವಿರುತ್ತದೆ. ತಲೆಯ ಕಿರೀಟದಂತೆಯೇ ಇವನ್ನು ತಯಾರಿಸಿರುತ್ತಾರೆ. ಇವನ್ನು ಭುಜಕ್ಕೆ ಕಟ್ಟಿದ ನಂತರ ಪಾತ್ರಗಳು ಕುಣಿಯುವಾಗ ಹಿಂದೆ ಮುಂದೆ ಸರಿದಾಡದಂತೆ ಎದೆಯ ಮೇಲೆ ಮತ್ತು ಬೆನ್ನ ಮೇಲೆ ದಾರಗಳಿಂದ ಬಿಗಿಯಾಗಿ ಕಟ್ಟಿರುತ್ತಾರೆ.

ವಿಗ್ ಬಳಕೆ

ಬಯಲಾಟಗಳಲ್ಲಿ ಪಾತ್ರಧಾರಿಗಳಿಗೆ ಕೆಲವೊಮ್ಮೆ ವಿಗ್ ಬೇಕಾಗುತ್ತದೆ. ಆದಕಾರಣ ವಿಗ್ ಬಳಕೆಯನ್ನು ವಿಶೇಷವಾಗಿ ಪುರಷರು ಸ್ತ್ರೀ ಪಾತ್ರಗಳನ್ನು ಮಾಡುವಾಗ ವಿವಿಧ ವಿನ್ಯಾಸಗಳ ಕೇಶಲಂಕಾರಹೊಂದಿದ ವಿಗ್‌ಗಳನ್ನು ಬಾಡಿಗೆ ತರುತ್ತಿದ್ದರು. ಋಷಿಮುನಿಗಳ ಪಾತ್ರದ ಜಡೆ ಮುಡಿಗಳು ಹೊಂದಿದ ವಿಗ್‌ಗಳು ಇಲ್ಲಿ ಅವಶ್ಯಕವಿದ್ದವು.

ಹೂವಿನ ಹಾರ ಮತ್ತು ಮಲ್ಲಿಗೆ ಚಂಡೆ

ಹೂವಿನ ಹಾರಗಳನ್ನು ಸುಗಂಧ ರಾಜ, ಮಲ್ಲಿಗೆ, ಗುಲಾಬಿ, ದುಂಡುಮಲ್ಲಿಗೆ ಹೂಗಳಿಂದ ಸುಂದರವಾಗಿ ಕಟ್ಟಿರುತ್ತಾರೆ. ದೇವತಾ ಪಾತ್ರಗಳಿಗೆ ಮನ್ಮಥನ ಪಾತ್ರಗಳಿಗೆ ಇವುಗಳ ಬಳಕೆ ಹೆಚ್ಚು, ಹೂವು ಹೆಚ್ಚು ಬಳಸುವ ಪಾತ್ರಗಳೆಂದರೆ ಕೃಷ್ಣ, ವಿಷ್ಣು ಹಾಗೂ ಮನ್ಮಥನ ಪಾತ್ರಗಳು ಮನ್ಮಥನ ಬಿಲ್ಲು, ಬಾಣಗಳ ಜೊತೆಗೆ ಕೈಯಲ್ಲಿ ಮಲ್ಲಿಗೆ ಹೂವಿನಿಂದ ಮಾಡಿದ ಮಲ್ಲಿಗೆ ಚಂಡೆಯನ್ನು ಹಿಡಿದು ಕೊಂಡಿರುತ್ತಾನೆ. ಸ್ತ್ರೀಯರಿಗೆ ಹೂವನ್ನು ತಲೆಯಲ್ಲಿ ಮುಡಿಸುತ್ತಾರೆ. ಉದ್ದ ಜಡೆಯಲ್ಲಿ ಕನಕಾಂಬರಿ ಮತ್ತು ಮಲ್ಲಿಗೆ ಹೂವುಗಳನ್ನು ಸುತ್ತುತ್ತಾರೆ.

ಬಣ್ಣದ ವಿಶೇಷತೆ

ಬಣ್ಣ ಹಚ್ಚುವುದು (Make up)

ಬಯಲಾಟದಲ್ಲಿ ಬಣ್ಣ ಹಚ್ಚುವುದು ಕೆಲವು ವಿಶೇಷದಿಂದ ಕೂಡಿದೆ. ಮೊದಲು ಬಣ್ಣದ ಮನೆ ಎಂದು ಅಟ್ಟದಿಂದ ಸ್ವಲ್ಪದೂರ ಮನೆಯ ಜಗುಲಿ, ಮನೆ ಅಥವಾ ಕೋಣೆ ಮಾಡಿ ಅಲ್ಲಿಯೇ ಎಲ್ಲಾ ಪಾತ್ರಧಾರರಿಗೆ ಬಣ್ಣ ಹಚ್ಚಿ ವೇಷಭೂಷಣ ಹಾಕುತ್ತಾರೆ. ಬಣ್ಣ ಹಚ್ಚುವವನು ಮೇಕಪ್ ಮ್ಯಾನ್, ಜೀನಗಾರರು, ಬಣ್ಣದವರೆಂದೇ ಕರೆಯುವ ವಾಡಿಕೆ ಇಂದಿಗೂ ಸಂಡೂರಿನಲ್ಲಿದೆ. ಬಯಲಾಟ ಆಡುವ ಪ್ರತಿ ಮೇಸ್ತ್ರು, ಕಥಾನಾಯಕ ಇಂಥ ಒಂದು ಖಾಯಂ ಬಣ್ಣದವರನ್ನು ಇಟ್ಟುಕೊಡಿರುತ್ತಾರೆ. ಇವರುಗಳೇ ಬಣ್ಣಹಚ್ಚಿ ವೇಷ ಭೂಷಣ ಸ್ವತಃ ತಾವೇ ತರುತ್ತಾರೆ. ನಂತರ ಅದರ ಹಣ ಮಾತನಾಡಿ ಕೊಂಡು ಮೇನೇಜರ್ ನಿಂದ ಹಣ ಪಡೆಯುತ್ತಾರೆ. ಇವರನ್ನು ಸಂಡೂರಿನಲ್ಲಿ ಬಯಲಾಟ ಆಡುವವರು ತೋರಣಗಲ್ಲು, ಬಳ್ಳಾರಿ, ಏಳುಬೆಂಚೆ, ಕೂಡ್ಲಿಗಿ ಪ್ರದೇಶಗಳಿಂದ ಕರಸಿ ಕೊಳ್ಳುತ್ತಿದ್ದರು.

ಪ್ರಮುಖ ಬಣ್ಣಗಳು

ನೀಲಿ, ಹಸಿರು, ಕೆಂಪು, ಗುಲಾಬಿ, ಬಿಳಿ, ಕಪ್ಪು, ಮಿಂಚು,

ಬಣ್ಣ ಹಚ್ಚುವ ರೀತಿ

ಜಿಂಕ್ ಪೌಡರ್‌ನಲ್ಲಿ, ಕೊಬ್ಬರಿ ಎಣ್ಣೆ ಅಥವಾ ಬೆಣ್ಣೆ ಕಲಿಸಿ ಅದಕ್ಕೆ ಪಾತ್ರಧಾರಿಗೆ ಬೇಕಾದ ಬಣ್ಣ ಸೇರಿಸಿ ಮುಖಕ್ಕೆ ಹಚ್ಚಿ ನಂತರ ಪೌಡರ್ ಹಚ್ಚುತ್ತಿದ್ದರು. ಅಂಗೈಯಲ್ಲಿ

ಕಲಿಸಿ ಮುಖಕ್ಕೆ ಸಮಾಂತರವಾಗಿ ಸವರುತ್ತಿದ್ದರು. ಎಣ್ಣೆ ಪೌಡರ್ ಬಣ್ಣ ಮಿಶ್ರಣದಿಂದ ಬೆವರಿದರೂ ಬಣ್ಣ ಇಳಿಯುತ್ತಿರಲಿಲ್ಲ.

ಹಿಂದಿನ ಕಾಲದಲ್ಲಿ ವಿಭೂತಿ, ಕೆಮ್ಮಣ್ಣು, ಮಸಿ, ಕುಂಕುಮ, ನೀಲಿ ಬಣ್ಣಗಳು ಪ್ರಮುಖ ವಾಗಿದ್ದವು. ಅರಿಶಿಣ, ಗಂಧ ಮಿಶ್ರಮಾಡಿ ದೇವತಾ ಪಾತ್ರಗಳಿಗೆ ಹಚ್ಚುತ್ತಿದ್ದರು. ಹುಬ್ಬಿಗೆ, ಮೀಸೆಗೆ ಮಸಿ ಹಚ್ಚುತ್ತಿದ್ದರು. ರಾಕ್ಷಸ ಪಾತ್ರಗಳಿಗೆ ಕೆಂಪು ಬಣ್ಣ ಹಚ್ಚಿ ಕಣ್ಣಿನ ಸುತ್ತ ದಪ್ಪವಾಗಿ ಕಾಡಿಗೆ ಹಚ್ಚಿ ಸುಣ್ಣದ ಅಥವಾ ವಿಭೂತಿಯ ಚುಕ್ಕೆಗಳನ್ನು ಇಟ್ಟು ಘೋರವಾಗಿ ಕಾಣುವಂತೆ ಮಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಸಂಪೂರ್ಣವಾಗಿ ಮೇಕಪ್ ಸೆಟ್ ಬಳಸುತ್ತಾರೆ. ದೇವತಾ ಪಾತ್ರಗಳಿಗೆ ತೆಳುವಾದ ಗುಲಾಬಿ ಬಣ್ಣ ಹಚ್ಚುತ್ತಾರೆ. ಇಲ್ಲಿ ರಾಮ, ಕೃಷ್ಣ,ವಿಷ್ಣು, ಯಮನ ಪಾತ್ರಗಳನ್ನು ಬಿಟ್ಟು ಎಲ್ಲಾವಕ್ಕೂ ತಿಳಿಗುಲಾಬಿ ಬಣ್ಣವನ್ನೇ ಹೆಚ್ಚಾಗಿ ಬಳಸುತ್ತಾರೆ. ಗಂಧ, ಕುಂಕುಮದ ಬೊಟ್ಟು ಹಣೆಗೆ ಹಚ್ಚುತ್ತಾರೆ. ವಿಭೂತಿ ಹಚ್ಚುತ್ತಾರೆ. ತುಟಿಗೆ ಕೆಂಪು ಬಣ್ಣ ಕಣ್ಣಿಗೆ ಕಾಡಿಗೆ ಹಚ್ಚಿ ಹುಬ್ಬನ್ನು ತಿದ್ದುತ್ತಾರೆ. ಸ್ತ್ರೀ ಪಾತ್ರರಿಗೆ ಕಮಾನಿ ನಂತಹ ಹುಬ್ಬನ್ನು ಮಾಡುತ್ತಾರೆ. ಪುರಷರ ಪಾತ್ರಗಳಿಗೆ ಹುಬ್ಬು ಗಾಢವಾಗಿರುತ್ತವೆ.

ದೇವತಾ ಪಾತ್ರಗಳಿಗೆ ಮೀಸೆ ಇರುವುದಿಲ್ಲ. ಭೀಮ, ದುರ್ಯೋಧನ ಮೊದಲಾದ ಘೋರ ಪಾತ್ರಗಳಿಗೆ ಗಲ್ಲಿ ಮೀಸೆ ಬರೆಯುತ್ತಾರೆ. ಉಳಿದ ಪಾತ್ರಗಳಿಗೆ ಕುಡಿ ಮೀಸೆ ಬರೆಯುತ್ತಾರೆ. ಇವು ಚೂಪಾಗಿರುತ್ತವೆ. ಋಷಿ ಮುನಿ ಪಾತ್ರಕ್ಕೆ ಬೇಕಾದ ಗಡ್ಡ ಜಡೆ ಮುಡಿಗಳನ್ನು ತೆಂಗಿನ ನಾರಿಗೆ ಕಪ್ಪು ಬಿಳಿ ಬಣ್ಣಬಳಿದು ಮಾಡಿರುತ್ತಾರೆ. ಪುರುಷ ಪಾತ್ರಗಳಿಗೆ ಗಾಢವಾದ ಬಣ್ಣವನ್ನು ಬಳಸಿದರೆ ಸ್ತ್ರೀ ಪಾತ್ರರಿಗೆ ತಿಳಿಯಾದ ಬಣ್ಣಗಳನ್ನು ಬಳಸುತ್ತಾರೆ. ಕೃಷ್ಣ, ರಾಮ, ಯಮ ವಿಷ್ಣುವಿನ ಪಾತ್ರಗಳಿಗೆ ತಿಳಿ ಹಸಿರು ತಿಳಿನೀಲಿ ಬಣ್ಣಗಳನ್ನು ಹಚ್ಚುತ್ತಾರೆ. ಮಾನವ ಪಾತ್ರಗಳಿಗೆ ನಸುಗೆಂಪು, ತಿಳಿಗೆಂಪು ಬಣ್ಣಗಳನ್ನು ಬಳಸುತ್ತಾರೆ. ಋಷಿ ಮುನಿಗಳಿಗೆ ಶುಭ್ರವಾದ ಬಿಳಿಬಣ್ಣವನ್ನು ಹಚ್ಚುತ್ತಾರೆ. ಕೆಲವೊಮ್ಮೆ ಸಾರಥಿಗೂ ಬಿಳಿಯ ಬಣ್ಣ ಹಚ್ಚುತ್ತಾರೆ. ಹೆಣ್ಣು ದೇವತೆಗಳಿಗೆ ಕೆಂಪು, ತಿಳಿಗೆಂಪು ಬಣ್ಣ ಬಳಿಯುತ್ತಾರೆ. ವಾನರ ಪಾತ್ರಗಳಿಗೆ ತುಟಿ, ಬಾಯಿಗಳಿಗೆ ಕೆಂಪು ಬಣ್ಣ ಹಚ್ಚುತ್ತಾರೆ.

ಮಿಂಚು

ಕೃಷ್ಣ ಮೊದಲಾದ ದೇವತಾ ಪಾತ್ರಗಳಿಗೆ, ರಾಕ್ಷಸ ಪಾತ್ರಗಳಿಗೆ ಸ್ತ್ರೀ ಪಾತ್ರಗಳಿಗೆ ಅಲ್ಲಲ್ಲಿ ಮಿಂಚು ಹಚ್ಚುತ್ತಾರೆ. ಹಿಂದೆ ಮಿಂಚು ಇರದ ಕಾರಣ ಕಾಗೆಬಂಗಾರ ಪುಡಿಮಾಡಿ ತಿಲಕಕ್ಕೆ ಹಚ್ಚುತ್ತಿದ್ದರು. ಮತ್ತು ಬೈತಲೆಗೆ ಕೆಲವು ಪಾತ್ರಗಳಿಗೆ ಅಲ್ಲಲ್ಲಿ ಹಚ್ಚುತ್ತಾರೆ. ಸಾರಥಿಗೆ ಗಲ್ಲ ಕೆನ್ನೆ ಕಣ್ಣುರೆಪ್ಪೆಗಳ ಮೇಲೆ ಹಣೆಗೆ ಹಚ್ಚುತ್ತಾರೆ. ಈಗ ಮಿಂಚಿನ ಪುಡಿ ಅಂಗಡಿಗಳಲ್ಲಿ ದೊರೆಯುತ್ತದೆ ಅದನ್ನೇ ಬಳಸುತ್ತಾರೆ.

ರಾಕ್ಷಸ ಪಾತ್ರಗಳ ಬಣ್ಣ ವಿಶೇಷ

ಕೆಂಪು ರೌದ್ರತೆಯ ಸಂಕೇತವಾಗಿರುವುದರಿಂದ ರಾಕ್ಷಸ ಪಾತ್ರಕ್ಕೆ ಕೆಂಪು ಬಣ್ಣವನ್ನು ಗಾಢವಾಗಿ ಹಚ್ಚುತ್ತಾರೆ. ದಪ್ಪನಾದ ಗಲ್ಲಿ ಮೀಸೆಗೆ ಕಪ್ಪು ಬಣ್ಣ ಅಥವಾ ಕುರಿ ಉಣ್ಣೆಯನ್ನು ಹಚ್ಚುತ್ತಾರೆ. ಕಣ್ಣು ರೆಪ್ಪೆಯ ಮೇಲೆ ಕೆಳಗೆ ಕಪ್ಪು ಕೆಂಪು ಬಣ್ಣ ಹಚ್ಚಿ ಬಿಳಿಯ ಚುಕ್ಕೆಗಳನ್ನು ಹಚ್ಚುತ್ತಾರೆ. ರಾಕ್ಷಸಿಯ ಪಾತ್ರಕ್ಕೆ ಕೂದಲು ರಾಶಿಯೇ ಪ್ರಮುಖವಾದದ್ದು. ಹತ್ತಾರು ಚೌರಿ ಕೂದಲು ಬಳಸಿ ದಟ್ಟವಾಗಿ ಕಾಣುವಂತೆ ಹಿಂಭಾಗ ಮತ್ತು ಮುಂಭಾಗದಲ್ಲಿ ಬಿಟ್ಟುಕೊಳ್ಳುತ್ತಾರೆ. ಬಿಳಿಯ ಕೋರೆಹಲ್ಲುಗಳನ್ನು ಬಿಳಿ ಬಣ್ಣದಿಂದ ಬರೆಯುತ್ತಾರೆ. ಕೆನ್ನೆಗಲ್ಲಗಳಿಗೂ ಕಪ್ಪು ಬಣ್ಣ ಹಚ್ಚಿ ಬಿಳಿಯ ಚುಕ್ಕೆಗಳನ್ನು ಇಟ್ಟಿರುತ್ತಾರೆ. ಒಟ್ಟಾಗಿ ರೌದ್ರ, ಘೋರ, ಭಯಾನಕವಾಗಿ ತೋರ್ಪಡಿಸುವಂತೆ ಬಣ್ಣಗಳನ್ನು ಹಚ್ಚುತ್ತಾರೆ.

ಮೇಳಗಳು ಹಾಗೂ ವಾದ್ಯ ವಿಶೇಷ

ಜನಪದ ಪ್ರದರ್ಶನ ಕಲೆಗಳಿಗೆ ವಾದ್ಯ ಮತ್ತು ಮುಮ್ಮೇಳ ಹಾಗೂ ಹಿಮ್ಮೇಳಗಳು ಪ್ರಧಾನ ವಾದವು. ಇಲ್ಲಿ ಮೇಸ್ತ್ರು ಹಾರ್ಮೋನಿಯಂ ನೊಂದಿಗೆ ಕುಳೀತಿರುತ್ತಾರೆ. ಇತರ ವಾದ್ಯದವರು ಮೇಳದವರು ಆತನ ಎಡ ಬಲಗಳಲ್ಲಿ ಕುಳೀತಿರುತ್ತಾರೆ. ಮುಮ್ಮೇಳದಲ್ಲಿ ಮೇಸ್ತ್ರು ಒಬ್ಬರೇ ಇದ್ದು ಹಿಮ್ಮೇಳದವರು ೩ ರಿಂದ ೬ ಜನ ಇರುತ್ತಾರೆ. ಯಕ್ಷಗಾನದಲ್ಲಿ ಇವರುಗಳನ್ನು ಭಾಗವತರೆಂದು ಕರೆಯುತ್ತಾರೆ. ಬಯಲಾಟದಲ್ಲಿ ಕಥಾನಾಯಕ ಮೇಸ್ತ್ರು ಎನ್ನುತ್ತಾರೆ. ಒಬ್ಬನು ಬಯಲಾಟ ಪದವನ್ನು ಹಾಡುತ್ತಾನೆ. ಅದನ್ನು ಹಿಮ್ಮೇಳದವರು ಹೇಳುತ್ತಾರೆ. ಬಯಲಾಟದ ಪ್ರಮುಖ ಅಂಗ ಇದಾಗಿದ್ದು ಸಂಗೀತ, ತಾಳ, ಲಯ ಗಳು ಹಾಡುಗಾರಿಕೆ ವಿಶೇಷವಾಗಿರುತ್ತದೆ. ಸ್ತ್ರೀ ಪಾತ್ರದ, ನಾರದ, ದೇವೇಂದ್ರನ ಪಾತ್ರದ ಹಾಡುಗಳನ್ನು ಈ ಮೇಳದವರೇ ಹೇಳುತ್ತಾರೆ. ಪಾತ್ರಗಳು ವೇದಿಕೆಗೆ ಬಂದಾಗ

ಆ ಪಾತ್ರಗಳಿಗಾಗಿರುವ ಹಾಡುಗಳನ್ನು ಹೇಳಿ ಆ ಪಾತ್ರಗಳನ್ನು ಕೆಲವು ನಿಮಿಷಗಳ ಕಾಲ ವೇದಿಕೆಯ ಮೇಲೆ ಕುಣಿಸುತ್ತಾರೆ. ಇವರ ಹಾಡಿಸಿದ ನಂತರ ಪಾತ್ರಗಳು ತಮ್ಮ ಮಾತುಗಳನ್ನು ಪ್ರಾರಂಭಿಸುತ್ತವೆ. ಪಾತ್ರಗಳು ಮಧ್ಯದಲ್ಲಿ ಮಾತನ್ನೇನಾದರೂ ಮರೆತರೆ ಈ ಮೇಳದವರು ರಸಭಂಗವಾಗದಂತೆ ಹಾಡಿನ ಭಾಗ, ಮಾತಿನ ಭಾಗ ಎತ್ತಿಕೊಡುತ್ತಾರೆ ನಂತರ ಪಾತ್ರಗಳು ಯಥಾರೀತಿ ತಮ್ಮ ಮಾತುಗಳನ್ನು ಮುಂದುವರಿಸುತ್ತಾರೆ.

ಬಯಲಾಟದ ಹಾಡುಗಾರಿಕೆ ಪಾರಂಪರಿಕವಾದದ್ದಾಗಿದೆ. ಶೃತಿ-ಲಯ ತಾಳಗಳಿಂದ ಹಲವು ಸಂಗೀತಗಳ ರಾಗಗಳಿಂದ ವಿಶಿಷ್ಟವಾಗಿ ಸಂಯೋಜನೆ ಗೊಂಡಿರುತ್ತವೆ. ಇವು ವೀರ-ರೌದ್ರ-ಶೃಂಗಾರ ರಸಗಳನ್ನು ಹೊಂದಿರುತ್ತವೆ. ಅತಿ ಎತ್ತರದ ಧ್ವನಿಯಲ್ಲಿ ಹಾಡುವುದು ಇಲ್ಲಿನ

ರಾಗಗಳ ವೈಶಿಷ್ಟ್ಯತೆ ಮತ್ತು ಮಾಧುರ್ಯತೆಗೆ ಕಾರಣವಾಗಿದೆ. ಇವು ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಇರುತ್ತವೆ. ಪ್ರತಿ ರಸಕ್ಕೂ ಒಂದೊಂದು ರಾಗವು ಮೀಸಲಾಗಿರುತ್ತದೆ. ಆದಕಾರಣ ಮೇಳಗಳು ಬಯಲಾಟಕ್ಕೆ ಮಾತ್ರದಲ್ಲಿ ಎಲ್ಲಾ ಜನಪದ ಮೇಳಗಳಲ್ಲಿ ಅತ್ಯಾವಷ್ಯಕವಾಗಿರುತ್ತವೆ. ಮೇಳದಲ್ಲಿ ಮುಮ್ಮೇಳದವನು ರಂಗ ಪ್ರಯೋಗದಂದು ಅತಿ ಎತ್ತರದಲ್ಲಿ ಗಣಸ್ತುತಿ ಆರಂಭಿಸಿದರೆ ಬಯಲಾಟ ಪ್ರಾರಂಭ ವಾಯಿತೆಂದು ಎಲ್ಲರೂ ಬೇಗನೆ ಬರುತ್ತಾರೆ. ಅದಕ್ಕಾಗಿ ಎತ್ತರದ ದನಿಗಳೇ ಮೇಳದ ವೈಶಿಷ್ಠತೆಗೆ ಕಾರಣವಾಗಿದೆ. ರಾತ್ರಿ ಹತ್ತಕ್ಕೆ ಪ್ರಾರಂಭವಗುವ ಈ ಮೇಳದ ಹಾಡುಗಳು ಸುತ್ತ ಹತ್ತು ಹಳ್ಳಿಗೂ ಕೇಳುವಂತೆ ಎತ್ತರದ ದನಿಯಲ್ಲಿ ಹಾಡುತ್ತಾರೆ. ಇಂಥ ಕಂಠಕ್ಕೆ ಸಂಡೂರಿನ ಮೌನಾಚಾರಿ, ಸರಾಯದ ತಿಪ್ಪೇಸ್ವಾಮಿ, ಅಮರಪ್ಪ ಹಾಗೂ ಸುಲ್ತಾನ್ ಸಾಬ್ ಅವರು ಬಹಳ ಹೆಸರಾದವರು. ಕೆಲವು ಸ್ತುತಿಗಳನ್ನು ಈ ಮಾಸ್ಟರ್‌ರವರೇ ರಚಿಸಿ ರಾಗ ಸಂಯೋಜನೆ ಮಾಡುತ್ತಿದ್ದರು. ಇಲ್ಲಿನ ಹಾಡುಗಳು ಪ್ರಾಸಭರಿತ ವಾದ ಕಾರಣ ನೆನಪಿನಲ್ಲಿಟ್ಟುಕೊಳ್ಳಲು ಹಾಡಲು ಅನುಕೂಲವಾಗಿರುತ್ತವೆ.

ವಾದ್ಯಗಳು

ಜನಪದ ಹಾಡುಗಾರಿಕೆಯಲ್ಲಿ ಯಾವುದಾದರೊಂದು ವಾದ್ಯಗಳು ವಿಶೇಷವಾಗಿರುತ್ತವೆ. ಇಲ್ಲಿ ತಂತೀವಾದ್ಯಗಳು, ತಾಳ, ಮದ್ದಲೆ ಹಾರ್ಮೋನಿಯಂ, ತಬಲ ಚರ್ಮವಾದ್ಯಗಳು ಇರುತ್ತವೆ. ಹಿಂದಿನ ಕಾಲದಲ್ಲಿ ತಾಳ ಮದ್ದಳೇ ಹಾರ್ಮೋನಿಯಂ ಪ್ರಮುಖವಾದ್ಯಗಳಾಗಿದ್ದವು. ತಾಳಮದ್ದಳೆಗಳೇ ಬಯಲಾಟಕ್ಕೆ ವಿಶಿಷ್ಠ ಪ್ರಧಾನ ವಾದ್ಯಗಳು. ನಂತರ ದಿನಗಳಲ್ಲಿ ತಬಲವನ್ನು ಬಳಸುತ್ತಿದ್ದಾರೆ. ತಾಳ ಮದ್ದಳೆಗಳ ನಾದಕ್ಕೆ ತಕ್ಕಂತೆ ಪಾತ್ರಧಾರಿಗಳು ಎರಡು ನಾಲ್ಕು ಹೆಜ್ಜೆಗಳಿಂದ ಕುಣಿಯುತ್ತಾರೆ. ಇವುಗಳ ಶಬ್ದ ಹೆಚ್ಚಾದಂತೆ ಪಾತ್ರಧಾರಿಗಳು ಆವೇಷದಿಂದ ತೀವ್ರವಾಗಿ ಕುಣಿಯುತ್ತವೆ. ತಾಳ ಮತ್ತು ಮದ್ದಳೆಗಳೊಂದಿಗೆ ಹಿಂದೆ ಸೋರೆ ಬುರುಡೆಯನ್ನು ಬಳಸುತ್ತಿದ್ದರು. ಕ್ಲಾರನೆಟ್ ಎಂಬ ಕೊಳವೆ ವಾದ್ಯಗಳನ್ನು ದಿಲ್‌ರುಬ ಎಂಬ ಪಿಟೀಲು ಮಾದರಿಯ ವಾದ್ಯಗಳ್ನು ಹಿಂದೆ ಬಳಸುತ್ತಿದ್ದರು.

ಶೃತಿ ಪೆಟ್ಟಿಗೆ

ಹಾರ್ಮೋನಿಯಂ ಮಾದರಿಯ ಈ ಪೆಟ್ಟಿಗೆ ದೊಡ್ಡ ಗಾತ್ರದಲ್ಲಿದ್ದು ಎತ್ತರದಲ್ಲಿ ನಿಲ್ಲಿಸಿ ಕಾಲಿನಿಂದ ಒತ್ತಿ ಬಾರಿಸುತ್ತಿದ್ದರು. ಇದು ಸಂಡೂರಿನಲ್ಲಿ ಮೌನಾಚಾರಿಯವರ ಮನೆಯಲ್ಲಿ ಇಂದಿಗೂ ಇದೆ. ಇದನ್ನೇ ಹೆಚ್ಚಾಗಿ ಬಳಸುತ್ತಾರೆ. ೨೦೦೬ ರಲ್ಲಿ ಆಡಿದ ಬಯಲಾಟಕ್ಕೆ ಇದನ್ನು ಬಳಸಿದ್ದಾರೆ. ಈ ವಾದ್ಯವಿಲ್ಲದೆ ಶೃತಿ ಎತ್ತುವುದು ಹಾಡುಗಾರರಿಗೆ ಸಾಧ್ಯವಾಗುವುದಿಲ್ಲ.

ಮೃದಂಗ

ಬಯಲಾಟದ ಪಕ್ಕಾ ವಾದ್ಯಗಳೆಂದರೆ ಮೃದಂಗ ಮತ್ತು ತಾಳಗಳು ಎರಡೂ ಕೈಯಬೆರಳು, ಅಂಗೈಗಳನ್ನು ಬಡಿದು ಮೀಟಿ ನುಡಿಸುತ್ತಾರೆ. ಇದು ಚರ್ಮವಾದ್ಯವಾಗಿದೆ. ವಿವಿಧ ಬಗೆಯ ತಾಳಗಳ ವೈವಿದ್ಯಕ್ಕೆ ಸಮನಾದ ತರಂಗವನ್ನು ಉಂಟುಮಾಡಿ ಕುಣಿತಕ್ಕೆ ಹಾಡಿ ಹಾಗೂ ಹೆಚ್ಚಿನ ರಂಗು ತಂದುಕೊಡುತ್ತದೆ. ಕುಣಿತಕ್ಕೆ ಆರಂಭ ಮುಕ್ತಾಯ ತೀವ್ರತೆಯನ್ನು ಈ ವಾದ್ಯ ತಂದುಕೊಡುತ್ತದೆ. ಮದ್ದಳೆಯ ಧ್ವನಿಗಳು ದಿತ್ತಾ, ತೊಂತಾ, ತಾಕಿಟ, ತದ್ಧಿನ್ನಾ, ಧಿತ್ತೈ, ದಿಧ್ಧಿತ್ತೈ ಮಾದರಿಯಲ್ಲಿದ್ದು ಎರಡು ಮೂರು ನಾಲ್ಕು ಹೆಜ್ಜೆಗಳಿಗೆ ಅನುಗುಣವಾಗಿರುತ್ತವೆ. ಕುಣಿತದ ತೀವ್ರತೆ ಹೆಚ್ಚಾಗಿದ್ದಲ್ಲಿ ಇದರ ಧ್ವನಿಯೂ ತೀವ್ರವಾಗಿರುತ್ತದೆ. ಪಾತ್ರಗಳು ಪ್ರವೇಶ ಮಾಡುವಾಗ, ಕುಣಿಯುವಾಗ, ಹಾರುವಾಗ, ಹೆಚ್ಚಾಗಿ ಅಧಿಕ ಶಬ್ದವಾಗುವಂತೆ ಬಾರಿಸುತ್ತಾರೆ. ಹಾಡುವಾಗ ಹಾಡಿನ ತಾಳಕ್ಕೆ ತಕ್ಕಂತೆ ಬಾರಿಸುತ್ತಾರೆ. ಇದನ್ನು ಗಂಭೀರ, ಸೌಮ್ಯ ವಿವಿಧ ಭಾವಗಳಲ್ಲಿ ಬಾರಿಸುತ್ತಾರೆ.

ತಾಳ

ಲೋಹದ ಮತ್ತು ಕಂಚಿನಿಂದ ತಯಾರಿಸಿದ ಅಂಗೈ ಅಗಲದಿಂದ ಚಿಕ್ಕ ತಟ್ಟೆಯಷ್ಟು ಅಗಲವಿರುವ ಈ ವಾಧ್ಯಗಳು ಮಧ್ಯ ಬಟ್ಟಲು ಆಕಾರದಲ್ಲಿದ್ದು ಅಂಚು ಒಂದಕ್ಕೊಂದು ಬಡಿಯುವಂತೆ ೧ ಇಂಚು ೨ ಇಂಚು ಅಗಲವಿರುತ್ತದೆ. ಇದಕ್ಕೆ ಬಟ್ಟಲು ತಾಳಗಳೆಂದೇ ಕರೆಯುತ್ತಾರೆ. ಹಿಂದೆ ಸ್ವಲ್ಪ ದಪ್ಪದ ದಾರ ಕಟ್ಟಿದ್ದು ಹಿಡಿದು ಕೊಳ್ಳಲು ಅನುಕೂಲಕರ ವಾಗಿರುತ್ತದೆ. ಬಯಲಾಟದ ಹಾಡುಗಳು ರಾಗಕ್ಕಿಂತ ತಾಳ ಪ್ರಧಾನವಾದ ಕಾರಣ ತಾಳಲಯ ಪ್ರಮುಖವಾಗಿರುತ್ತದೆ. ಆರು ಜೊತೆ ತಾಳಗಳನ್ನು ಒಂದು ಮೇಳ ಹೊಂದಿರುತ್ತದೆ.

ಕ್ಲಾರ್‌ನೆಟ್ ಮತ್ತು ದಿಲ್‌ರುಬ

ಕ್ಲಾರ್‌ನೆಟ್ ಕೊಳವೆ ಮಾದರಿಯ ವಾದ್ಯವಾಗಿದ್ದು ಇದು ಕೂಡ ಬಯಲಾಟದ ಪಕ್ಕಾ ವಾದ್ಯವಾಗಿದೆ. ಶೃತಿಗಾಗಿ ಈ ವಾದ್ಯ ಬಳಸುತ್ತಾರೆ.

ದಿಲ್‌ರುಬ ಪಿಟೀಲು ಮಾದರಿಯ ವಾದ್ಯವಾಗಿದೆ. ಇದು ಕರ್ನಾಟಕ ಸಂಗೀತದ ಪಕ್ಕಾ ವಾದ್ಯವಾಗಿದ್ದು ಬಯಲಾಟದಲ್ಲಿ ಇದರ ಬಳಕೆಯೂ ಇದೆ. ಸನಾದಿಯನ್ನೂ ಬಳಸುತ್ತಿದ್ದರು.

ಇಂದಿನ ದಿನಗಳಲ್ಲಿ ಆಧುನಿಕ ವಾದ್ಯಗಳು ಹೆಚ್ಚುತ್ತಿವೆ. ಸೌಲಭ್ಯಗಳೂ ಹೆಚ್ಚುತ್ತಿವೆ. ಹಿಂದೆ ಧ್ವನಿವರ್ಧಕಗಳ ಬಳಕೆಯಿಲ್ಲದೆ ಈ ವಾದ್ಯಗಳ ತೀವ್ರತೆ ಮತ್ತು ಎತ್ತರದ ಧ್ವನಿಯೇ ಬಂಡವಾಳವಾಗಿರುತಿತ್ತು. ಆದರೆ ಇಂದಿನ ದಿನಗಳಲ್ಲಿ ಧ್ವನಿವರ್ಧಕಗಳ ಸಹಾಯದಲ್ಲಿ ಸುಲಭವಾಗಿ ಅನಾಯಾಸವಾಗಿ ನಡೆಯುತ್ತದೆ.

ಆಟದ ಸಿದ್ಧತೆ ಮತ್ತು ರಂಗತಾಲೀಮು, ಪ್ರಚಾರ

ಪಾರಂಪರಿಕವಾಗಿ ಸಾಂಸ್ಕೃತಿಕವಾಗಿ ಬಯಲಾಟಗಳು ಬೆಳೆದು ಬಂದಿರುವ ಕಾರಣ ಇವುಗಳ ಹಿಂದೆ ಒಂದು ಸಂಪ್ರದಾಯವಿದೆ. ಎಲ್ಲೆಂದರೆ ಅಲ್ಲಿ ಬೇಕೆಂದಾಗ ಬಯಲಾಟಗಳು ನಡೆಯುವುದಿಲ್ಲ. ಗೊತ್ತಾದ ಅವಧಿಯೊಂದರಲ್ಲಿ ಹವ್ಯಾಸಿಯಾಗಿ ಈ ಪ್ರದರ್ಶನ ಕಲೆಗಳು ಜರುಗುತ್ತವೆ. ಸಾಮಾನ್ಯವಾಗಿ ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವ ಇಂಥ ಸಂಧರ್ಭಗಳಲ್ಲಿ ಇವು ಪ್ರದರ್ಶನಗೊಳ್ಳುತ್ತವೆ. ಇಂಥ ಸ್ಥಳದಲ್ಲಿ ಇಂಥ ಸಂಧರ್ಭದಲ್ಲಿ ಇಂಥದೇ ಆಟ ಆಡಬೇಕೆಂದು ಪ್ರತೀತಿ ಇರುತ್ತದೆ. ಆಗ ಅವುಗಳನ್ನು ಪ್ರದರ್ಶಿಸುತ್ತಾರೆ. ಕಾರಣ ಬಯಲಾಟ ಕಲೆಯು ಹುಟ್ಟಿದ್ದೇ ರೈತ ವರ್ಗದ ಜನರಲ್ಲಿ ಇದರಿಂದ ಅವರು ತಮ್ಮ ಬಿಡುವಿನ ವೇಳೆಯಲ್ಲಿ ಮನೋರಂಜನೆಗಾಗಿ ಆಡುತ್ತಾರೆ. ಇದಕ್ಕಾಗಿ ಸೂಕ್ತ ಕಾಲವೆಂದರೆ ಸುಗ್ಗಿಯ ನಂತರದ ಕಾಲ ಈ ಆಟಗಳು ಹೆಚ್ಚಾಗಿ ಯುಗಾದಿಯಿಂದ ಶಿವರಾತ್ರಿಯ ನಡುವಿನ ಕಾಲಾವಧಿಯಲ್ಲಿ ನಡೆಯುತ್ತವೆ.

ಸಂಡೂರಿನಲ್ಲಿ ದಸರಾ, ಶಿವರಾತ್ರಿ, ಯುಗಾದಿ ಹಾಗೂ ಸುಗ್ಗಿಯನಂತರದ ದಿನಗಳಲ್ಲಿ ಆಡುತ್ತಿದ್ದರು. ಕಾರಹುಣ್ಣಿಮೆ ಸಂದರ್ಭದಲ್ಲಿ ಎತ್ತುಗಳ ಮೆರವಣಿಗೆ ಮತ್ತು ಓಟದ ಸ್ಪರ್ಧೆಗಳು ನಡೆಯುತ್ತವೆ. ಆ ಸಂಧರ್ಭದಲ್ಲಿಯೇ ಇಲ್ಲಿ ಬಯಲಾಟಗಳೂ ಪ್ರದರ್ಶನಗೊಳ್ಳುತ್ತವೆ.

ಆಟದ ಸಿದ್ಧತೆ

ಸಂಡೂರಿನಲ್ಲಿ ಮುಖ್ಯವಾಗಿ ಆಟ ನಡೆಸಬೇಕೆಂದುಕೊಂಡ ಮೇಲೆ ಅಲ್ಲಿನ ಬಯಲಾಟದ ಮೇಳದವರು, ಕೇರಿಯ ಪ್ರಮುಖರು ಬಂದು ಸೇರುತ್ತಿದ್ದರು. ಮತ್ತು ಈ ವಿಚಾರ ಕುರಿತು ಚರ್ಚಿಸುತಿದ್ದರು. ಮೊದಲು ಕಥೆಯನ್ನು ಆಯ್ಕೆ ಮಾಡಿಕೊಂಡು ಅದನ್ನು ಯಾವ ಹಬ್ಬಹುಣ್ಣಿಮೆಗಳಂದು ಆಡ ಬೇಕೆಂದು ಆ ಸಭೆಯಲ್ಲಿ ನಿರ್ಧರಿಸಲಾಗುತಿತ್ತು. ಹಬ್ಬ ಹುಣ್ಣಿಮೆಗಳ ಸಂದರ್ಭಗಳಲ್ಲಿ ಹೆಚ್ಚಾಗಿ ಭಕ್ತಿ ಪ್ರಧಾನವಾದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಉಳಿದ ಸಮಯದಲ್ಲಿ ವೀರರಸ ಪ್ರಧಾನವಾದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆ ಕಥೆಯ ಸಾಹಿತ್ಯವನ್ನು ತಿಳಿದಿರುವ ಅದರ ರಾಗ, ತಾಳ, ಮಾತುಗಳನ್ನು ತಿಳಿದಿರುವ ಕಥಾನಾಯಕನನ್ನು ಗೊತ್ತು ಮಾಡುತ್ತಿದ್ದರು. ಅವರು ಒಪ್ಪಿಗೆ ಸೂಚಿಸಿದ ನಂತರ ಅಲ್ಲಿಯೇ ಕಥೆಗೆ ಬೇಕಾದ ಪಾತ್ರಗಳ ವಿವರಣೆ ನೀಡುತ್ತಿದ್ದ ಕಥಾನಾಯಕ (ಮೇಷ್ಟ್ರು) ಪಾತ್ರಗಳಿಗೆ ಸರಿಹೊಂದುವ ಪಾತ್ರಧಾರಿಗಳನ್ನು ಅವರ ಒಪ್ಪಿಗೆಯ ಮೇಲೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ನಂತರ ಹಣ ಹೂಡಿಕೆ ವಿಚಾರ ಮಾಡುತ್ತಿದ್ದರು. ಹವ್ಯಾಸಿಯಾಗಿ ಆಡುತ್ತಿದ್ದ ಕಾರಣ ಪ್ರತಿ ಪಾತ್ರಗಳು ಇಷ್ಟು ಹಣವನ್ನು ಆಟಕ್ಕೆ ನೀಡ ಬೇಕಾಗಿತ್ತು. ಆ ಹಣವನ್ನು ಸಂಗ್ರಹಿಸಲು ಮ್ಯಾನೇಜರ್‌ನ್ನು ಗುರುತುಪಡಿಸಿ ಪಾತ್ರಧಾರಿಗಳು ಹಣವನ್ನು

ಮ್ಯಾನೇಜರ್ ಕೈಗೆ ನೀಡುವಂತೆ ಹೇಳುತ್ತಿದ್ದರು. ನಂತರ ಕೇರಿಯ ದೇವಸ್ಥಾನ ಮಸೀದಿ ಅಥವಾ ಅದಕ್ಕಾಗಿ ಗೊತ್ತು ಪಡಿಸಿದ ಮನೆಯೊಂದನ್ನು ಬಾಡಿಗೆ ತೆಗೆದುಕೊಂಡು ಅಲ್ಲಿ ಆಟದ ತರಬೇತಿ (ರಂಗತಾಲೀಮು) ನೀಡಲಾಗುತ್ತಿತ್ತು.

ರಂಗ ತಾಲೀಮು (ಪ್ರಾಕ್ಟೀಸ್)

ಬಯಲಾಟದ ಕಥೆ, ಪಾತ್ರಗಳು ಗೊತ್ತಾದ ನಂತರ ನಿಗದಿಪಡಿಸಿದ ಸ್ಥಳವೊಂದರಲ್ಲಿ ರಂಗತಾಲೀಮು ನಡೆಸಲಾಗುತ್ತಿತ್ತು. ಇದನ್ನು ಆಟದ ಮನೆ ಎಂದು ಕರೆಯುತ್ತಿದ್ದು ಕೇರಿಯೊಂದರ ಮನೆ, ದೇವಸ್ಥಾನ, ಮಸೀದಿಯಲ್ಲಿಯೇ ಹೆಚ್ಚಾಗಿ ಕಲಿಸಲಾಗುತ್ತಿತ್ತು. ಪ್ರದರ್ಶನಕ್ಕೆ ಗೊತ್ತುಪಡಿಸಿದ ಸಂದರ್ಭಕ್ಕಿಂತ ೩ ತಿಂಗಳು ಮುಂಚಿತವಾಗಿಯೇ ತಾಲೀಮು ನಡೆಸಿ ೪ ನೇ ತಿಂಗಳಲ್ಲಿ ಆಟ ನಡೆಯುತ್ತಿತ್ತು. ಪ್ರತಿ ನಿತ್ಯ ರಾತ್ರಿ ೮ ಘಂಟೆ ಯಿಂದ ೧ ಘಂಟೆಯವರೆಗೆ ಪ್ರಾಕ್ಟೀಸ್ ಮಾಡುತ್ತಿದ್ದರು. ಹೆಚ್ಚಾಗಿ ಹೊಲಮನೆ ಕೆಲಸ ಮಾಡುವವರು, ರೈತರು ಇರುತ್ತಿದ್ದ ಕಾರಣ ರಾತ್ರಿಯೇ ಅವರಿಗೆ ಬಿಡುವಿನ ವೇಳೆಯಾಗಿರುತ್ತಿತ್ತು. ಆದ್ದರಿಂದ ರಂಗತಾಲೀಮು ರಾತ್ರಿಯಲ್ಲಿಯೇ ನಡೆಯುತಿತ್ತು.

ಆಟಕ್ಕೆ ಯಾವುದೇ ವಿಘ್ನ ಬಾರದಿರಲಿ ಎಂದು ವಿಘ್ನೇಶ್ವರನ ಪೂಜೆ ಮಾಡಿ ರಂಗತಾಲೀಮು ಪ್ರಾರಂಭಿಸುತ್ತಿದ್ದರು. ಸರಿಯಾದ ಸಮಯಕ್ಕೆ ಪಾತ್ರಧಾರಿಗಳು ತಪ್ಪದಂತೆ ಹಾಜರಾಗಬೇಕಿತ್ತು. ರಂಗ ತಾಲೀಮು ಮಾಡುವಲ್ಲಿ ಪಾತ್ರಧಾರಿಗಳು ತಪ್ಪಿದಲ್ಲಿ ಸರಿಯಾಗಿ ತಾಲೀಮು ನಡೆಸದಿದ್ದಲ್ಲಿ ಕಥಾನಾಯಕ (ಮೇಷ್ಟ್ರು) ಆದವರು ಅವರನ್ನು ಥಳಿಸಿಯೇ ಹೇಳೀಕೊಡುತ್ತಿದ್ದರು. ಸಂಪೂರ್ಣವಾಗಿ ರಂಗ ತಾಲೀಮು ನಡೆದ ನಂತರ ಗೆಜ್ಜೆ ಪೂಜೆ ಮಾಡಲಾಗುತ್ತಿತ್ತು.

ಗೆಜ್ಜೆ ಪೂಜೆ

ಬಯಲಾಟದಲ್ಲಿ ಪ್ರಮುಖವಾದ ಅಂಶವಾಗಿದೆ. ಅಂದಿನ ದಿನ ರಾತ್ರಿ ೯ ಗಂಟೆಗೆ ಸರಿಸುಮಾರು ಕಥಾನಾಯಕ ಎಲ್ಲಾ ಪಾತ್ರಧಾರಿಗಳನ್ನು ಕರೆಸಿ ವೇಷಭೂಷಣ ವಿಲ್ಲದೇ ಬರಿಗೆಜ್ಜೆ ಕಟ್ಟಿ ಸಂಪೂರ್ಣ ಆಟವನ್ನು ಆಡಿ ತೋರಿಸುತ್ತಿದ್ದರು. ಇದಕ್ಕೆ ಗೆಜ್ಜೆಪೂಜೆ ಎನ್ನುತ್ತಾರೆ.

ಗೆಜ್ಜೆಪೂಜೆಯ ನಂತರದ ಆಟವನ್ನು ಕೇರಿಯ ಹಿರಿಯರು, ಜನರು ಸಮ್ಮತಿಸಿದ ನಂಥರ ೮ ರಿಂದ ೧೦ ದಿನಗಳಲ್ಲಿ ಆಟದ ದಿನ ಗೊತ್ತು ಮಾಡುತ್ತಿದ್ದರು. ಅವರು ಇನ್ನು ತಾಲೀಮು ನಡೆಸಬೇಕೆಂದರೆ ೧ ರಿಂದ ೧ ೧/೨ ತಿಂಗಳು ಮತ್ತೆ ರಂಗತಾಲೀಮು ನಡೆಸುತ್ತಿದ್ದರು.

ಪ್ರಚಾರ

ಆಟದ ದಿನ ಗೊತ್ತಾದ ನಂತರ ಹ್ಯಾಂಡ್‌ಬಿಲ್‌ಗಳನ್ನು ಮುದ್ರಿಸಿ ಊರೆಲ್ಲಾ ಹಂಚುತ್ತಿದ್ದರು. ಬಂಡಿಯಲ್ಲಿ ಆಟದ ಹೆಸರಿನ ಬ್ಯಾನರ್ ಕಟ್ಟಿ ಊರಲ್ಲಿ ಸುತ್ತ ಮುತ್ತ

ಹತ್ತುಹಳ್ಳಿಗಳಲ್ಲಿ ಪ್ರಚಾರ ಮಾಡುತ್ತಿದ್ದರು. ಸಂಡೂರಿನಲ್ಲಿ ಬಯಲಾಟ ನಡೆಯುತ್ತದೆ ಎಂದರೆ ಧರ್ಮಾಪುರ, ಹೊಸಳ್ಳಿ, ಲಕ್ಷ್ಮೀಪುರ, ನಂದಿಹಳ್ಳಿ, ತಾರಾನಗರ, ತೋರಣಗಲ್ಲು, ಸುಶೀಲಾನಗರಗಳಿಂದ ಜನರು ನೋಡಲು ಬರುತ್ತಿದ್ದರು.

ಅಭಿನಯದಲ್ಲಿ ವಿಶೇಷತೆ

ಬಯಲಾಟದ ಸಾಹಿತ್ಯಿಕ ರೂಪದಲ್ಲಿ ಅದರ ವಸ್ತು. ಭಾಷೆ ಸಂಭಾಷಣೆ, ಹಾಡುಗಾರಿಕೆ ಇವು ಸೇರುತ್ತವೆ. ಕ್ರಿಯಾತ್ಮಕ ರೂಪದಲ್ಲಿ ಕಲಾತ್ಮಕವಾಗಿ ವ್ಯಕ್ತಗೊಳ್ಳುವ ಆಂಗಿಕ ಅಭಿನಯ, ಕುಣಿತ, ವಾದ್ಯ ಮುದ್ರೆಗಳು ಆಚರಣೆ ನಂಬಿಕೆಗಳು ಸೇರುತ್ತವೆ. ಬಯಲಾಟಗಳಲ್ಲಿನ ದೃಶ್ಯ, ಅಭಿನಯ ಕುಣಿತಾದಿಗಳು ಆಯಾ ಪ್ರದೇಶದಲ್ಲಿನ ವಿಶಿಷ್ಟವೆನ್ನಿಸಿ ಇವು ದೇಶೀಯ ರೂಪಗಳೆನಿಸಿಕೊಳ್ಳುತ್ತವೆ. ಬಯಲಾಟದಲ್ಲಿ ಒಂದು ವಸ್ತು ಅಥವಾ ವಿಷಯವನ್ನು ಜನರಿಗೆ ತಿಳಿಯುವಂತೆ ಹೇಳಬೇಕಾದರೆ ನಾನಾವಿಧದ ಆಂಗಿಕ ಅಭಿನಯ, ಭಾವನೆ, ಧ್ವನಿಯ ಮೂಲಕ ವ್ಯಕ್ತ ಪಡಿಸಬೇಕು. ಹೀಗಾಗಿ ನವರಸಗಳ ಅಗತ್ಯವೂ ಇಲ್ಲಿದೆ. ರಸಗಳಿಂದ ಅಭಿನಯಕ್ಕೆ ವಿಶಿಷ್ಟ ರಂಗು ಬರುತ್ತದೆ.

ಅಭಿನಯದಲ್ಲಿ ಪ್ರೀತಿ, ದುಃಖ, ಖುಷಿ, ಶಾಂತ, ಭಯ ಮೊದಲಾದ ಭಾವನೆಗಳನ್ನು ಮೂಡಿಸಬೇಕಾಗುತ್ತದೆ. ಈ ಎಲ್ಲಾ ಲಕ್ಷಣಗಳಿಗೆ ಸಂಬಂಧಿಸಿದಂತೆ ಅಭಿನಯಿಸುವುದು ಪ್ರಮುಖ. ಇದರೊಂದಿಗೆ ಕುಣಿತವೂ ಬಯಲಾಟದಲ್ಲಿ ಅತೀ ಪ್ರಮುಖವಾದದ್ದು. ಭಾವನೆಗಳು ವ್ಯಕ್ತವಾಗುವುದರೊಂದಿಗೆ, ಕುಣಿತ ಮಾತುಗಳನ್ನು ಕೂಡಿ ಹೇಳುವುದು, ಮಾಡುವುದು ಅತೀ ಕಷ್ಟದ ಕೆಲಸವೇ ಸರಿ ಪ್ರತಿಯೊಂದು ಪ್ರಸಂಗಕ್ಕೂ ಒಂದೊಂದು ಭಾವ-ಕುಣಿತ ಇರುತ್ತದೆ. ಇದು ನಟನೆ ಮೇಲೆ ಅವಲಂಬಿತ ವಾಗಿರುತ್ತದೆ. ಅಭಿನಯದಲ್ಲಿ ಚಲನ ವಲನಗಳೂ ಸೇರಿರುತ್ತವೆ. ಅಂದರೆ ಪ್ರತಿ ಸಾರಿ ಹೆಜ್ಜೆ ಕುಣಿತ ಇಲ್ಲಿ ಪ್ರದರ್ಶಿತವಾಗುತ್ತದೆ. ಈ ಕುಣಿತವು ೩ ಹೆಜ್ಜೆಯಿಂದ ೯ ಹೆಜ್ಜೆಯ ವರೆಗೆ ಇದ್ದು ಪುರಷ ಪಾತ್ರಗಳಿಗೆ ಮತ್ತು ಸ್ತ್ರೀ ಪಾತ್ರಗಳಿಗೆ ಬೇರೆ ಬೇರೆ ಯಾಗಿರುತ್ತದೆ. ಇದಕ್ಕೆ ತಕ್ಕಂತೆ ಕುಣಿತದ ಬೋಲು (ಧಿತ್ತೈ, ಥಕತೈ, ತೊಂದಿತ್ತೊಂ) ಗಳು ಇರುತ್ತವೆ. ಇವನ್ನು ಅನುಸರಿಸಿ ಪಾತ್ರಧಾರಿ ಹೆಜ್ಜೆ ಹಾಕುತ್ತಾನೆ. ಕೆಲವೊಮ್ಮೆ ಅತೀ ತೀವ್ರಗತಿಯಲ್ಲಿ ಮಧ್ಯಮವಾಗಿನಿಧಾನಗತಿಯಾಗಿ ಇವು ಸಂದರ್ಭಕ್ಕೆ ಅನುಸಾರವಾಗಿ ಬದಲಾಗುತ್ತಿರುತ್ತವೆ. ಕುಣೀಯುತ್ತ ಒಮ್ಮೆ ಪಾದಗಳ ಮೇಲೆ ಅಥವಾ ಮಂಡಿಯ ಮೇಲೆ ಕುಳಿತು ಎದ್ದು ಕುಣಿತ ಮುಂದುವರೆಸುತ್ತಾರೆ. ಒಮ್ಮೊಮ್ಮೆ ಮೇಲೆ ನೆಗೆಯುವುದೂ ಉಂಟು ಈ ವೈಖರಿ ಬಳ್ಳಾರಿ ಜಿಲ್ಲೆಯಲ್ಲೇ ಅತಿ ಹೆಚ್ಚಾಗಿ ಕಂಡು ಬರುತ್ತದೆ. ಇದು ವಿಜೃಂಭಣೆಯಿಂದ ಕೂಡಿರುತ್ತದೆ.

ಸ್ತ್ರೀ ಪಾತ್ರದ ಕುಣಿತವೂ ಇಲ್ಲಿ ಇದ್ದು ಹೆಚ್ಚಾಗಿ ಒನಪು ವಯ್ಯಾರಗಳಿರುತ್ತದೆ. ಹೆಜ್ಜೆಕುಣಿತವು ಲಾಸ್ಯಕ್ಕೆ ಸಂಬಂಧಿಸಿದ ಪಾದ ವಿನ್ಯಾಸವಿರುತ್ತದೆ. ಇಲ್ಲಿಯೂ ನಿಧಾನ ಹಾಗೂ ತೀವ್ರಗತಿಯ ಹೆಜ್ಜೆ ಕುಣಿತ ಗಳಿದ್ದು ೩-೫-೯ ಹೆಜ್ಜೆ ಗಳದ್ದಾಗಿದೆ.

ಕುಣಿತಗಳ ಜೊತೆ ಭಂಗಿಗಳೂ ಇವೆ. ಪುರಷ ಮತ್ತು ಸ್ತ್ರೀ ಪಾತ್ರಕ್ಕೆ ಬೇರೆಯಾದ ಭಂಗಿಗಳಿವೆ. ಪುರಷ ಪಾತ್ರಗಳು ಬಲಗೈಯಲ್ಲಿ ಖಡ್ಗ ಹಿಡಿದು ಎಡ ಬಂದು ಮೊಣಕಾಲುವೂರಿ ಇನ್ನೊಂದು ಮಡಿಚಿ ನಿಲ್ಲುವುದು. ವೀರಾವೇಶದಲ್ಲಿ ಯುದ್ಧ ಮಾಡುವ ಸಂದರ್ಭದಲ್ಲಿ ಮೇಲೆ ನೆಗೆಯುವುದು ಪ್ರಮುಖವಾಗಿದೆ.

ಸ್ತ್ರೀ ಪಾತ್ರದಲ್ಲಿ ಟೊಂಕದ ಮೇಲೆ ಗದ್ದದ ಬಳಿ ಕೈಯಿಟ್ಟು ನರ್ತಿಸುವುದು ಪ್ರಮುಖವಾದ ಭಂಗಿಯಾಗಿದೆ.

ಹೀಗೆ ಬಯಲಾಟವೆಂದರೆ ಹಾವ-ಭಾವ ಕುಣಿತ ಮಾತು ರಸ ಎಲ್ಲಾ ಸೇರಿ ಅಭಿನಯಕ್ಕೆ ಪೂರಕವಾಗಿರುತ್ತದೆ.

ಬಯಲಾಟಗಳ ಹಾಡುಗಳೂ ಒಂದು ಪ್ರಮುಖ ಅಂಗ. ಬಯಲಾಟ ಪ್ರಾರಂಭವಾಗುವುದು ದೇವರ ಸ್ತುತಿಯ ಮೂಲಕ ಮೇಳದವರ ಹಾಡಿನೊಂದಿಗೆ ಆರಂಭವಾಗುತ್ತದೆ. ಪಾತ್ರಗಳು ಬಂದು ತಮ್ಮ ಮಾತುಗಳನ್ನು ಹೇಳಿ ಹೋದ ನಂತರ ಮತ್ತೊಂದು ಪಾತ್ರಗಳು ಪ್ರವೇಶವಾಗಿ ಹಿಮ್ಮೇಳದವರ ಹಾಡಿನಗತಿಗೆ ನೃತ್ಯಮಾಡುತ್ತಾರೆ. ನಂತರ ತಮ್ಮ ಮಾತುಗಳನ್ನು ಹೇಳುತ್ತಾರೆ. ಈ ಹಾಡುಗಗಳು ಎಲ್ಲಾ ರಾಗಗಳನ್ನು ಒಳಗೊಂಡಿರುತ್ತವೆ. ಸಂದರ್ಭಕ್ಕೆ ಅನುಗುಣವಾಗಿ ಹಾಡುಗಳನ್ನು ಕಥಾನಾಯಕ ರಚಿಸಿ ರಾಗ ಸಂಯೋಜನೆ ಮಾಡುತ್ತಾನೆ. ಇವುಗಳನ್ನು ವಾದ್ಯಗಳೊಂದಿಗೆ ಸುಶ್ರಾವ್ಯವಾಗಿ ಹಾಡುತ್ತಾರೆ.

ಬಯಲಾಟ ಇಡೀರಾತ್ರಿ ನಡೆಯುವ ಒಂದು ಸಂಪ್ರದಾಯಿಕತೆಯಾದ ಕಾರಣ ನೋಡುಗರಿಗೆ ಬೇಸರ ಬರದಂತೆ ಅದರಲ್ಲಿ ಹಾಸ್ಯ, ಗೀತೆ, ಸಂಗೀತ, ಹೀಗೆ ಹಲವು ಪ್ರಕಾರಗಳಿಂದ ಕೂಡಿರುತ್ತದೆ. ಒಂದರ ಕೊರತೆಯನ್ನು ಮತ್ತೊಂದು ತುಂಬಿಕೊಡುವುದರ ಮೂಲಕ ಈ ಕಲೆಯ ಪರಿಪೂರ್ಣತೆಗೆ ಕಾರಣಾಗಿವೆ. ಮಾತು ಎಷ್ಟೇ ಪ್ರಬಲವಾದರೂ ಅದು ಭಾವ ವಿನಿಮಯದ ಹಾಗೂ ವಿಚಾರ ಸರಣಿಯ ಪ್ರತಿಪಾದನೆಯ ಸಾಧನ. ಬರೀ ಮಾತುಗಳಿದ್ದರೆ ಬೇಸರ ತರುವ ಕಾರಣ ಸಂಗೀತ ಹಾಸ್ಯ ಬಳಸಿಕೊಂಡರು ಹೀಗೆ ಹಾಸ್ಯ, ಸಂಗೀತ, ವೀರರಸ, ನಟನೆ ಕುಣಿತಗಳು ಬಯಲಾಟದ ಪ್ರಮುಖ ಅಂಗಗಳಾದವು.

ಬಯಲಾಟದ ಕುಣಿತವನ್ನು ನೋಡಿದವರಿಗೆ ಅಲ್ಲಿನ ಭಾವಾಭಿವ್ಯಕ್ತಿಯೂ ಕಂಡುಬರುತ್ತದೆ. ವೀರರಸದ ಕುಣಿತ ಮೈನವಿರೇಳಿಸುವಂತೆ ಇರುತ್ತದೆ. ಮತ್ತುಳಿದ ರಸಗಳಾದ ಹಾಸ್ಯ, ಶೃಂಗಾರ, ಶೋಕ, ಇವು ಮಾತಿನಲ್ಲಿ ಧ್ವನಿಯ ಏರಿಳಿತದಲ್ಲಿ ಅಭಿವ್ಯಕ್ತವಾಗುತ್ತವೆ.

ಬಯಲಾಟದಲ್ಲಿ ಕುಣಿತ ಹೆಚ್ಚಾಗಿ ಗಂಡು ಪಾತ್ರಕ್ಕೆ ಇರುತ್ತದೆ. ಸ್ತ್ರೀ ಪಾತ್ರಗಳಿಗೆ ಕಡಿಮೆ ಇದ್ದು, ರಾಕ್ಷಸ ಖಳನಾಯಕ ಪಾತ್ರಗಳ ಕುಣಿತ ರುದ್ರ, ಭಯಂಕರ ವಾಗಿರುತ್ತದೆ. ಈ ಕುಣಿತಗಳಿಗೆ ಲಯ ತಾಳ ಗಳಿರುತ್ತವೆ. ಆದರೆ ವಿದೂಷಕ, ಸಾರಥಿಯ ಪಾತ್ರಕ್ಕೆ ಯಾವುದೇ ಲಂಗು ಲಗಾಮು ಇಲ್ಲ ವಾದರೂ ಒಂದು ವೈವಿದ್ಯವಿರುತ್ತದೆ. ಸಾರಥಿಯದ್ದು ಹೆಚ್ಚಾಗಿ ಒಂಟಿಕಾಲಿನ ಕುಣಿತ ವಿರುತ್ತದೆ. ಇದು ಹಾಸ್ಯ ಮಯವಾಗಿದ್ದು ಪಾತ್ರಗಳ ನಿರ್ಗಮನ- ಆಗಮನದ ನಡುವೆ ಪ್ರದರ್ಶನ ಗೊಳ್ಳುತ್ತಿರುತ್ತದೆ.

ಸಂಡೂರಿನ ಪ್ರಮುಖ ಬಯಲಾಟಗಳು (ಕಥೆಗಳು)

ಮೌಖಿಕ ಪರಂಪರೆಯ ರೂಪದಲ್ಲಿರುವ ಕಥೆಗಳು ಬಹುತೇಕ ರಾಮಾಯಣ, ಮಹಾಭಾರತ, ಪುರಾಣಗಳಿಂದ ಪರ್ತ್ಯಸ್ವೀಕರಿಸಿ ಬಯಲಾಟಕ್ಕೆ ಯೋಗ್ಯವಾದ ಸಾಹಿತ್ಯವನ್ನು ಶುದ್ಧ ಜಾನಪದ ಶೈಲಿಯಲ್ಲಿ ನಿರ್ಮಿಸಿಕೊಂಡು ಪ್ರಯೋಗಕ್ಕೆ ಒಳಪಡಿಸುತ್ತಾರೆ.

೧. ರಾಮಾಯಣದಿಂದ ಆಯ್ದ ಕಥೆಗಳು

ರಾಮಾಂಜಿನೇಯ ಯುದ್ಧ
ರಾವಣ ದಿಗ್ವಿಜಯ
ಲವಕುಶ ಕಾಳಗ
ರಾಮಾಯಣ

೨. ಮಹಾಭಾರತದಿಂದ ಆಯ್ದ ಕಥೆಗಳು

ಪಾಂಡುವಿಜಯ
ವೀರ ಅಭಿಮನ್ಯುವಿನ ಕಾಳಗ
ದ್ರೌಪದಿ ವಸ್ತ್ರಾಪಹರಣ
ದುಶ್ಯಾಸನ ವಧಾ
ಪಾರ್ಥ ವಿಜಯ
ಮಾಯಾ ಬಜಾರ್ (ಕನಕಾಂಗಿ ಕಲ್ಯಾಣ)
ಕುರುಕ್ಷೇತ್ರ
ಪ್ರಮಿಳಾ ದರ್ಬಾರ್
ದುರ್ಯೋಧನನ ಗರ್ವಭಂಗ
ಕೀಚಕನ ವಧೆ
ಸುಭದ್ರಾಕಲ್ಯಾಣ
ಕರ್ಣಾರ್ಜುನ ಕಾಳಗ
ಬಬ್ರುವಾಹನ

೩. **ಪೌರಾಣಿಕ ಕಥೆಗಳು**

ಗಿರಿಜಾಕಲ್ಯಾಣ

ದಕ್ಷಬ್ರಹ್ಮನ ಕಥೆ

ಸುಂದೋಪಸುಂದ

ರತಿ ಕಲ್ಯಾಣ

ಭಕ್ತ ಮಾರ್ಕಂಡೇಯ

ಬಯಲಾಟದ ಕಥೆಗಳಲ್ಲಿ ಸಾಮಾಜಿಕ – ಕೌಟುಂಬಿಕ ವೈಶಿಷ್ಠತೆ

ಬಯಲಾಟದ ಪ್ರಮುಖವಸ್ತು ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಬರುವ ಮಹಾನ್ ವ್ಯಕ್ತಿಗಳ ಆದರ್ಶ ಜೀವನ ಕುರಿತದ್ದಾಗಿರುತ್ತದೆ. ಇದು ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಜೀವನದ ಮೌಲ್ಯಗಳನ್ನು ಒಳಗೊಂಡಿರುತ್ತದೆ. ಇವುಗಳ ಪ್ರಭಾವ ಅತ್ಯಂತ ಹಿರಿದಾದದ್ದು. ಜಾನಪದ ಕಥೆಗಳ ಹಿನ್ನಲೆಯಲ್ಲಿ ಇವುಗಳನ್ನು ಕಂಡಾಗ ಪುರಾಣ, ಮಹಾಭಾರತ ರಾಮಾಯಣಗಳೆಲ್ಲವೂ ಈ ಕಥೆಗಳ ಪ್ರಭಾವದಿಂದ ಹುಟ್ಟಿದಂತವು ಆದಕಾರಣ ಇವುಗಳಿಗೂ ಜಾನಪದ ಸಾಮಾಜಿಕ ಜೀವನಕ್ಕೆ ಕೌಟುಂಬಿಕ ಜೀವನಕ್ಕೆ ಅವಿನಾಭಾವ ಸಂಬಂದವನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಪುರಾಣ ಕಥೆಗಳು ಒಂದು ಕಾಲದಲ್ಲಿ ಘಟಿಸಿದ ನೈಜ ಘಟನೆಗಳೇ ಆಗಿದ್ದವು. ಇವುಗಳೆಲ್ಲಾ ಆದಿ ಮಾನವರ ನಂಬುಗೆ, ಆದಿಭೌತಿಕ ಸಂಪ್ರದಾಯಗಳು, ಕುಲದೇವತಾಪದ್ದತಿ, ವೀರರು ಮತ್ತು ಧಾರ್ಮಿಕ ನಂಬಿಕೆಗಳನ್ನು ವಿವರಿಸುತ್ತವೆ. ಹೀಗೆ ಬಯಲಾಟದ ಕಥಗಳಲ್ಲಿ ಹೆಚ್ಚಾಗಿ ಬರುವ ಪ್ರಸಂಗಗಳು ಒಂದು ಕಾಲದ ಜೀವನದ ಸಂಘರ್ಷಗಳನ್ನು ಕುರಿತು ತಿಳಿಸುತ್ತವೆ. ರಾಕ್ಷಸ ದೇವತೆಗಳ ಯುದ್ಧಗಳು, ಕಲ್ಯಾಣಗಳು, ಮಾನವ ಸಂಬಂಧಗಳಂತಯೇ ಸಂಘರ್ಷ ಹಾಗೂ ಒಲವಿನ ಬದುಕನ್ನು ತೋರಿಸುತ್ತವೆ. ಇವೆಲ್ಲಾ ಸಾಮಾಜಿಕ ಅಂಶಗಳಾಗಿದ್ದು, ಮಾನವನ ಸಹಜ ವರ್ತನೆಗಳು ಇಲ್ಲಿ ಕಾಣಸಿಗುತ್ತವೆ.

ರಾಮಾಯಣ ಮತ್ತು ಮಹಾಭಾರತ ಕಥೆಯಲ್ಲಿ ಬರುವ ಸನ್ನಿವೇಶಗಳಾದ ರಾಮನು ತಂದೆಯ ಮಾತನ್ನು ನಡೆಸಿಕೊಡುವುದು, ಸೀತೆಯ ಸ್ವಯಂವರ, ಸೀತೆಯ ಅಪಹರಣ, ಯುದ್ಧ ಇವೆಲ್ಲಾ ಜನ ಜೀವನದಲ್ಲಿ ಸಂಬಂಧ ಹೊಂದಿವೆ. ಹಣ, ಅಧಿಕಾರ, ಹೆಣ್ಣಿಗಾಗಿ ಇಂದು ಕೂಡ ಸಮಾಜದಲ್ಲಿ ಸಂಘರ್ಷಗಳು ಒಂದಲ್ಲಾ ಒಂದು ರೀತಿಯಲ್ಲಿ ನಡೆಯುತ್ತಲೇ ಇವೆ. ಈ ಮಹಾಕಾವ್ಯಗಳಲ್ಲಿನ ಪಾತ್ರಗಳು ಒಂದೊಂದು ಮಾನವ ಸ್ವಭಾವದ ನಿದರ್ಶನಗಳಾಗಿವೆ. ಇವು ಕೇವಲ ಪುರಾಣ ಕಥೆಗಳಾಗದೆ ಆದರ್ಶ ಮೌಲ್ಯಗಳಾಗಿ

ಪರಿಣಮಿಸುತ್ತವೆ. ಕಥೆ ಯಾವುದೇ ಕಾಲದ್ದಾಗಿರಲಿ ಅದರಲ್ಲಿ ತಮ್ಮ ಸಾಮಾಜಿಕ ಇಲ್ಲವೆ ಕೌಟುಂಬಿಕ ಜೀವನದ ಸೊಗಸನ್ನು ಬೆರಸಿ ಕಥೆಯನ್ನು ತಮ್ಮದಾಗಿರಿಸಿಕೊಂಡಿರುವುದು ಜನಪದರ ವಿಶೇಷತೆ.

ಜನಸಮೂಹ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಒಂದಾಗಿ ಬಾಳುವುದನ್ನು ಸಮಾಜ ಎಂದು ಕರೆಯುತ್ತೇವೆ. ಹೀಗೆ ಒಂದೆಡೆ ಬಾಳುವ ಸಮಾಜಕ್ಕೆ ತನ್ನದೇ ಆದ ಪರಂಪರೆ ರೂಢಿ, ಸಂಪ್ರದಾಯ, ಧರ್ಮ ರೀತಿ ನೀತಿಗಳಿವೆ. ಇವೆಲ್ಲವುಗಳಿಂದ ಒಂದೇ ಸಮಾಜದವರೆಂಬ ಭಾವನೆ ಅವರಲ್ಲಿರುತ್ತದೆ. ಇದರಿಂದ ಪರಸ್ಪರ ಅವಲಂಬನೆ ಎಂಬುದಿರುತ್ತದೆ. ಜಾತಿ, ಭಾಷೆ, ಉಡುಗೆ-ತೊಡುಗೆಗಳೂ ಭಿನ್ನವಾಗಿದ್ದರೂ ಹೋಲಿಕೆಯುಳ್ಳದ್ದಾಗಿರುತ್ತದೆ. ಇಂತಹ ಹಲವು ಸಮಾಜಗಳನ್ನು ನಾವು ನಮ್ಮ ಸುತ್ತ ಕಾಣಬಹುದು. ಇವುಗಳ ನಡುವಿನ ಸ್ನೇಹ, ಸೌಹಾರ್ದತೆ ಸಂಘರ್ಷಗಳನ್ನು ಕಾಣುತ್ತೇವೆ. ಪ್ರೀತಿ, ಸ್ನೇಹ, ಯುದ್ಧ, ಹೊಂದಾಣಿಕೆ ಮೊದಲಾದ ಅಂಶಗಳು ಸಮಾಜವೊಂದರದಲ್ಲಿರುವಂತೆ ಕಥೆಗಳಲ್ಲಿ, ಪುರಾಣಗಳಲ್ಲಿ ಕಾಣುವಂತೆಯೇ ನಾವು ಬಯಲಾಟಗಳಲ್ಲೂ ಕಾಣುತ್ತೇವೆ.

ಮಾನವರದ್ದು ಒಂದು ಬಗೆಯ ಜೀವನವಾದರೆ ರಾಕ್ಷಸರದ್ದು, ದೇವತೆಗಳದ್ದೂ ಒಂದು ತರಹ. ಇಂತಹ ಹೋಲಿಕೆ, ಸಮಾನತೆಗಳು ಕಥೆಗಳಾದವು ಆದ್ದರಿಂದ ಈ ಕಥೆಗಳು ಸಾಮಾಜಿಕ ಜೀವನಕ್ಕೆ ಹತ್ತಿರದ್ದಾಗಿವೆ.

ಬಯಲಾಟ ಕಥೆಗಳಲ್ಲಿ ಕಂಡು ಬರುವ ಸಾಮಾಜಿಕ ಅಂಶಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

ಬಯಲಾಟದಲ್ಲಿ ಕಂಡು ಬರುವ ಸಾಮಾಜಿಕ ಅಂಶಗಳು

೦೧. ವೀರಜೀವನ

೦೨. ಭಕ್ತಿ

೦೩. ವಚನ ಪಾಲನೆ

೦೪. ಮದುವೆ

೦೫. ಪಾತಿವ್ರತ್ಯಕ್ಕೆ ಬೆಲೆ

೦೬. ತ್ಯಾಗ

೦೭. ಕೌಟುಂಬಿಕ ಸಂಭಂಧ

೦೮. ಸ್ನೇಹ

೦೯. ನಿಷ್ಠೆ

೧೦. ಕೌಟುಂಬಿಕ ಸಂಘರ್ಷ

೧. ವೀರ ಜೀವನ

ಪರಾಕ್ರಮ ಹಾಗೂ ಶೌರ್ಯ ಸಮಾಜದ ಉನ್ನತ ಮೌಲ್ಯಗಳಲ್ಲಿ ಒಂದಾಗಿದೆ. ಪ್ರತಿಯೊಬ್ಬರ ಜೀವನದಲ್ಲಿ ಒಂದಲ್ಲ ಒಂದು ರೀತಿಯ ಸಂಘರ್ಷ ಇದ್ದೇ ಇರುತ್ತದೆ. ಇದು ಹೆಣ್ಣು-ಮಣ್ಣು ಹೊನ್ನು ಮತ್ತು ಅಧಿಕಾರಕ್ಕಾಗಿ ಹೀಗೆ ಹಲವು ಕಾರಣಗಳಿರಬಹುದು. ವ್ಯಕ್ತಿ ಸಾಧನೆ. ಸಮಾಜದ ಹಿತಸಾಧನೆಗಾಗಿ ಹೋರಾಡುವ ವ್ಯಕ್ತಿಗಳನ್ನು ವೀರರೆಂದು ಪರಿಗಣಿಸಲಾಗುವುದು. ಬಯಲಾಟದ ಕಥೆಗಳಲ್ಲಿ ಇದಕ್ಕೆ ಅನೇಕ ಕಥೆಗಳ ವೀರರು ಉದಾಹರಣೆಯಾಗಿ ಸಿಗುತ್ತಾರೆ. ಸಮಾಜದ ಹಿತಕ್ಕಾಗಿ ಎದೆಯೊಡ್ಡಿ ಹೋರಾಡಿದ ವ್ಯಕ್ತಿಗಳು ಮಹಾಕಾವ್ಯಗಳಲ್ಲಿ, ಪುರಾಣ, ಕಥೆಗಳಲ್ಲಿ ಹಲವು ಸಿಗುತ್ತವೆ. ಅವುಗಳನ್ನು ಈ ಕೆಳಗಿನಂತೆ ಕಾಣಬಹುದು.

೧. ರಾಮಾಯಣ

ಈ ಕಾವ್ಯದಲ್ಲಿ ರಾಮ, ಲಕ್ಷ್ಮಣ, ಭರತ ಆಂಜನೇಯ ಮೊದಲಾದವರು ತಮ್ಮ ವೀರತೆಯನ್ನು ಪ್ರದರ್ಶಿಸಿದ್ದಾರೆ. ರಾಮ ಪ್ರಮುಖ ನಾಯಕನಾದರೆ ಉಳಿದವರು ಉಪನಾಯಕರಾಗಿ ಕಾಣಿಸಿಕೊಳ್ಳುತ್ತಾರೆ. ಸೀತೆಯ ಅಪಹರಣವಾಗುವ ಸಂದರ್ಭದಲ್ಲಿ ಜಟಾಯು ತನ್ನ ಪರಾಕ್ರಮ ತೋರಿಸಿ ದುರಂತ ನಾಯಕನಾಗುತ್ತಾನೆ. ಅಂತೆಯೇ ಹನುಮಂತ, ವಾಲಿ, ಸುಗ್ರೀವ ಇವರೆಲ್ಲರೂ ಪರಾಕ್ರಮಿಗಳೇ ಆಗಿದ್ದಾರೆ.

ರಾಮಾಯಣದ ವೀರರ ಪೌರುಷವನ್ನು ಚಿತ್ರಿಸುವ ಬಯಲಾಟ ಕಥೆಗಳು ಈ ಕೆಳಗಿನಂತೆ ಕಾಣಬಹುದು.

೧. ರಾಮಾಂಜನೇಯಯುದ್ಧ

೨. ಐರಾವಣ-ಮೈರಾವಣ

೩. ಲವ-ಕುಶಕಾಳಗ

೪. ಸೀತಾ ಸ್ವಯಂವರ

೫. ರಾವಣ ದಿಗ್ವಿಜಯ

ಈ ಕಥೆಗಳಲ್ಲಿ ರಾಮನ ಪರಮ ಭಕ್ತನಾದ ಹನುಮಂತ ಅವರ ನಡುವಿನ ಯುದ್ಧ, ಲವ-ಕುಶರು ತಂದೆಯೊಂದಿಗೆ ಯುದ್ಧ ಮಾಡುವುದು. ಸೀತಾಸ್ವಯಂವರದಲ್ಲಿ ರಾಮ ಬಿಲ್ಲು ಮುರಿದು ಸೀತೆಯನ್ನು ಮದುವೆ ಯಾಗುವ ಸಂದರ್ಭ ಇವೆಲ್ಲವೂ ಇಲ್ಲಿನ ಪಾತ್ರಗಳ ವೀರತ್ವಕ್ಕೆ ಸಂಬಂಧಿಸಿದವುಗಳಾಗಿವೆ.

೨. ಮಹಾಭಾರತ

ಮಹಾಭಾರತವನ್ನು ಆಧರಿಸಿ ಹಲವು ಬಯಲಾಟಗಳ ಕಥೆಗಳು ವೀರರ ಜೀವನ ಕುರಿತದ್ದಾಗಿವೆ. ಇಲ್ಲಿ ಪಾಂಡವರು, ಕರ್ಣ, ಕೃಷ್ಣ, ಏಕಲವ್ಯ, ಭೀಷ್ಮ, ಶಲ್ಯರಂಥ ಹತ್ತು ಹಲವು ವೀರ ಪಾತ್ರಗಳು ಚಿತ್ರಿತವಾಗಿವೆ. ಪಾಂಡವರ–ಕೌರವರ ನಡುವಿನ ಸಂಘರ್ಷ, ಕರ್ಣನ ಸ್ವಾಮಿ ನಿಷ್ಠೆ, ವೀರ ಏಕಲವ್ಯ ಬಬ್ರುವಾಹನನ, ಕೃಷ್ಣನ ಕುಟಿಲತೆ ಇವೆಲ್ಲ ಬಯಲಾಟಕ್ಕೆ ಸ್ಫೂರ್ತಿ ಯಾದವುಗಳೇ.

ಮಾಹಾಭಾರತದ ವೀರರ ಕಥೆಗಳು ಈ ಕೆಳಗಿನಂತಿವೆ

೧. ಬಬ್ರುವಾಹನ ಕಾಳಗ

೨. ಸುಧನ್ವ ಕಾಳಗ

೩. ಭೀಮ ಪ್ರತಿಜ್ಞೆ

೪. ಪಾಂಡುವಿಜಯ

೫. ವೀರ ಅಭೀಮನ್ಯುವಿನ ಕಾಳಗ

೬. ದುರ್ಯೋಧನನ ಗರ್ವಭಂಗ

೭. ಕೀಚಕನ ವಧೆ

೮. ಕರ್ಣಾರ್ಜುನರ ಕಾಳಗ

೯. ಪಾರ್ಥ ವಿಜಯ

ಈ ಎಲ್ಲಾ ಕಥೆಗಳಲ್ಲಿ ವೀರನ ಮೌಲ್ಯಗಳು ಚಿತ್ರಿತವಾಗಿವೆ. ವೀರನಾದವನು ಆಪತ್ತಿಗೆ ಸಿಲುಕಿದವರ ರಕ್ಷಣೆ ಮಾಡುವುದು, ಸಮಾಜದ ರಕ್ಷಣೆ ಮಾಡುವುದು ಆತನ ಕರ್ತವ್ಯವಾಗಿದ್ದು ಇದರಿಂದ ಸಮಾಜದಲ್ಲಿ ಆತನ ಸ್ಥಾನಮಾನ ಹೆಚ್ಚಾಗುತ್ತದೆ. ಭಾರತೀಯ ಸಮಾಜದಲ್ಲಿ ಪುರಷ ಪ್ರಧಾನ ವ್ಯವಸ್ಥೆ ಇರುವುದರಿಂದ ಸಾಮಾಜಿಕವಾಗಿ ಹಾಗೂ ಕೌಟುಂಬಿಕವಾಗಿ ಆತನಿಗೆ ವಿಶೇಷ ಸ್ಥಾನ. ನಂತರ ಒಬ್ಬ ಪುರಷ ತನ್ನ ಆದರ್ಶಗಳಿಂದ 'ಶಿಷ್ಠ ರಕ್ಷಣೆ ಹಾಗೂ ದುಷ್ಠರ ಶಿಕ್ಷೆ' ಎಂಬ ನೀತಿಯ ಅಡಿಯಲ್ಲಿ ಉನ್ನತ ಸ್ಥಾನ ಅಲಂಕರಿಸುತ್ತಾನೆ ಎಂಬುದು ಈ ಕಥೆಗಳಲ್ಲಿ ಕಾಣಸಿಗುವ ಮೌಲ್ಯ. ಅಂತೆಯೇ ಪುರಾಣ ಕಥೆಗಳಲ್ಲಿಯೂ ವೀರತೆಯನ್ನು ಕಾಣಬಹುದು.

೧. ಗಿರಿಜಾಕಲ್ಯಾಣ

೨. ದಕ್ಷ ಬ್ರಹ್ಮನ ಕಥೆ

೩. ಸುಂದೋಪ ಸುಂದ

೪. ರತಿ ಕಲ್ಯಾಣ

ಪುರಾಣ ಕಥೆಗಳಲ್ಲಿ ಪ್ರಮುಖವಾಗಿ ದೇವತೆ ಮತ್ತು ರಾಕ್ಷಸರಿಗೆ ಯುದ್ಧಗಳು ನಡೆಯುತ್ತವೆ. ದೇವತೆಗಳೇ ಜಯಿಸುತ್ತಾರೆ. ದುಷ್ಟ ರಾಕ್ಷಸರನ್ನು ಸದೆ ಬಡಿಯುವುದರಲ್ಲಿ ದೇವತೆಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಇವುಕೂಡ ಅಧಿಕಾರ, ಸಂಪತ್ತು, ಸ್ತ್ರೀಗಾಗಿಯೇ ನಡೆಯುತ್ತವೆ. ರಾಕ್ಷಸ ಪಾತ್ರಗಳು ಇಲ್ಲಿ ಮಾನವನ ಕೆಟ್ಟ ಭಾವನೆಗಳ ಪ್ರತಿಬಿಂಬ ವಾಗಿರುತ್ತವೆ. ಹಾಗೂ ದೈವ ಪಾತ್ರಗಳು ಒಳ್ಳೆಯದರ ಪ್ರತೀಕ ವಾಗಿರುತ್ತವೆ.

೨. ಭಕ್ತಿ

ಜನಪದರ ಜೀವನದಲ್ಲಿ ಭಕ್ತಿಗೆ ವಿಶೇಷವಾದ ಸ್ಥಾನವಿದೆ. ಮಾನವನಿಗೆ ಭಯವೆಂಬುದು ಕಾಡುತ್ತಿರುವ ಸಂದರ್ಭದಲ್ಲಿ ಎಲ್ಲದಕ್ಕಿಂತ ದೊಡ್ಡದಾದ ಶಕ್ತಿ ಒಂದಿದೆ ಎಂದು ದೈವಾರಾಧನೆಯಲ್ಲಿ ತೊಡಗಿದ. ಅವನ ಆರಾಧನೆಯೇ ಭಕ್ತಿ ಆಯಿತು. ಭಕ್ತಿ ನಿಷ್ಠೆಯೊಂದಿದ್ದರೆ ಯಾವ ದುಷ್ಟ ಶಕ್ತಿಯ ಆಟವೂ ನಡೆಯಲಾರದೆಂಬ ನಂಬಿಕೆ ಇಂದಿಗೂ ಜನಪದರಲ್ಲಿ ಉಳಿದು ಬಂದಿದೆ. ಅದರ ಹಿನ್ನೆಲೆಯಲ್ಲಿ ಮೂರ್ತಿಪೂಜೆಗಳು ಹುಟ್ಟಿಕೊಂಡವು. ಬಹು ಹಿಂದಿನ ಕಾಲದಿಂದಲೂ ದೇವರಲ್ಲಿ ಭಕ್ತಿ ಶ್ರದ್ಧೆಗಳನ್ನಿರಿಸಿಕೊಂಡ ಜನ ಸಮಾಜದಲ್ಲಿ ಶ್ರೇಷ್ಠ ಭಕ್ತರೆಂದು ಪ್ರಸಿದ್ಧಿಯಾಗಿದ್ದಾರೆ. ಭಕ್ತಿಯನ್ನು ಸಾಧಿಸಿ ಮೆರೆದ ಅನೇಕರನ್ನು ಕುರಿತು ಭಕ್ತಿ ಪ್ರಧಾನ ಬಯಲಾಟಗಳು ಹುಟ್ಟಿಕೊಂಡುವು.

ಭಕ್ತಿ ಪ್ರಧಾನವಾದ ಬಯಲಾಟಗಳು

೧. ಭಕ್ತ ಮಾರ್ಕಂಡೇಯ

೨. ಬೇಡರ ಕಣ್ಣಪ್ಪ

೩. ಭಕ್ತ ಪ್ರಹಲ್ಲಾದ

ಈ ಕಥೆಗಳಲ್ಲಿ ಭಗವಂತನಿಂದ ಸತ್ವ ಪರೀಕ್ಷೆಗೆ ಗುರಿಯಾಗಿ ಭಕ್ತನ ಸಾಕ್ಷಾತ್ಕಾರವನ್ನು ದೃಡಪಡಿಸುವ ವ್ಯಕ್ತಿಗಳನ್ನು ಕಾಣುತ್ತೇವೆ. ಅಂತೆಯೇ ಭಗವಂತನನ್ನು ನಂಬಿದ್ದಕ್ಕೆ ಅವರ ಅನೇಕಾನೇಕ ಕಷ್ಟಗಳು ಪರಿಹಾರ ವಾದವು ಎಂಬುದನ್ನು ತಿಳಿಯುತ್ತೇವೆ.

೩. ವಚನ ಪಾಲನೆ

'ನುಡಿದಂತೆ ನಡೆ' ಎಂಬ ಮಾತಿನಂತೆ ಜನಪದರಲ್ಲಿ ಮಾತಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಆಡಿದ ಮಾತನ್ನು ಎಂಥ ಕಷ್ಟ ಬಂದರೂ ನಡೆಸಿಕೊಡುವುದು ಮುಖ್ಯ. ರಾಮಾಯಣ ಮಹಾಭಾರತಗಳಲ್ಲಿ ವಚನ ಪಾಲನೆ ಕುರಿತಾದ ಹಲವು ನಿದರ್ಶನಗಳು ಸಿಗುತ್ತವೆ. ದಶರಥ ಕೈಕೇಯಿಗೆ ನೀಡಿದ ವರದಂತೆ ಭರತನಿಗೆ ಪಟ್ಟ ರಾಮನಿಗೆ ವನವಾಸ ವೆಂದಾಗ ದಶರಥ ಹಿಂಜರಿದ ಸಂದರ್ಭದಲ್ಲಿ ರಾಮ ತಂದೆಯ ವಚನ ಪಾಲಿಸಲು ಸಿದ್ಧನಾಗುತ್ತಾನೆ.

'ರಾಮಾಂಜನೇಯ ಯುದ್ಧ' ಸಂದರ್ಭದಲ್ಲಿ ವಚನ ಪಾಲನೆ ಪ್ರಮುಖವಾಗಿ ಗೋಚರಿಸುತ್ತದೆ. ಒಡಹುಟ್ಟಿದವರು, ಬಂಧು-ಬಾಂಧವರು ಆಕಸ್ಮಿಕವಾಗಿ ಬಂದೊದಗುವ ಸಂದರ್ಬದಲ್ಲಿ ಸಿಲುಕಿ ಕೊಟ್ಟಮಾತು ಉಳಿಸಿಕೊಳ್ಳದೇ ಹೋರಾಡುವ ಸಂದರ್ಭ ಎದಿರಾಗುವುದನ್ನು ಬಯಲಾಟ ಕಥೆಗಳಲ್ಲಿ ಕಾಣಬಹುದು.

ವಚನ ಪಾಲನೆಗೆ ಹೆಚ್ಚು ಒತ್ತುಕೊಟ್ಟ ಬಯಲಾಟ ಕಥೆಗಳೆಂದರೆ

೧. ರಾಮಾಂಜನೇಯ ಕಾಳಗ

೨. ಗಿರಿಜಾ ಕಲ್ಯಾಣ

೩. ಭೀಮ ಪ್ರತಿಜ್ಞೆ ಮೊದಲಾದವುಗಳು.

೪. ಮದುವೆ

ಸಮಾಜದಲ್ಲಿ ಮದುವೆಗೆ ಒಂದು ಉನ್ನತ ಸ್ಥಾನವಿದೆ. ಕುಟುಂಬ ಹಾಗೂ ಸಮಾಜಕ್ಕೆ ಸಂಬಂಧ ಬೆಳಸಲು ಪ್ರಮುಖ ಅಂಶ, ಹೆಣ್ಣು ಗಂಡು ಪರಸ್ಪರ ಸಹಬಾಳ್ವೆ ನಡೆಸಲು ಸಮಾಜದ ಒಪ್ಪಿಗೆಯೇ ಮದುವೆಯಾಗಿದೆ. ಮದುವೆ ಒಂದು ರೂಢಿಯಲ್ಲ ಅಥವಾ ಹೆಣ್ಣು ಗಂಡುಗಳ ಸಂಬಂಧದ ಸಾಕ್ಷಾತ್ಕಾರವಲ್ಲ ಇದು ಎರಡು ಕುಟುಂಬಗಳ ನಡುವಿನ ಸಂಬಂಧ. ಇದಕ್ಕೆ ಸಂಬಂಧಿಸಿದಂತೆ ಹಲವು ಸಂಪ್ರದಾಯಗಳಿವೆ. ಮದುವೆಗೆ ಇರುವ ಸಮಾಜಿಕ ಮಹತ್ವ ಬಯಲಾಟದ ಕಥೆಗಳಲ್ಲಿ ಪ್ರಮುಖ ಪ್ರಾಶಸ್ತ್ಯ ನೀಡಲಾಗಿದೆ. ಮದುವೆಯನ್ನು ವಸ್ತುವನ್ನಾಗಿರಿಸಿಕೊಂಡು ನಡೆದ ಬಯಲಾಟಗಳು ಈ ರೀತಿಯಾಗಿವೆ.

೧. ಗಿರಿಜಾಕಲ್ಯಾಣ

೨. ಕನಕಾಂಗಿ ಕಲ್ಯಾಣ

೩. ರತಿಕಲ್ಯಾಣ

೪. ಸುಭದ್ರಾ ಕಲ್ಯಾಣ

೫. ದ್ರೌಪದಿ ಸ್ವಯಂವರ

೬. ಸೀತಾ ಸ್ವಯಂವರ

ಗಿರಿಜಾಕಲ್ಯಾಣ ಕಥೆಯು ಶಿವಪಾರ್ವತಿಯರ ಮದುವೆ ಕಥೆಯಾಗಿದೆ. ಕನಕಾಂಗಿ ಕಲ್ಯಾಣ ಬಲರಾಮ ಮಗಳಾದ ಕನಕಾಂಗಿಯನ್ನು ಸುಭದ್ರೆ ತನ್ನ ಮಗನಿಗೆ ತಂದು ಕೊಳ್ಳುವ ಕಥೆಯಲ್ಲಿ ತವರಿನ ಬಗ್ಗೆ ಹೆಣ್ಣಿಗೆ ಇರುವ ಮೋಹ ಮತ್ತು ಇಂಥ ವೈವಾಹಿಕ ಸಂಬಂಧಗಳು ತವರಿನೊಂದಿಗಿದ್ದರೆ ಪರಸ್ಪರ ಪ್ರೀತಿ ವಿಶ್ವಾಸಗಳು ಹೆಚ್ಚುವುದು, ಬಾಂಧವ್ಯ ಗಟ್ಟಿಗೊಳ್ಳುವುದೆಂಬ ನಂಬಿಕೆ ಕಾಣಬಹುದು. ಅಪರಿಚಿತ ಕುಟುಂಬಗಳ ಸಂಬಂಧ ಬೆಳೆದಾಗ ಸಮಾಜದಲ್ಲಿ ಒಗ್ಗಟ್ಟು ಹಾಗೂ ಶತೃಗಳಲ್ಲಿ ಇಂಥ ವೈವಾಹಿಕ ಸಂಬಂಧಗಳನ್ನು ಒಂದುಗೂಡಿಸುವ ಪ್ರಯತ್ನ

ಮಾಡುತ್ತೇವೆ ಎಂಬುವಲ್ಲಿ ಮದುವೆಗೆ ಇರುವ ಸಾಮಾಜಿಕ ಮನ್ನಣೆ, ಗೌರವ ಎಲ್ಲವೂ ವ್ಯಕ್ತವಾಗುತ್ತವೆ.

೫. ಪಾತಿವ್ರತ್ಯಕ್ಕೆ ಬೆಲೆ

ಶೀಲ ಅಥವಾ ಪಾತಿವ್ರತ್ಯವೆಂಬುದು ಸಮಾಜದ ಗಂಡು ಹೆಣ್ಣು ಇಬ್ಬರಿಗೂ ಸಂಬಂಧಿಸಿದ ಮೌಲ್ಯ. ಗುಣಸ್ವಭಾವಗಳಿಂದ ಶುಚಿತ್ವವನ್ನು ಕಾಪಾಡಿಕೊಳ್ಳಬೇಕೆಂಬುದು ಈ ಪದದ ಅರ್ಥ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಮೇಲಿರುವ ಅನೇಕ ರೀತಿ-ರಿವಾಜುಗಳಿಂದ ಹೆಣ್ಣಾದವಳು ತನ್ನ ಶೀಲವನ್ನು ಯಾವತ್ತೂ ಕಾಪಾಡಿಕೊಳ್ಳಬೇಕೆಂಬುದು ಒಂದು ನಿಯಮ. ಇದಕ್ಕೆ ಸಂಬಂಧಿಸಿದಂತೆ ಬಯಲಾಟ ಕಥೆಗಳಲ್ಲಿ ಹಲವು ಸನ್ನಿವೇಷಗಳನ್ನು ಕಾಣಬಹುದು. ರಾಮ ಏಕಪತ್ನಿವ್ರತಸ್ಥವಾಗಿರುವುದು. ರಾವಣ ಹೆಣ್ಣಿನ ಮೇಲಿನ ಮೋಹದಿಂದ ಅಧೋಗತಿಗೆ ಹೋಗುವುದು. ದ್ರೌಪದಿಯನ್ನು ಅವಮಾನಿಸಿ ಕೌರವರು ನಾಶ ಹೊಂದಿದ್ದು ಇವೆಲ್ಲ ಪತಿವ್ರತೆಯರ ಶಾಪ ಎಂಬುದನ್ನು ಇವು ಗಟ್ಟಿಗೊಳಿಸುತ್ತವೆ.

ಹೆಣ್ಣಿನ ಶೀಲಕ್ಕೆ ಭಂಗವುಂಟಾದಾಗ ದೈವ ಅವಳನ್ನು ರಕ್ಷಿಸುತ್ತದೆ ಎಂಬುದು ಜನಪದರ ನಂಬಿಕೆ. ಶೀಲ ಹಾಗೂ ಪಾತಿವ್ರತ್ಯಕ್ಕೆ ಹೆಚ್ಚಿನ ಸ್ಥಾನಮಾನ ಕೊಟ್ಟಿರುವುದರಿಂದ ಅವುಗಳನ್ನು ರಕ್ಷಸಿಕೊಳ್ಳುವುದರಲ್ಲಿ ಸ್ವತಃಹೆಣ್ಣು ಏನೆಲ್ಲಾ ಪ್ರಯತ್ನಗಳನ್ನು ಮಾಡಬೇಕೆಂಬುದು ಸಮಾಜದ ಇಂಗಿತವೂ ಆಗಿರುತ್ತದೆ.

ಇದರೊಂದಿಗೆ ಮುತ್ತೈದೆತನಕ್ಕೆ ಸಾಮಾಜಿಕ ಬೆಲೆಯಿದೆ. ಹೆಣ್ಣಿಗೆ ಇದು ಮದುವೆಯಾದಾಗಿನಿಂದ ಪ್ರಾಪ್ತವಾಗುವುದು. ಮುತ್ತೈದೆತನಕ್ಕೆ ಸೂಚಕವಾಗಿರುವ ತಾಳಿ, ಕುಂಕುಮ, ಹೂವು, ಬಳೆ, ಕಾಲುಂಗುರ, ಮೂಗುತಿ ಇವುಗಳನ್ನು ಗಂಡನಿರುವ ವರೆಗೆ ಮಾತ್ರ ಧರಿಸಬೇಕು ಮತ್ತು ಅವಳು ಪರಸ್ತ್ರೀ ಅವಳನ್ನು ಗೌರವದಿಂದ ಕಾಣಬೇಕೆಂಬುದು ನಿಯಮವಾಗಿದೆ, ಶುಭ ಸೂಚನೆಯೂ ಹೌದು.

ಈ ಮೌಲ್ಯ ಆಧರಿಸಿ ಹಲವು ಬಯಲಾಟ ಕಥೆಗಳು ರೂಪಿತವಾಗಿವೆ. ಅವುಗಳೆಂದರೆ

೧. ರಾವಣ ದಿಗ್ವಿಜಯ
೨. ದ್ರೌಪದಿ ವಸ್ತ್ರಾಪಹರಣ
೩. ಗಿರಿಜಾಕಲ್ಯಾಣ
೪. ನಳದಮಯಂತಿ
೫. ಸತಿ ಸಾವಿತ್ರಿ

ಮೊದಲಾದವು.

೬. ತ್ಯಾಗ

ಜನಪದರಲ್ಲಿ ವ್ಯಕ್ತಿಹಿತಕ್ಕಿಂತ ಸಮಾಜದ ಹಿತಕ್ಕೆ ಹೆಚ್ಚಿನ ಗೌರವ ನೀಡಲಾಗುತ್ತದೆ. ಪರಹಿತ ಭಾವನೆ ಜನಪದರ ನಿಲವು ಆಗಿದೆ. ವ್ಯಕ್ತಿಯೊಬ್ಬ ತನ್ನಹಿತ ತ್ಯಾಗಮಾಡಿ ಸಮಾಜದ ಹಿತಕ್ಕೆ ತಲೆಕೊಡುವುದು ವಿಶೇಷತೆಯಾಗಿದೆ. ಈ ಮೌಲ್ಯ ಪ್ರತಿಪಾದನೆಗಾಗಿ ಜನಪದರು ತಮ್ಮ ಸುಖವನ್ನೇ ಬಲಿಗೊಟ್ಟುಕೊಂಡ ಎಷ್ಟೋ ಉದಾಹರಣೆಗಳು ಬಯಲಾಟ ಕಥೆಗಳಲ್ಲಿ ಕಾಣಬಹುದು.

೧. ರಾಮಾಂಜನೇಯ ಯುದ್ಧ

೨. ಗಿರಿಜಾ ಕಲ್ಯಾಣ

೩. ಕನಕಾಂಗಿ ಕಲ್ಯಾಣ

೪. ರತಿ ಕಲ್ಯಾಣ

ಮೊದಲಾದ ಬಯಲಾಟಗಳಲ್ಲಿ ಅಂಜನಾದೇವಿ ಹಾಗೂ ಆಂಜನೇಯ ಯಯಾತಿಯ ಪ್ರಾಣ ರಕ್ಷಣೆಗಾಗಿ ತಮ್ಮ ಪ್ರಾಣದ ಹಂಗು ತೊರೆದು ಹೋರಾಡುವ ಸಂದರ್ಭ, ಗಿರಿಜಾಕಲ್ಯಾಣ ಹಾಗೂ ರತಿಕಲ್ಯಾಣದಲ್ಲಿ ಮನ್ಮಥನ ತ್ಯಾಗ, ರಾವಣ ದಿಗ್ವಿಜಯದಲ್ಲಿ ಸುಗ್ರೀವ ತನ್ನ ಅಣ್ಣ ವಾಲಿಯನ್ನು ಸಂಹರಿಸುವಲ್ಲಿ ರಾಮನ ಸಹಾಯ ಪಡೆದು ಮುಂದೆ ರಾವಣನೊಂದಿಗೆ ಯುದ್ಧದಲ್ಲಿ ಸಹಾಯ ಮಾಡುತ್ತಾನೆ. ಅಂತೆಯೇ ಜಟಾಯು ಸೀತೆಗಾಗಿ ಪ್ರಾಣದ ಪಣತೊಡುವುದು. ಹೀಗೆ ಪರೋಪಕಾರ ತ್ಯಾಗ ಬಲಿದಾನಗಳು ಸಮಾಜಿಕ ಮೌಲ್ಯಗಳಾಗಿ ಜನಪದರ ಜೀವನದಲ್ಲಿ ಸ್ಥಾನಮಾನ ಪಡೆದಿವೆ. ಬಯಲಾಟ ಕಥೆಗಳ ಹಿನ್ನೆಲೆಯಲ್ಲಿ ಅವುಗಳ ಪ್ರಸಾರ ವಾಗುವುದನ್ನು ಕಾಣಬಹುದು.

೭. ಕೌಟುಂಬಿಕ ಸಂಬಂಧಗಳು

ಸಮಾಜವು ಹಲವಾರು ಕುಟುಂಬಗಳಿಂದ ಕೂಡಿದೆ. ಪ್ರತಿಯೊಂದು ಕುಟುಂಬವೂ ಸಮಾಜದೊಂದಿಗೆ ಸಂಪರ್ಕವನ್ನು ಹೊಂದಿರುತ್ತವೆ. ಜನಪದರಲ್ಲಿ ಕೌಟುಂಬಿಕ ಸಂಬಂಧಕ್ಕೆ ಹೆಚ್ಚಿನ ಬೆಲೆಯಿದೆ. ಈ ಮೌಲ್ಯಗಳನ್ನು ಬಯಲಾಟಕಥೆಗಳಲ್ಲಿ ಹಲವು ಸನ್ನಿವೇಶಗಳಲ್ಲಿ ಕಾಣತ್ತೇವೆ. ಈ ಕಥೆಗಳು ಮಹಾಭಾರತ, ರಾಮಾಯಣ ಪುರಾಣಗಳಿಂದಾದರೂ ಅಲ್ಲಿ ವ್ಯಕ್ತಿವ್ಯಕ್ತಿಗಳ ನಡುವಿನ ಸಂಬಂಧಗಳು ಸಮಾಜದ ವಸ್ತುವನ್ನೇ ಪ್ರತಿಬಿಂಬಿಸುತ್ತವೆ. ಇಲ್ಲಿ ಪ್ರಮುಖವಾದ ಧಾರ್ಮಿಕ ಕಥೆಗಳಲ್ಲಿ ಕೌಟುಂಬಿಕ ವಿಷಯಗಳಿಗೆ ಪ್ರಾಮುಖ್ಯತೆ ಇದೆ. ರಾಮಾಯಣ ಮತ್ತು ಮಹಾಭಾರತ ಕಥೆಯಲ್ಲಿ ರಾಮ-ಲಕ್ಷ್ಮಣ, ಭರತ, ಶತೃಘ್ನರು ಬೇರೆಬೇರೆ ತಾಯಿಯ ಮಕ್ಕಳಾದರೂ ಅವರಲ್ಲಿನ ಪರಸ್ಪರ ತ್ಯಾಗ ಪ್ರೀತಿಗಳು ಅಜರಾಮರವಾಗಿವೆ. ಅಂತೆಯೇ ಮಹಾಭಾರತದಲ್ಲಿ ದುರ್ಯೋಧನನನ್ನು ಚಿತ್ರಸೇನಗಂಧರ್ವನು ಅರಣ್ಯದಲ್ಲಿ

ಬಂಧಸಿದಾಗ ಬಾನುಮತಿ ಧರ್ಮರಾಯನಲ್ಲಿ ಅಳಲು ತೋಡಿಕೊಳ್ಳುತ್ತಾಳೆ. ಆಗ ಅರ್ಜುನ, ಭೀಮ, ನಕಲ, ಸಹದೇವರು ಇದಕ್ಕೆ ಒಪ್ಪದಿದ್ದಾಗ ತಮ್ಮಂದಿರನ್ನು ಕುರಿತು ಧರ್ಮರಾಯನು ಕೌಟುಂಬಿಕ ಜಗಳ ಏನಿದ್ದರೂ ನಮ್ಮೊಳಗೆ ಅದನ್ನು ಮರೆತು ಸಹೋದರನಾದ ಆತನನ್ನು ಬಿಡಿಸಿರಿ ಎಂದು ಆಜ್ಞೆಮಾಡುತ್ತಾನೆ. ಇಲ್ಲಿ ಅಣ್ಣತಮ್ಮಂದಿರ ಪ್ರೀತಿಕಾಣಬಹುದು.

ಕೌಟುಂಬಿಕ ಸಂಬಂಧಗಳಲ್ಲಿ ಪ್ರಮುಖವಾಗಿ

೧. ಸಹೋದರ ಸಂಬಂಧಗಳು

೨. ಗಂಡ–ಹೆಂಡತಿ

೩. ಅತ್ತೆ–ಸೊಸೆ

೪. ತಂದೆ–ತಾಯಿ–ಮಕ್ಕಳು

೫. ಮಾವ–ಅಳಿಯ

೬. ಮಾವ–ಸೊಸೆ

ಮೊದಲಾದವರ ಸಂಬಂಧಗಳ ಆತ್ಮೀಯತೆ, ಪರಸ್ಪರ ಗೌರವ, ಪ್ರೀತಿ–ವಿಶ್ವಾಸ, ನಯ–ವಿನಯಗಳನ್ನು ಕಾಣಬಹುದು.

೮. ಸ್ನೇಹ ನಿಷ್ಠೆ

ಬಯಲಾಟ ಕಥೆಗಳಲ್ಲಿ ಸ್ನೇಹಿತರ ಸಂಬಂಧಗಳನ್ನೂ ಕಾಣಬಹುದು ಕೃಷ್ಣ–ಕುಚೇಲ–ಸುಧಾಮ, ಕೃಷ್ಣ–ಅರ್ಜುನ, ದುರ್ಯೊಧನ–ಕರ್ಣ ಮೊದಲಾದ ಪಾತ್ರಗಳಲ್ಲಿ ಸ್ನೇಹ–ನಿಷ್ಠೆಗಳನ್ನು ಕಾಣಬಹುದು.

ಸ್ವಾಮಿ ನಿಷ್ಠೆಯಲ್ಲಿ ಪ್ರಮುಖವಾಗಿ ಕರ್ಣನ ಪಾತ್ರವು ಪ್ರಮುಖವಾದದ್ದು. ಏಕೆಂದರೆ ಕರ್ಣನಿಗೆ ಕೃಷ್ಣ ಆತನ ಜನ್ಮ ರಹಸ್ಯ ಕುರಿತು ಹೇಳಿದಾಗ ದುರ್ಯೋಧನನ ಸ್ನೇಹವನ್ನು ಬಿಟ್ಟು ಬರುವುದಿಲ್ಲ ಮತ್ತು ತನ್ನ ಸಲುಹಿದ ದಾತರನಲ್ಲಿ ನಂಬಿಕೆಯ ದ್ರೋಹ ಮಾಡಲಾರೆನು ಎಂದು ಕೃಷ್ಣ ತೋರಿಸಿದ ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ ತನ್ನ ನಿಷ್ಠೆ ಹಾಗೂ ಸ್ನೇಹವನ್ನು ಉಳಿಸಿಕೊಳ್ಳುತ್ತಾನೆ.

ಕೌಟುಂಬಿಕ ಸಂಘರ್ಷ

ಸಾಮಾಜಿಕ ಮೌಲ್ಯಗಳಲ್ಲಿ ಉತ್ತಮ ವ್ಯಕ್ತಿತ್ವ, ಆದರ್ಶಮೌಲ್ಯಗಳಂತೆ ಕೌಟುಂಬಿಕ ಸಂಘರ್ಷಗಳೂ ಕಾಣಸಿಗುತ್ತವೆ. ಕುಟುಂಬಗಳಲ್ಲಿ ಸಮಸ್ಯೆಗಳು ಉದ್ಭವಿಸುತ್ತಲೇ ಇರುತ್ತವೆ. ಇಂತಹ ಸಮಸ್ಯೆಗಳಿಂದ ಸಂಘರ್ಷಗಳು ಉಂಟಾಗುತ್ತವೆ. ಇವುಗಳಿಂದ ಅಸಮಾಧಾನದಿಂದ ಅಲ್ಲೋಲಕಲ್ಲೋಲಗಳು ಉಂಟಾಗುತ್ತವೆ. ಬಯಲಾಟಗಳಲ್ಲಿ ಕೆಲವು ಕಥೆಗಳು ಈ ಸಮಗ್ರ ಜೀವನವನ್ನು ಒಂದಲ್ಲಾ ಒಂದು ನೆಲೆಯಲ್ಲಿ ಕಟ್ಟಿಕೊಡುವುದರಿಂದ ಅಲ್ಲಿ ಸಂಘರ್ಷಗಳು ಕಾಣಸಿಗುತ್ತವೆ.

ಕುಟುಂಬಗಳಲ್ಲಿ ಸಂಘರ್ಷಗಳು ಎರಡು ರೀತಿಯಲ್ಲಿ ಕಾಣಸಿಗುತ್ತವೆ.

೧. ಕುಟುಂಬದ ಒಳಗಿನ ಸಂಘರ್ಷಗಳು.

೨. ಕುಟುಂಬಕ್ಕೂ ಮತ್ತೊಂದು ಕುಟುಂಬಕ್ಕೂ ನಡೆವ ಸಂಘರ್ಷಗಳು.

ಕುಟುಂಬದೊಳಗಿನ ಸಂಘರ್ಷಗಳಿಗೆ ಕುಟುಂಬದೊಳಗಿನ ಸದಸ್ಯರ ಭಿನ್ನಾಭಿಪ್ರಾಯಗಳು ಕಾರಣವಾಗುತ್ತವೆ. ಕುಟುಂಬದ ಹೊರಗಿನ ಸಂಘರ್ಷಗಳಿಗೆ ಕುಟುಂಬದ ಪ್ರತಿಷ್ಠೆಗಳು, ಅಭಿಮಾನಗಳು ಕಾರಣವಾಗುತ್ತವೆ. ಇವು ಸಾಮಾಜಿಕವಾದ ಕುಲಾಚಾರ ಪದ್ದತಿ, ರೀತಿ, ನೀತಿಗಳಿಂದ, ಸಂಘರ್ಷ ತಲೆದೂರಬಹುದು.

ಕೌಟುಂಬಿಕ ಸಂಘರ್ಷಗಳು

ಕೌಟುಂಬಿಕ ಸಂಘರ್ಷಗಳಲ್ಲಿ ಕೌರವ ಮತ್ತು ಪಾಂಡವರ ಮೊದಲು ಕೂಡಿದ್ದು ನಂತರ ಪ್ರತ್ಯೇಕವಾಗಿ ಅಸ್ತಿತ್ವ ಪಡೆದುಕೊಳ್ಳುತ್ತಾರೆ. ಈ ಕೌಟುಂಬಿಕ ಸಂಘರ್ಷವೇ ಮಹಾಭಾರತ ಯುದ್ಧಕ್ಕೆ ಕಾರಣವಾಗುತ್ತದೆ.

ಉದಾ :

೧. ಸುಭದ್ರಾ ಕಲ್ಯಾಣ

೨. ಗಿರಿಜಾ ಕಲ್ಯಾಣ

ಹೀಗೆ ಬಯಲಾಟ ಕಥೆಗಳಲ್ಲಿ ಕೌಟುಂಬಿಕ ಜೀವನದ ಎಲ್ಲಾ ವಿಷಯಗಳು, ಸನ್ನಿವೇಷಗಳು ಪ್ರಕಟಗೊಳ್ಳತ್ತವೆ. ತಂದೆ–ತಾಯಿ, ತಂದೆ–ಮಗ–ಮಗಳು, ತಾಯಿ–ಮಗಳು–ಮಗ, ಅತ್ತೆ–ಸೊಸೆ, ಅಕ್ಕ–ತಂಗಿ, ಅಣ್ಣ–ತಮ್ಮ ನೆಂಟರು ಎಲ್ಲಾ ಪರಸ್ಪರ ರಕ್ತ ಸಂಬಂಧಿಗಳ ಕಾಳಜಿ, ಸಂಘರ್ಷ, ಸೌಹಾರ್ದದಿಂದ ಬಾಳ್ವೆ ನಡೆಸುವುದು. ಆದರ್ಶಮಯ ಜೀವನ ಎಲ್ಲವನ್ನೂ ಬಯಲಾಟ ಕಥೆಗಳು ಒಳಗೊಂಡಿವೆ. ಈ ಕಥೆಗಳನ್ನು ಮುಕ್ತಾಯ ಗೊಳಿಸುವಾಗ ಜನಪದರಿಗೆ ಸಂಘರ್ಷಗಳಿಂದ ದೂರಾಗಿ ನೆಮ್ಮದಿಯ ಜೀವನ ನಡೆಸುವ ಸಂದೇಶವನ್ನು ನೀಡುತ್ತವೆ.

೪.೪ ಆಧುನಿಕ ಪರಿಸರದಲ್ಲಿ ಸಂಡೂರಿನ ಬಯಲಾಟಗಳು

'ಶ್ರೀ ಷಣ್ಮುಖ ಯಾತ್ರೆ' ಎಂಬ ಶತಕದಲ್ಲಿ ಸಂಡೂರನ್ನು

ಸುಂದರ ಕಿರಿನಾಡು ಹಸುರಿನ।
ಹಂದರದ ಗಿರಿನಾಡು ಕುಂದದ॥
ನಂದನದ ಸಿರಿನಾಡು ಶುಕ ಪಿಕ ಪಕ್ಷಗಳ ನಾಡು॥
ಇಂದರೆಯ ನೆಲಮಾಡಶಾರದೆ।
ಬಂದುಲಿವೆ ಕರಮಾಡ ಸೊಂಡೂರ॥
ರೆಂದು ಹೆಸರಾಂತಿಹುದು ರಕ್ಷಿಸು ದೇವ ಷಣ್ಮುಖನೆ॥

ಎಂದು ವರ್ಣಿಸಲಾಗಿದೆ. ಆದರೆ ಈಗ ಸಂಡೂರನ್ನು ನೋಡಲು ಹೋದರೆ ಕಾಣುವ ಚಿತ್ರ ಬೇರೆಯದೆ. ಸಂಡೂರಿನಿಂದ ಹೊಸಪೇಟೆಗೆ, ಸಂಡೂರಿನಿಂದ ಕೂಡ್ಲಿಗಿಗೆ ಹೋಗುವ ರಸ್ತೆಗಳು ಛಿದ್ರ ಛಿದ್ರವಾಗಿವೆ. ರಸ್ತೆ ತುಂಬಾ ಕೊರಕಲು ಗುಂಡಿಗಳು ಪ್ರಯಾಣಿಸುವರ ಪಾಡು ನರಕ. ಸುತ್ತಲೂ ಬೆಟ್ಟಗಳೆಲ್ಲಾ ಕೆಂಪು ಧೂಳು ಅಲ್ಲಿ ಓಡಾಡುವ ಲಾರಿಗಳು ರಸ್ತೆಗಳ ಮಧ್ಯೆ ಅಪಘಾತಕ್ಕೀಡಾಗಿರುವ ಅಥವಾ ರಸ್ತೆಯ ದುರಾವಸ್ಥೆಯಿಂದ ಕೆಟ್ಟು ನಿಂತ ಲಾರಿಗಳೂ, ಎಲ್ಲೆಂದರಲ್ಲಿ ಟ್ರಾಫಿಕ್ ಜಾಂ ತೊಂದರೆ ಪ್ರಯಾಣಿಕರ ಡ್ರೈವರ್‌ಗಳ ಜಗಳ ಹೀಗೆ ಹತ್ತು ಹಲವು ತೊಂದರೆಗಳಿಂದ ಸಂಡೂರು ಬಳಲುತ್ತಿದೆ.

ಇಲ್ಲಿನ ಹೊಲಗಳು ಬೆಳೆಯಿಲ್ಲದೆ ಧೂಳಿನಿಂದ ಕೂಡಿದ್ದು. ಎಲ್ಲಾ ಕಡೆಯೂ ಮೈನಿಂಗ್ ಕಲ್ಲುಗಳನ್ನು ಅಗೆಯುತ್ತಿದ್ದಾರೆ. ಎಲ್ಲೆಂದರಲ್ಲಿ ಕ್ರಷರ್‌ಗಳು, ಪೋಕ್‌ಲೈನ್ ಮಿಷನ್‌ಗಳು ಕಾಣುತ್ತವೆ. ಅಲ್ಲಲ್ಲಿ ನೀಲಿ ಬಣ್ಣದ ಟೆಂಟುಗಳು, ಕೂಲಿಗಾಗಿ ಊರುಬಿಟ್ಟು ಬಂದಿರುವ ಕುಟುಂಬಗಳು, ಮೈನಿಂಗ್ ಕಲ್ಲುರಾಶಿ, ಧೂಳುಗಳಲ್ಲಿ ಆಡುವ ಮಕ್ಕಳನ್ನು ಕಾಣುತ್ತೇವೆ. ಈ ಅಕ್ರಮಗಣಿಗಾರಿಕೆ ಹಗಲೂ ರಾತ್ರಿ ನಡೆವ ಕಾರಣ ಹಲವು ಅಪಘಾತ, ಅಪರಾಧಗಳೂ ಹೆಚ್ಚಿವೆ.

ಇಂದು ಸಂಡೂರು ಇರುವುದು ಬರೀ ಗಣಿಗಾರಿಕೆ, ಹಣದಾಸೆಯಲ್ಲಿ. ಈ ಸಂದರ್ಭದಲ್ಲಿ ನಾವು ಈ ಕಲೆಗಳ ಬಗ್ಗೆ ಮಾತನಾಡಿದರೆ ಕೇಳುವ ಹೇಳುವ ಹೃದಯಗಳು ಬೆರಳೆಣಿಕೆಯಷ್ಟು ಮಾತ್ರ. ಯುವಕರು, ಮಧ್ಯಮ ವಯಸ್ಸಿನವರು ಬರೀ ಈ ಡಿಗ್ಗಿಂಗ್ ದಂಧೆಯಲ್ಲೇ ತೊಡಗಿದ್ದಾರೆ. ಹಳೆಯ ಒಂದೆರಡು ಜೀವಗಳು ಡಿಗ್ಗಿಂಗ್‌ಗೆ ಭೂಮಿಯಿಲ್ಲದವರು ಮಾತ್ರ ನನ್ನ ಅಧ್ಯಯನದ ವಸ್ತುವಾಗಿದ್ದಾರೆ.

ಸಂಡೂರನ್ನು ಮಾತ್ರವಲ್ಲ ಪ್ರಪಂಚವನ್ನು ಪ್ರತಿಕ್ಷಣ ನುಂಗುತ್ತಿರುವ ಕೈಗಾರೀಕರಣ, ಆಧುನೀಕರಣ, ಜಾಗತೀಕರಣದ ಪಾಶ್ಚಾತ್ಯೀಕರಣ ಹಿನ್ನೆಲೆಯಲ್ಲಿ ಕಲೆ, ಸಂಸ್ಕೃತಿಗಳ ಪಾಡು ನರಕಾತ್ಮಕವಾಗಿದೆ. ವಿಶೇಷವಾಗಿ ನಮ್ಮೂರಲ್ಲಿ ಈ ಡಿಗ್ಗಿಂಗ್, ಮೈನಿಂಗ್ ಪ್ರಭಾವದಿಂದ ಬಯಲಾಟದ ಸತ್ವ ಕಡಿಮೆಯಾಗುತ್ತಿದೆ. ಆಧುನಿಕತೆಯ ಪ್ರಭಾವ ನಾಗರೀಕತೆಯ ಸೆಳೆತ ಅದರ ಅಸ್ಥಿತ್ವವನ್ನೇ ಅಲ್ಲಾಡಿಸುತ್ತಿದೆ. ಬಯಲಾಟಗಳ ಬಗ್ಗೆ ನಡೆಯ ಬೇಕಾದ ಪ್ರಚಾರ, ಪ್ರೋತ್ಸಾಹ ಯಾವುದು ಸಿಗುತ್ತಿಲ್ಲ, ಸಿಕ್ಕರೆ ಅದು ಅಷ್ಟಕಷ್ಟೇ. ಇಂದಿನ ಸ್ವರೂಪದಲ್ಲಿ ಇಲ್ಲಿನ ಕಲೆ ಸಂಸ್ಕೃತಿಯನ್ನು ಉಳಿಸಿಕೊಳ್ಳವುದು ಕಷ್ಟದ ಮಾತಾಗಿದೆ. ಕಾಲ ಪರಿಸರದ ಬದಲಾವಣೆಯನ್ನು ಒಪ್ಪಿಕೊಂಡು ಇವು ಮುನ್ನಡೆಯಬೇಕು. ಬದಲಾಗುತ್ತಿರುವ ಜನಜೀವನ, ನಾಗರೀಕ ಸೌಲಭ್ಯ, ಹೊಸ ವ್ಯವಸ್ಥೆ, ಮಾಧ್ಯಮಗಳ ಹಾವಳಿಯಿಂದ ಪಾರಂಪರಿಕ ಕಲೆಯಗಳನ್ನು ಉಳಿಸಿಕೊಳ್ಳುವ ರೀತಿಯನ್ನು ವಿವೇಚಿಸುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಬಯಲಾಟವು ಕಣ್ಣುಮುಂದೆ ಪ್ರತ್ಯಕ್ಷವಾಗಿ ಒಂದು ರಾತ್ರಿಯಿಡೀ ನಡೆಯುವ ಕಲೆ. ಆದರೆ ಇಂದು ಡಿಗ್ಗಿಂಗ್ ಹಾವಳಿ ರಾತ್ರಿಯೇ ಜನರನ್ನು ಅತ್ಯಂತ ಕ್ರಿಯಾಶೀಲರನ್ನಾಗಿ ಮಾಡುವ ಕಾರಣ ಇದಕ್ಕೆ ಬೆಲೆಕೊಟ್ಟು ಬರುವ ಜನ ಕೇವಲ ಬೆರಳಣಿಕೆಯಷ್ಟು ಮಾತ್ರ.

ಇದರ ಜೊತೆಗೆ ಸಿನಿಮಾ, ಟಿ.ವಿ. ರೇಡಿಯೋ, ಕಂಪ್ಯೂಟರ್ ಮಾಧ್ಯಮಗಳು ಮನೆಯಂಗಳಕ್ಕೆ ಬಂದಿರುವ ಕಾರಣ ಸದಾ ಧಾರಾವಾಹಿ, 100 ದಿನ ಜಿಡಿದ ಚಲನಚಿತ್ರ, ಪ್ರಪಂಚವನ್ನೇ ತೆರೆದಿಡುವ ಕಂಪ್ಯೂಟರ್‌ಗಳು ಬಯಲಾಟದಂಥ ಕಲೆಯನ್ನು ಹಿಂದಕ್ಕೆತಳ್ಳುತ್ತಿವೆ. ಅತ್ಯಾಧುನಿಕ ಜನಜೀವನ, ರಮ್ಯಮನೋಹರ ತಂತ್ರಜ್ಞಾನಗಳಿಂದ ವಿಸ್ಮಯ ಗೊಳ್ಳುತ್ತಿರುವ ಜನ ಜನಪದ ಕಲೆಗಳನ್ನು ಮರೆಯುತ್ತಿದ್ದಾರೆ.

ಬಯಲಾಟಗಳು ಕಡಿಮೆಯಾಗಲು ಕಾರಣಗಳನ್ನು ಈ ರೀತಿಯಾಗಿ ಹೇಳಬಹುದು.

1. ಡಿಗ್ಗಿಂಗ್ ಹಾವಳಿ
2. ರಾತ್ರಿ ವೇಳೆಯೇ ಗಣಿಗಾರಿಕೆ ಸಾಗಣೆ ನಡೆವ ಕಾರಣ
3. ಪ್ರೋತ್ಸಾಹ ವಿಲ್ಲದ ಕಾರಣ
4. ಉತ್ಸಾಹಿ ಯುವಕರೂ ಕೂಡ ಮೈನಿಂಗ್‌ನತ್ತ ವಾಲುತ್ತಿದ್ದಾರೆ
5. ಹಿಂದಿಗಿಂತಲೂ ಇಂದು ಬಯಲಾಟದ ಖರ್ಚು ಅಧಿಕವಾಗಿರುವುದು.
6. ಆಧುನಿಕ ಮಾಧ್ಯಮಗಳ ಪ್ರಭಾವ
7. ಆಡಿಸುವ ಕಲಾವಿದರು ಕ್ಷೀಣಿಸುತ್ತಿದ್ದಾರೆ.
8. ಪಾಶ್ಚಾತ್ಯ ಸಂಸ್ಕೃತಿಯಿಂದ ಬದಲಾಗುತ್ತಿರುವ ಸಂಸ್ಕೃತಿ, ಪರಂಪರೆ

ಇದರೊಂದಿಗೆ ಅತೀ ಶೀಘ್ರವಾಗಿ ಬೆಳೆಯುತ್ತಿರುವ ಪ್ರಪಂಚದಲ್ಲಿ ಬಯಲಾಟಗಳಲ್ಲಿ ಹಲವು ಬದಲಾವಣೆಗಳು ಆಗಿವೆ. ಕಾಲದ ಅಭಾವದಿಂದ ಹಿಂದಿನಂತೆ ರಾತ್ರಿಯುದ್ದಕ್ಕೂ ಬಯಲಾಟ ನಡೆಸುವುದು ಬಹಳ ಕಷ್ಟ ವಾಗುತ್ತಿದೆ. ಕನಿಷ್ಠ ಮೂರು ತಾಸಿನ ಅವಧಿಗೆ ಸೀಮಿತ ಗೊಳಿಸುವಹಾಗೆ ಮಾಡುವುದು ಅಸಾಧ್ಯವಾಗಿದೆ. ಜನರಿಗೆ ಪೌರಾಣಿಕ ಕಥೆಯ ವಸ್ತು, ಮಹಾಭಾರತ, ರಾಮಾಯಣ ಕಥೆಗಳು ಹಿಂದಿನಂತೆಯೇ ಇಷ್ಟವಾಗುತ್ತಿಲ್ಲ, ಸಂಗಿತ, ಅಲಂಕಾರಗಳೂ ಬದಲಾದ ಸಂಸ್ಕೃತಿಯಿಂದ ರುಚಿಸುತ್ತಿಲ್ಲ.

ಹೀಗೆ ಹತ್ತು ಹಲವು ಕಾರಣಗಳಿಂದ ಆಧುನಿಕ ಸಂಧರ್ಭದಲ್ಲಿ ಸಮೂಹ ಮಾಧ್ಯಮಗಳು, ಆಧುನಿಕ ಯಂತ್ರತಂತ್ರಗಳು ಸಾಂಪ್ರದಾಯಿಕ ಪ್ರದರ್ಶನ ಕಲೆಗಳ ಮೇಲೆ ಪ್ರಭಾವ ಬೀರಿರುವ ಕಾರಣ ಕಲೆಗಳ ಜೀವಂತಿಕೆಗಾಗಿ ಶ್ರಮಿಸಬೇಕಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಕಬಳಿಕೆ, ಮಾನವ ಸಂಪನ್ಮೂಲಗಳು, ಜಾಗತೀಕರಣ, ಗಣಿಗಾರಿಕೆ, ಮುಕ್ತ ಮಾರುಕಟ್ಟೆ, ಕೈಗಾರೀಕರಣ ಜೊತೆಗೆ ವ್ಯವಹಾರಕ್ಕೇ ಹೆಚ್ಚಿನ ಒತ್ತು ನೀಡುವ ಪರಿಸರದಿಂದ ಸಂಡೂರಿನ ಸಾಂಸ್ಕೃತಿಕ ಚೌಕಟ್ಟೇ ಬದಲಾಗಿದೆ. ಪ್ರತಿದಿನ ಹೊಸ ಆವಿಷ್ಕಾರ, ಅನ್ವೇಷಣೆ, ವಿಕಾಸ ಹೊಂದುತ್ತಿರುವ ಪರಿಸರದ ಕಾರಣ ಅಭಿವ್ಯಕ್ತಿಯ ಮೂಲ ಬದಲಾಗುತ್ತಿರುವ ಕಾರಣ ಬಯಲಾಟಗಳ ಬಗ್ಗೆ ಇನ್ನೂ ಅಧ್ಯಯನ ನಡೆಸಬೇಕಾದ ಅವಶ್ಯಕತೆ ಮೂಡಿ ಬಂದಿದೆ.

ಅಧ್ಯಾಯ - ಆರು

ಸಂಡೂರು ಬಯಲಾಟದ ಕಲಾವಿದರು

ಅಧ್ಯಾಯ - ಆರು

ಸಂಡೂರು ಬಯಲಾಟದ ಕಲಾವಿದರು

(ಆಯ್ದ ಕಲಾವಿದರ ಜೀವನ, ಸಾಧನೆ, ಕಲಾ ಪರಿಚಯ)

೧. ಹೆಸರು : ಕಮ್ಮಾರ್ ಮೌನಾಚಾರ್

(ಹಾರ್ಮೋನಿಯಂಮಾಸ್ಟರ್‌ಮತ್ತು ಕಲಾವಿದ)

ತಂದೆ ತಾಯಿ : ಕಮ್ಮಾರ್ ದೊಡ್ಡ ನಾಗಲಿಂಗಾಚಾರ್, ಕಾಳಮ್ಮ

ಹೆಂಡತಿ : ಶಾರದಮ್ಮ

ಸ್ಥಳ : ಲಕ್ಷ್ಮೀಪುರ (ಸಂಡೂರು)

ಜನ್ಮ ದಿನಾಂಕ : ೧೯೫೩

ವೃತ್ತಿ : ಕಮ್ಮಾರಿಕೆ, ಬಡಿಗೆತನ

ಜಾತಿ : ವಿಶ್ವಕರ್ಮ

ಶಿಕ್ಷಣ : ೭ನೇ ತರಗತಿ ಅನುತ್ತೀರ್ಣ

ಮಕ್ಕಳು : ಕೆ. ವೀರೇಶ್. ಕೆ. ಮಂಜುನಾಥ.

ಕೆ. ಸೋಮಶೇಖರ್ ಮತ್ತು ಸರಸ್ವತಿ.

ಮೌನಾಚಾರಿ ಎಂದೇ ಪರಿಚಿತರಿರುವ ಇವರ ತಂದೆ ಕಮ್ಮಾರಿಕೆಯಿಂದಲೇ ಜೀವನ ನಡೆಸುತ್ತಿದ್ದು ಕುಲಕಸುಬನ್ನೇ ಮುಂದುವರೆಸಿಕೊಂಡು ಬಂದರು ೭ನೇ ತರಗತಿಗೆ ಶಿಕ್ಷಣ ನಿಲ್ಲಿಸಿದರು ಕಾರಣ ಮನೆಯ ಆರ್ಥಿಕ ಪರಿಸ್ಥಿತಿ. ಇದರಿಂದ ಓದನ್ನು ಕೈ ಬಿಟ್ಟು

ತಂದೆಯೊಡನೆ ಕುಲಕಸುಬಿಗೆ ಕೈಜೋಡಿಸಿದರು. ಇವರ ತಂದೆ ಹವ್ಯಾಸಕ್ಕಾಗಿ ಬಯಲಾಟ ಆಡಿಸುತ್ತಿದ್ದರು ಮತ್ತು ತಾವೂ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಇವರ ತಂದೆಯನ್ನೇ ಅನುಕರಿಸಿ ತಂದೆಯೊಂದಿಗೆ ಬಯಲಾಟ ಆಡಲು ಇಚ್ಚಿಸಿದಾಗ ತಂದೆ ಖುಷಿಯಿಂದ ಒಪ್ಪಿ ಇವರಿಗೆ ಕಲಿಸಿದರು. ಜೊತೆಗೆ ಚೆನ್ನಾಗಿ ಹಾಡು ಹಾಡುತ್ತಿದ್ದ ಮೌನಾಚಾರಿ ಕಂಠ ಇಂಪಾಗಿರುವ ಕಾರಣ ಹಾರ್ಮೋನಿಯಂ ನೊಂದಿಗೆ ಹಿಮ್ಮೇಳದಲ್ಲಿ ಹಾಡುತ್ತಾ ಪಾತ್ರ ನಿರ್ವಹಿಸುತ್ತಾ ಬಯಲಾಟಗಳನ್ನು ನಿರ್ದೇಶಿಸಿ ಆಡಿಸಲು ಪ್ರಾರಂಭಿಸಿದರು. ಇಂದಿಗೂ ಮೆಸ್ತ್ರು ಮೌನಾಚಾರಿ ಎಂದೇ ಕರೆಯಿಸಿಕೊಳ್ಳುತ್ತಾರೆ.

ಇವರನ್ನು ಕಾಡುತ್ತಿದ್ದ ಕಡು ಬಡತನದ ನಡುವೆಯೂ ಕಲೆಯನ್ನು ಕೈ ಬಿಡಲಿಲ್ಲ. ನಿರ್ದೇಶಕ, ಸಂಗೀತನಿರ್ದೇಶಕರಾಗಿ ಹೆಚ್.ಎಂ. ಕುಮಾರಸ್ವಾಮಿ ಅವರಿಂದ ಹಾರ್ಮೋನಿಯಂ ಕಲಿತರು.

ಕಲಾ ಜೀವನ

ಇವರ ೧೫ನೇ ವಯಸ್ಸಿನಲ್ಲಿ ಹಾಡು ಮತ್ತು ಹಾರ್ಮೋನಿಯಂ ನೊಂದಿಗೆ ಹಿಮ್ಮೇಳದಲ್ಲಿ ತಂದೆಯ ಪ್ರೋತ್ಸಾಹದಮೇರೆಗೆ ಬಯಲಾಟ ಕಲಿತರು. ೫ನೇ ತರಗತಿಯಲ್ಲಿ ಓದುವಾಗಲೇ ಚಿಕ್ಕ ಪುಟ್ಟ ಪಾತ್ರಗಳನ್ನು ಮಾಡುತ್ತಾ ರಕ್ತರಾತ್ರಿ ನಾಟಕದಲ್ಲಿ ದುರ್ಯೋಧನ ಮತ್ತು ದುರ್ಜಯನ ಪಾತ್ರಾಭಿನಯಿಸುತ್ತಿದ್ದರು.

ಮೊದಲನೆಯ ಬಯಲಾಟವನ್ನು ೧೯೭೭ರಲ್ಲಿ ಲಕ್ಷ್ಮೀಪುರದಲ್ಲಿ ಆಡಿದರು. **'ವೀರಅಭಿಮನ್ಯುವಿನ ಕಾಳಗ'** ಎರಡನೇ ಆಟವನ್ನು ಜವಳಿ ವ್ಯಾಪಾರಿಗಳಾದ ಬಂಡೆ ಮೇಗಳ ಬಸಣ್ಣ ಅವರು ತಾವೇ ಹಣನೀಡಿ ಆಡಿಸಿದರು. ಇವರ ಅಭಿನಯಿಸಿದ ಪಾತ್ರಗಳು

ಸ್ತ್ರೀ ಪಾತ್ರಗಳು

ಪಾಂಡುವಿಜಯ – ಭಾನುಮತಿ ೧೫ ಪ್ರಯೋಗ

೧. ರಾಮಾಯಣ – ಕೈಕೇಯಿ

ಪುರುಷ ಪಾತ್ರಗಳು

೧. ರಾಮಾಯಣ

೨. ಮಾಯಾರಾವಣ (ಸೀತೆ ಅಪಹರಿಸುವಾಗ ಸನ್ಯಾಸಿ ಪಾತ್ರವಹಿಸಿದ್ದರು)

೩. ರಕ್ತ ರಾತ್ರಿ – ಶ್ರೀ ಕೃಷ್ಣ

೪. ಭಕ್ತ ಮಾರ್ಕಂಡೇಯ – ಮಾರ್ಕಂಡೇಯನ ಪಾತ್ರ

ಪ್ರಶಸ್ತಿಗಳು

೧. ಪಾಂಡುವಿಜಯ, ದುರ್ಯೋದನನ ಗರ್ವಭಂಗ ೨೦.೦೨.೧೯೯೩ ರಲ್ಲಿ **ಯುವಜನಸೇವಾ ಮತ್ತು ಕ್ರೀಡಾ ಇಲಾಖೆ,** ಪ್ರಥಮ ಬಹುಮಾನ.

೨. ದ್ರೌಪತಿಯ ವಸ್ತ್ರಾಪಹರಣ **ರಾಜ್ಯಮಟ್ಟ ಪ್ರಶಸ್ತಿ,** ಪ್ರಥಮ ಬಹುಮಾನ

೩. ಪಾಂಡುವಿಜಯ ೨೮.೦೨.೧೯೯೩ **ರಾಜ್ಯ ಮಟ್ಟದ ಯುವಜನ ಮೇಳ,** ಪ್ರಥಮಸ್ಥಾನ

೪. **ಸಂಡೂರು ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ,** ೨೨.೦೧.೧೯೯೪, ಪ್ರಥಮ ಸ್ಥಾನ ಪಾಂಡುವಿಜಯ

೫. ಕಾರಟಗಿ ದ್ರೌಪದಿಯ ವಸ್ತ್ರಾಪಹರಣ ಪ್ರಥಮ ಸ್ಥಾನ.

ನಿರ್ದೇಶಕರಾಗಿ ಆಟ ಆಡಿಸಿದ ಬಯಲಾಟಗಳು

ವೀರ ಅಭಿಮನ್ಯುವಿನ ಕಾಳಗ

ಪಾಂಡು ವಿಜಯ

ಪಾರ್ಥ ವಿಜಯ

ದುಶ್ಯಾಸನ ವಧ

ಸಂದೋಪಸುಂದ

ಕಣ್ಣಿಟ್ಟ ಹೆಣ್ಣು (ಸಾಮಾಜಿಕ ನಾಟಕ)

ಆಡಿದ ಪ್ರದೇಶಗಳು

ಸಂಡೂರಿನ ಕೋಡಾಲ, ಅಂಕಮನಾಳ, (ವೈ.ಟಿ.ಜಿ) ಲಕ್ಷ್ಮೀಪುರ, ಧರ್ಮಾಪುರ, ಕೃಷ್ಣಾನಗರ, ಜೋಗ, ಹಗರಿ ಮತ್ತು ತಾಳೂರು.

ಇತರೆ

ದೇವಿ ಪುರಾಣ ಓದುತ್ತಾರೆ ನವರಾತ್ರಿ ಸಂಧರ್ಭದಲ್ಲಿ ಗ್ರಾಮ ದೇವತೆ ಉಡಸಲಮ್ಮ ಮತ್ತು ಊರಮ್ಮನಿಗೆ ನವವಿಧ ಅಲಂಕಾರ ಮಾಡುವುದು. ಗಣಪತಿ ಹಬ್ಬದ ಸಂದರ್ಭದಲ್ಲಿ ಮಣ್ಣಿನ ಗಣಪತಿಗಳನ್ನು ಮಾಡುವುದು. ರಥದ ಅಮ್ಮನ ಕಟ್ಟಿಗೆ ಮೂರ್ತಿಗಳನ್ನು ಮಾಡುವುದು.

ಪ್ರಸ್ತುತ

ಬಡಿಗೆತನ ಮತ್ತು ದೇವಿ ಪುರಾಣ ಓದುವುದು. ದೇವತೆಗಳ ಅಲಂಕಾರ ಗಣಪತಿ ಹಬ್ಬದ ಸಂದರ್ಭದಲ್ಲಿ ಮಣ್ಣಿನ ಮೂರ್ತಿ ಮಾಡುವುದು.

೨. ಹೆಸರು : **ಮಾಳ್ಗಿ ಅಮರಪ್ಪ**

ವೃತ್ತಿ :, ಒಕ್ಕಲುತನ

ಸ್ಥಳ : ಸಂಡೂರು (ಹೊಸಬಾವಿ ಓಣಿ)

ತಂದೆತಾಯಿ : ಮಾಳಿಗೆ ಸಿದ್ದರಾಮಪ್ಪ, ತಿಪ್ಪಮ್ಮ

ಜನನ ದಿನಾಂಕ : ೧೯೪೬, (೬೬ ವರ್ಷ)

ಜಾತಿ : ವೀರಶೈವ

ವಿದ್ಯೆ : ೯ನೇ ತರಗತಿ

ಮಾಳ್ಗಿ ಅಮರಪ್ಪ ಅವರ ತಂದೆ ಒಕ್ಕಲುತನ ಮಾಡುತ್ತಿದ್ದರು. ಓದುವಾಗ ಬಹಳ ಜಾಣರಿದ್ದ ಇವರನ್ನು ತಂದೆ ಓದಿಸಲು ಶತ ಪ್ರಯತ್ನ ಮಾಡಿದರು ಆದರೆ ೯ನೇ ತರಗತಿ ಓದುವಾಗ ಬಡತನದ ಕಾರಣ ಓದಲು ನಿಲ್ಲಿಸಿ ಒಕ್ಕಲುತನಕ್ಕೆ ನಿಂತರು. ೧೬, ೧೭ನೇ ವಯಸ್ಸಿನಲ್ಲಿರುವಾಗ ಅವರ ಓಣಿಯಲ್ಲಿ ಅಕ್ಕಸಾಲಿಷಣ್ಮುಖಪ್ಪ ಬಯಲಾಟಗಳನ್ನು ಆಡಿಸುತ್ತಿದ್ದರು. ಇವರು ಆಸಕ್ತಿ ವಹಿಸಿದಾಗ ಎತ್ತರ ಗೌರವವರ್ಣದ ಈ ಎಳೆ ಹುಡುಗನ್ನು ಅವರು ಸಂತೋಷದಿಂದ ಬರಮಾಡಿಕೊಂಡು ಆತ್ಮೀಯತೆಯಿಂದ ಹೇಳಿಕೊಟ್ಟರು. ಓದು ಕಲಿತಿದ್ದ ಇವರಿಗೆ ಡೈಲಾಗ್‌ಗಳನನ್ನು ಕಲಿಯಲು ತಡವಾಗಲಿಲ್ಲ. ಬಹಳ ಚುರುಕಾಗಿ ಕಲಿತರು. ಅಭಿನಯದಲ್ಲೂ ಯಾವುದೇ ಹಿನ್ನಲೆ ತೋರಲಿಲ್ಲ. ಇವರ ಸುಂದರ ರೂಪದ ಪ್ರತಿಫಲವಾಗಿಯೇ ಇವರು ಬಯಲಾಟದಲ್ಲಿ ದೇವತಾ ಪಾತ್ರಗಳಿಗೆ ಆಯ್ಕೆಯಾಗುತ್ತಿದ್ದರು. ಎತ್ತರ ಮೈಕಟ್ಟಿನ ಇವರು ಪರಮೇಶ್ವರ, ಮನ್ಮಥ, ವಿಷ್ಣು, ಬಲರಾಮ, ಪಾತ್ರಗಳಿಗೆ ಆಯ್ಕೆಯಾಗಿ ಆಟಗಳಲ್ಲಿ ಕೇಂದ್ರಬಿಂದು ಆಗಿರುತ್ತಿದ್ದರು.

ಮೊದಲನೆ ಪ್ರಯೋಗ ದಕ್ಷ ಬ್ರಹ್ಮ ಆಟದಲ್ಲಿ ಪರಮೇಶ್ವರನ ಪಾತ್ರ ಮಾಡಿದ್ದರು. ಅಂದಿನ ಕಾಲದಲ್ಲಿ ಇವರ ಪಾತ್ರಕ್ಕೆ ಮೆಚ್ಚಿ ಇವರ ಬೀಗರು ನೂರು ರೂಪಾಯಿ ಮುಯ್ಯಿ ಮಾಡಿದ್ದರು. ಇಂದಿಗೂ ಇವರಿಗೆ ದಕ್ಷಬ್ರಹ್ಮನ ಪರಮೇಶ್ವರನ ಪಾತ್ರ ಬಹಳ ಮೆಚ್ಚುಗೆ.

ಬಯಲಾಟಗಳು

೧. ದಕ್ಷ ಬ್ರಹ್ಮ – ಪರಮೇಶ್ವರನ ಪಾತ್ರ ೧೫–೨೦ ಪ್ರಯೋಗ

೨. ಗಿರಿಜಾಕಲ್ಯಾಣ – ಮನ್ಮಥ

೩. ಪ್ರಮಿಳಾದದರ್ಬಾರ – ಸುಧನ್ವ (ಅರ್ಜುನನ ವೈರಿ)

೪. ಮಾಯಾ ಬಜಾರ್ – ಬಲರಾಮ

೫. ಮಾಯಾ ಬಜಾರ್ – ವಿಷ್ಣು

ಸಂಡೂರಿನ ಧರ್ಮಾಪುರ, ಸಂಡೂರಿನ ವಿಠ್ಠೋಬ ದೇವಸ್ಥಾನದ ಆವರಣದಲ್ಲಿ ರಾಮಸ್ವಾಮಿ ಗುಡಿಯಲ್ಲಿ ಹಲ್ವಾರು ಪ್ರದರ್ಶನ ನೀಡಿದ್ದಾರೆ ಮತ್ತು ನಿರ್ದೇಶಕರಾಗಿ ಕೆಲಸಮಾಡಿದ್ದಾರೆ.

೧೯೬೬–೨೦೦೦ ತನಕ ನಂತರ ೨೦೦೫ರಲ್ಲಿ ಹಲವು ಬಯಲಾಟ ಆಡಿದ್ದು ಇಂದಿಗೂ ಬಯಲಾಟಗಳನ್ನು ಆಡುವ ಕಲಿಸುವ ಹುಮ್ಮಸ್ಸು ಹೊಂದಿದ್ದಾರೆ. ಜೊತೆಗೆ ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿ ಹೊಂದಿರುವ ಇವರು ಭಜನಾ ಮಂಡಳಿಯಲ್ಲಿ ಭಜನೆ ಮಾಡುತ್ತಾರೆ.

೩. ಹೆಸರು : **ದಿ॥ ಕಮ್ಮಾರ ಕೊಡ್ಡ ನಾಗಲಿಂಗಾಚಾರ**

ಜನನ : ೧೯೩೪

ವೃತ್ತಿ : ಬಡಗಿತನ ರೈತರ ಸಲಕರಣೆ ಮಾಡುತ್ತಿದ್ದರು.

ವಿದ್ಯೆ : ೬ನೇ ತರಗತಿ

ಹೆಂಡತಿ : ಕಾಳಮ್ಮ

ಮಕ್ಕಳು : ೫ ಗಂಡು ಮತ್ತು ೪ ಹೆಣ್ಣು

ಮರಣ : ೧೫.೧೧.೧೯೯೬

ದೊಡ್ಡ ನಾಗಲಿಂಚಾಚಾರಿ ಎಂದು ಪರಿಚಿತರಿರುವ ಇವರು ಬಯಲಾಟದಲ್ಲಿ ಆಸಕ್ತಿ ಹೊಂದಿದ್ದರು. ಬರೀ ಕಮ್ಮಾರಿಕೆಯನ್ನು ಆಧಾರವಾಗಿಟ್ಟುಕೊಂಡು ಜೀವನ ನಡೆಸುತ್ತಿದ್ದರೂ ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ತಂದೆ ತಾಯಿಯರಿಂದ ಯಾವುದೇ ಆಸ್ತಿ ಇರದೆ ಸಂಡೂರಿನ ಜಾತ್ರೆ ಉತ್ಸವ ಸಂದರ್ಭದಲ್ಲಿ ತೇರು (ರಥ) ಜೋಡಣೆ ಕೆಲಸ ನಿರ್ವಹಿಸುತ್ತಿದ್ದರು. ಇವರು ಶಾಲೆಯಲ್ಲಿ ಓದುವಾಗ ಎಂ. ವೈ. ಘೋರ್ಪಡೆಯವರ ಸ್ನೇಹಿತರಾಗಿದ್ದರು. ಸಂಡೂರಿನ ಜಾತ್ರೆ ಉತ್ಸವದ ರಥದ ಜೋಡಣೆಗೆ ವಂಶಪಾರಂಪರೆಯಾಗಿ ಇವರನ್ನೇ ನಡೆಸುತ್ತಾ ಬಂದಿದ್ದಾರೆ. ಆ ಸಮಯಕ್ಕೆ ಈ ಕೆಲಸಕ್ಕಾಗಿ ರಾಜರು ೪ ಎಕರೆ ಭೂಮಿ ಬಳುವಳಿ ನೀಡಿದ್ದು ಅದರಿಂದ ಜೀವನ ಸ್ವಲ್ಪ ಸುಧಾರಿಸಿತು. ಇದರ ನಡುವೆ ಇವರಿಗೆ ಹುಟ್ಟಿದ ಮತ್ತೊಂದು ಗೀಳು ಬಯಲಾಟ ಆಡುವುದು ಆಡಿಸುವುದು. ಶಿವರಾತ್ರಿ, ಸುಗ್ಗಿ, ಬೇಸಿಗೆ, ಯುಗಾದಿ, ಹಬ್ಬಗಳ ಸಂದರ್ಭದಲ್ಲಿ ಇಚ್ಚೆಯುಳ್ಳ ಯುವಕರನ್ನು ಒಟ್ಟುಗೂಡಿಸಿಕೊಂಡು ಬಯಲಾಟ ಆಡುತ್ತಿದ್ದರು.

ಬಯಲಾಟ ಮತ್ತು ಪಾತ್ರಗಳು

೧. ರಕ್ತ ರಾತ್ರಿ – ಅರ್ಜುನನ ಪಾತ್ರ

೨. ಕುರುಕ್ಷೇತ್ರ – ಶಕುನಿ

೩. ರಾಮಾಯಣ –, ರಾಮ

೪. ಮಾಯಾಬಜಾರ – ನಾರದ

೫. ಮಣಿಮಲ್ಲಅಸುರ – ನಾರದ

ತಾವು ಕಲಿತ ಈ ವಿದ್ಯೆಯನ್ನು ಮಗ ಮೌನಾಚಾರ್‌ಗೆ ಹೇಳಿಕೊಟ್ಟರು ಅವರಿಗಿಂತ ಪ್ರತಿಭಾವಂತನಾದ ಅವರು ಪ್ರಸ್ತುತ ಲಕ್ಷ್ಮೀಪುರದಲ್ಲಿ ಇದೇ ಹವ್ಯಾಸವನ್ನು ಮುಂದುವರೆಸಿಕೊಂಡುಬಯಲಾಟ ಕಲಾವಿದ ಮೇಸ್ತ್ರು ಎಂದು ಪ್ರಸಿದ್ಧರಾಗಿದ್ದರು.

೪.	ಹೆಸರು	:	**ಪಿಂಜಾರ್ ಸುಲ್ತಾನ್ ಸಾಬ್ (ಮೇಸ್ತ್ರು)**
	ತಂದೆ	:	ಪಿಂಜಾರ್ ಅಲಿಸಾಬ್
	ತಾಯಿ	:	ಜಂಗಾಲಮ್ಮ
	ಹೆಂಡತಿ	:	ನೂರ್ ಬಿ
	ಜನನ ದಿನಾಂಕ	:	೦೧.೦೭.೧೯೪೧
	ವೃತ್ತಿ	:	ಬಡಿಗೇರ್ ಕೆಲಸ
	ಮಕ್ಕಳು	:	೨ ಗಂಡು, ೧ ಹೆಣ್ಣು

ಬಯಲಾಟದ ಮೇಸ್ತ್ರು ಎಂದೇ ಪ್ರಖ್ಯಾತರಾದ ಪಿಂಜಾರ್ ಸುಲ್ತಾನ್ ಸಾಬ್ ತಂದೆ ಸಂಡೂರಿನ ಸಂಸ್ಥಾನ ಮಹಾರಾಜರ ಕಾಲದಲ್ಲಿ ಪೋಲೀಸ್‌ಬ್ಯಾಂಡ್ ಊದುತ್ತಿದ್ದರು (ಕ್ಲಾರ್‌ನೀಟ್). ಮನೆಯಲ್ಲಿ ಕಡುಬಡತನದ ಕಾರಣ ಸುಲ್ತಾನ್ ಸಾಬ್ ೫ನೇ ತರಗತಿಗೆ ಓದನ್ನು ನಿಲ್ಲಿಸಿ ತಂದೆಯಂತೆಯೇ ಕ್ಲಾರ್‌ನೀಟ್ ಭಾರಿಸುತ್ತಾ ಬಡಿಗೇರ್ ಕೆಲಸ ಮಾಡುತ್ತಾ ಇದ್ದರು. ೧೮ ವರ್ಷ ವಯಸ್ಸಿನವರಾದಾಗ ಅಕ್ಕಸಾಲಿ ಷಣ್ಮುಖಪ್ಪ ಎಂಬ ಹಾರ್ಮೋನಿಯಂ ಮೇಸ್ತ್ರು ಆಡಿಸುತ್ತಿದ್ದ ಬಯಲಾಟ ನೋಡುತ್ತಾ ಬಯಲಾಟದಲ್ಲಿ ಆಸಕ್ತಿ ಹೊಂದಿ ಸ್ತ್ರೀ ಹಾಗೂ ಪುರುಷ ಪಾತ್ರಗಳನ್ನು ಮಾಡಿದರು. ಪಾತ್ರ ನಿರ್ವಹಿಸುತ್ತಲೇ ಸಂಗೀತ ಹಾಗೂ ಹಾರ್ಮೋನಿಯಂ ಕಲಿತು ಮಾಸ್ಟರ್ ಆದರು. ಇವರಿಗೆ ಹಾರ್ಮೋನಿಯಂ ಅನ್ನು ದಾಸರ ಹನುಮಂತಪ್ಪ ಕಲಿಸಿದರು. ಗುರುಗಳ ಪ್ರಭಾವದಿಂದ ತಾವು **"ಬಾಲಸುಬ್ರಹ್ಮಣ್ಯ ಬಯಲಾಟ ಮಂಡಳಿ"** ಸೇರಿ ಅದನ್ನು ಬೆಳೆಸಿ ನಿರ್ದೇಶಕರಾದರು.

ಬಯಲಾಟಗಳು

೧. ದುಶ್ಯಾಸನ ವಧ

೨. ದ್ರೌಪದಿ ವಸ್ತ್ರಾಪಹರಣ

೩. ಗಿರಿಜಾ ಕಲ್ಯಾಣ

೪. ಪಾಂಡುವಿಜಯ

೫. ಪಾರ್ಥವಿಜಯ

೬. ಕನಕಾಂಗಿ ಕಲ್ಯಾಣ

೭. ಮಾಯಾ ಬಜಾರ್

೮. ಸಂಗ್ಯಬಾಳ್ಯ ಮೊದಲಾದವು.

ನಿರ್ವಹಿಸಿದ ಪಾತ್ರಗಳು

ಸ್ತ್ರೀ ಪಾತ್ರಗಳು : ಗಾಂಧಾರಿ, ಪದ್ಮಗಂಧಿ

ಪುರುಷ ಪಾತ್ರಗಳು: ಶಕುನಿ, ಧೃತರಾಷ್ಟ್ರ, ಭೀಷ್ಮ

ಹೆಚ್ಚಾಗಿ ರಾಮಾಯಣ ಮಹಾಭಾರತ ಸನ್ನಿವೇಶಗಳನ್ನು ಆಯ್ಕೆ ಮಾಡಿಕೊಂಡು ಆಡಿಸಿದ್ದಾರೆ. ನೃತ್ಯ ಕಲಿಸುವಾಗ ಪಾತ್ರಧಾರಿಗಳಿಗೆ ಛಡಿಯಿಂದ ಹೊಡಿಯುತಿದ್ದರು. ಇವರು ಹನುಮಂತಪ್ಪ ಮತ್ತು ಷಣ್ಮುಖಪ್ಪ ಅವರಿಂದ ಹೊಡೆಸಿಕೊಂಡೇ ಕಲಿತಿದ್ದಾರೆ. ೧೮ನೇ ವರ್ಷದಿಂದ ಇಂದಿನ ವರೆಗೂ ಹವ್ಯಾಸದಿಂದ ಈ ಕಲೆಯನ್ನು ಬೆಳೆಸುತ್ತಾ ಬಂದಿದ್ದಾರೆ.

೫. ಹೆಸರು : **ಸರಾಯದ ತಿಪ್ಪೇಸ್ವಾಮಿ**

ಜನನ : ೧೯೩೧, ೭೬ ವರ್ಷ

ವೃತ್ತಿ : ವ್ಯವಸಾಯ ಹಾಗೂ ದೇವಿ ಪುರಾಣ ಓದುವುದು

ತಂದೆ ತಾಯಿ : ನಾಗಪ್ಪ, ಯಲ್ಲಮ್ಮ

ಜಾತಿ : ಬೆಸ್ತು (ಗಂಗಾಮತಸ್ಥರು)

ಮಕ್ಕಳು : ೬ ಗಂಡು, ೬ ಹೆಣ್ಣು

ಸರಾಯದ ತಿಪ್ಪೆಸ್ವಾಮಿ ತಮ್ಮ ೧೨ನೇ ವಯಸ್ಸಿನಿಂದ ಬಯಲಾಟದ ಹವ್ಯಾಸ ಹೊಂದಿದ್ದರು. ೧೯೪೨ರಲ್ಲಿ ಎಂ. ವೈ. ಘೋರ್ಪಡೆಯವರು ಅರಮನೆಯ ಗೃಹ ಪ್ರವೇಶ ಮಾಡಿದ ಸಂಧರ್ಭದಲ್ಲಿ ಹೇಮರೆಡ್ಡಿ ಮಲ್ಲಮ್ಮ ಆಟ ಆಡಿದಾಗ ತಿಪ್ಪೇಸ್ವಾಮಿ ಹೇಮರೆಡ್ಡಿ ಮಲ್ಲಮ್ಮನ ಪಾತ್ರ ಹಾಕಿದ್ದರು. ಅವರ ಪಾತ್ರಕ್ಕೆ ಮೆಚ್ಚಿ ಸುಶೀಲಾದೇವಿ ಘೋರ್ಪಡೆ ಅವರು ಇವರಿಗೆ ಕಸುರಿ ಕೆಲಸ ಮಾಡಿದ ಮೆಟಲ್ ಬಳೆಗಳನ್ನು ಉಡುಗೊರೆಯಾಗಿ ನೀಡಿದ್ದರು.

ಬಡತನದ ಕಾರಣ ಇವರನ್ನು ಜಾಲಗಾರಸಣ್ಣಹುಲಿಗೆಪ್ಪ ಸಾಕಿ ಬೆಳೆಸಿದರು. ಅಕ್ಕಸಾಲಿಕೆಯನ್ನು ಕಲಿಸಿದರು. ಇವರಿಗೆ ಅಕ್ಕಸಾಲಿಷಣ್ಮುಖಪ್ಪ ಗುರುಗಳಾಗಿದ್ದು ಬಯಲಾಟ ಕಲಿಸಿದರು. ಜೊತೆಗೆ ತತ್ವ ಪದ ಭಜನೆಗಳನ್ನು ಸ್ವತಃ ರಚಿಸಿ ಹೇಳುತ್ತಿದ್ದರು.

ಬಯಲಾಟದಲ್ಲಿ ತಿಪ್ಪೇಸ್ವಾಮಿ ಹೆಚ್ಚಾಗಿ ಸ್ತ್ರೀ ಪಾತ್ರ ನಿರ್ವಹಿಸಿದ್ದು ರಂಗ ತಾಲೀಮು ಮಾಡುವಾಗ ಓಣಿಯಲ್ಲಿನ ಹೆಂಗಸರು ತಮ್ಮ ಸೀರೆ ಆಭರಣಗಳನ್ನು ಆಟದ ಸಂದರ್ಭದಲ್ಲಿ ತೆಗೆದುಕೊಂಡು ಹೋಗಲು ಹೇಳುತ್ತಿದ್ದರು. ಇವರು ಸ್ತ್ರೀಪಾತ್ರ ಹಾಕಿದ್ದಾರೆಂದರೆ ಸುತ್ತ ಮುತ್ತಲಿನ ಹಳ್ಳಿಗಳಿಂದ ಜನ ಗುಂಪು ಗುಂಪಾಗಿನೋಡಲು ಬರುತ್ತಿದ್ದರು. ಬ್ರಾಹ್ಮಣ ಸ್ತ್ರೀಯರು ಹೊರಗಡೆ ಹೋಗದವರು ಇವರ ಬಯಲಾಟ ನೋಡಲು ಬಂದು ಮುಯ್ಯಿ ಮಾಡಿದ ಸಂದರ್ಭಗಳಿವೆ.

ದಾಸರ ಹನುಮಂತಪ್ಪ ಹಾಗೂ ತಿಪ್ಪೇಸ್ವಾಮಿ ಅಭಿನಯಿಸುವ ವರೆಗೆ ಸ್ತ್ರೀ ಪಾತ್ರಗಳನ್ನು ಇವರೇ ಮಾಡುತ್ತಿದ್ದರು. ಇವರು ಮಾಡದಿದ್ದಾಗ ಕೂಡ್ಲಿಗಿ, ಮರಿಯಮ್ಮನ ಹಳ್ಳಿಗಳಿಂದ ವೃತ್ತಿಪರ ಸ್ತ್ರೀಯರನ್ನು ಕರೆಸುತ್ತಿದ್ದರು. ಬಯಲಾಟದ ಕಿರೀಟಗಳನ್ನು ತಿಪ್ಪೇಸ್ವಾಮಿ ತಾವೇ ತಯಾರಿಸುತ್ತಿದ್ದರು.

ಆಡಿಸಿದ ಬಯಲಾಟಗಳು

೧. ಗಿರಿಜಾ ಕಲ್ಯಾಣ

೨. ದಕ್ಷಬ್ರಹ್ಮ

೩. ದುಶ್ಯಾಸನ ವಧೆ

೪. ರತಿ ಕಲ್ಯಾಣ,

೫. ಮಣಿ ಮಲ್ಲಾಅಸುರ.

ನಿರ್ವಹಿಸಿದ ಸ್ತ್ರೀಪಾತ್ರಗಳು

೧. ರಕ್ತರಾತ್ರಿ – ಶಾಂತ ಕುಮಾರಿ

೨. ಕನಕಾಂಗಿ ಕಲ್ಯಾಣ – ಸುಭದ್ರೆ

೩. ಗಿರಿಜಾ ಕಲ್ಯಾಣ – ರತಿ, ರುಕ್ಮಿಣಿ

೪. ಹೇಮರೆಡ್ಡಿ ಮಲ್ಲಮ್ಮ – ಮಲ್ಲಮ್ಮ

೫. ರಕ್ತರಾತ್ರಿ – ದ್ರೌಪದಿ

ಕೃಷ್ಣಾನಗರ, ಬಂಡ್ರಿ, ಲಕ್ಷ್ಮೀಪುರ, ಗೊಲ್ಲರಹಟ್ಟಿ, ನಾರಾಯಣಪುರ ಗಳಲ್ಲಿ ಬಯಲಾಟ ಆಡಿಸಿದ್ದಾರೆ.

೬) **ಅಕ್ಕಸಾಲಿ ಷಣ್ಮುಕಪ್ಪ**

ಇವರು ಸಂಡೂರಿಗೆ ಬಯಲಾಟವನ್ನು ಮೊದಲಬಾರಿಗೆ ಆಡಿಸಿದವರು. ೧೯೭೬ ರಿಂದ ಆಡಿಸಲು ಪ್ರಾರಂಭಿಸಿದರು. ಇವರು ಆಡಿಸಿದ ಮೊದಲ ಆಟ 'ದಕ್ಷಬ್ರಹ್ಮ'. ಸಂಡೂರಿನ ಬಹಳಷ್ಟು ಕಲಾವಿದರಿಗೆ ಇವರೇ ಗುರುಗಳು. ಕಥಾನಾಯ್ಕಕ ಒಳ್ಳೆಯ ಸಂಗೀತಗಾರ ಆಗಿದ್ದ ಇವರು ರಾಗ ಸಂಯೋಜಕರೂ ಆಗಿದ್ದರು. ೪.೧/೨ ಅಡಿ ಎತ್ತರದ ಇವರು ಕೋಟು ಧರಿಸುತ್ತಿದ್ದರು. ಕನ್ನಡಕ ಹಾಕಿಕೊಂಡು ಹಣೆಗೆ ಕುಂಕುಮ ಧರಿಸುತ್ತಿದ್ದರು. ಏರು ಬಾಚುತ್ತಾ (ಗಿರಿಜಿ ಕೂದಲು) ಹಿಂದೆ ಸಲ್ಪ ಕೂದಲು ಬಿಟ್ಟಿದ್ದರು. ಸುಂದರ ಮುಖ ದೃಡಕಾಯದ ಇವರು ಸ್ತ್ರೀಪಾತ್ರಗಳನ್ನು ಶಿಖಂಡಿ, ಬೃಹನ್ನಳೆಯ ಪಾತ್ರಗಳನ್ನು ಮಾಡುತ್ತಿದ್ದರು. ಬಿದಿರಿನ ಕಟ್ಟಿಗೆ ಹಿಡಿದು ಎಲ್ಲರಿಗೂ ಹೊಡೆಯುತ್ತಾ ಬಯಲಾಟದ ಮಾತು ಕಲಿಸಿಕೊಡುತ್ತಿದ್ದರು. ಕಂಠಪಾಠ ಮಾಡುವಾಗ ಮಾತುಗಳನ್ನು ತಪ್ಪು ಹೇಳಿದರೆ ತಾಳಬೀಸಿ ಎಸೆಯುತ್ತಿದ್ದರು.

೧೯೨೫ ರ ಆಸುಪಾಸಿನಲ್ಲಿ ಇವರು ಜನ್ಮಿಸಿದ್ದು ಈಗ ಇವರು ಮರಣ ಹೊಂದಿ ೨೫ ವರ್ಷಗಳಾದ ಕಾರಣ ಸಂಶೋಧನೆಯ ಸಂಧರ್ಭದಲ್ಲಿ ನನಗೆ ಇವರ ಬೆಗ್ಗೆ ಹಳೆಯ ಕಲಾವಿದರು, ಜನರು ಹೇಳಿದ ಅಂಶಗಳನ್ನು ಮಾತ್ರ ಸಂಗ್ರಹಿಸಿದ್ದೇನೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಭಾವಚಿತ್ರ ಸಿಕ್ಕಿಲ್ಲ. ಹೇಳಿಕೆ ಮಾತ್ರ ದೊರೆತಿವೆ.

೭.	ಹೆಸರು	:	**ಪಿಂಜಾರ್ ಯಮುನಾಸಾಬ್**
	ತಂದೆ ತಾಯಿ	:	ರಕ್ಕುಸಾಬ್, ಮೌಲಮ್ಮ
	ವೃತ್ತಿ	:	ವಕ್ಕಲುತನ
	ಹೆಂಡತಿ	:	ಬಾಲಮ್ಮ
	ಶಿಕ್ಷಣ	:	ಇಲ್ಲ
	ಜನನ	:	೧೯೨೨ ರಲ್ಲಿ

ತಮ್ಮ ೧೮ನೇ ವಯಸ್ಸಿನಲ್ಲಿ ಬಯಲಾಟವಾಡಲು ಪ್ರಾರಂಭಿಸಿದ್ದಾರೆ. ೧೯೫೨ ರಿಂದ ೧೯೫೮ ನೇ ಇಸ್ವಿಯ ವರೆಗೆ ಬಯಲಾಟಗಳನ್ನು ಆಡಿದ್ದಾರೆ.

ಆಟದ ಹೆಸರು ಹಾಕಿದ ಪಾತ್ರ

೧. ರಾಮಾಂಜಿನೇಯ ಯುದ್ಧ ಕುಶ

೨. ಕನಕಾಂಗಿ ಕಲ್ಯಾಣ ಘಟೋತ್ಕಜ

೩. ಗಿರಿಜಾಕಲ್ಯಾಣ ಮನ್ಮಥ

೪. ದುಶ್ಯಾಸನವಧಾ ಧರ್ಮರಾಯ

೮. ಹೆಸರು : ನೀಲಗಾರ ಹಾಲಪ್ಪ

ಶಿಕ್ಷಣ : ಇಲ್ಲ

ವೃತ್ತಿ : ವ್ಯವಸಾಯ

ತಂದೆ ತಾಯಿ : ಈರಣ್ಣ, ತಿಪ್ಪಮ್ಮ

ಹೆಂಡತಿ : ಬಸಮ್ಮ

ಪಾತ್ರ : ಸಾರಥಿ

ಮರಣ : ೧೯೯೦

ತೆಳ್ಳಗೆ, ಮಧ್ಯಮ ಬಣ್ಣದ ಇವರು ಸಂಡೂರಿನಲ್ಲಿ ಪ್ರಥಮ ಸಾರಥಿ ಹಾಗೂ ಹೆಸರನ್ನು ಮಾಡಿದವರು. ಇವರ ಪಾತ್ರಕ್ಕೆ ಮೆಚ್ಚಿದ ಜನ ಉಡುಗೆ–ತೊಡುಗೆ ಮಯ್ಯಿ ಮಾಡುತ್ತಿದ್ದರು.

(ಇವರು ಹಳೆಯ ವ್ಯಕ್ತಿಯಾದ ಕಾರಣ ಇವರ ಬಗ್ಗೆ ಮಾಹಿತಿ ಅಸ್ಪಷ್ಟವಾಗಿದೆ.)

೯. ಹೆಸರು : ದಿ. ಹಗರಿ **ಕೊಮಾರಪ್ಪ** (ನಾಯಕ)

ತಂದೆ ತಾಯಿ : ದಿ. ಹಗರಿ ಪ್ರಭಣ್ಣ ದಿ. ಬಸಮ್ಮ

ವೃತ್ತಿ : ವ್ಯವಸಾಯ ಬಯಲಾಟದ ಕವಿ, ದೇವಪುರಾಣ ಶನಿದೇವರ ಪುರಾಣ ವಿರಾಟಪರ್ವಪುರಾಣಗಳನ್ನು ಓದುತ್ತಿದ್ದರು.

ಆಡಿಸಿದ ಬಯಲಾಟಗಳು

೧. ಪಾಂಡು ವಿಜಯ

೨. ಪಾರ್ಥ ವಿಜಯ

೩. ತ್ರಿಪುರ ಸಂಹಾರ

೪. ಕನಕಾಂಗಿ ಕಲ್ಯಾಣ

೧೦. ಹೆಸರು : **ಹಂಚಿನ ಮನೆ ದೊಡ್ಡ ಸುಭಾನಿ** (೬೦) ವರ್ಷ (ನಾಯಕ)

ಹುಟ್ಟಿದ ದಿನಾಂಕ : ೧೯೪೨

ಶಿಕ್ಷಣ : ೬ನೇ ತರಗತಿ

ತಂದೆ–ತಾಯಿ : ದಿ. ಹಂಚಿನ ಮನೆ ಖಾಸಿಂಸಾಬ್, ಮಾಬಮ್ಮ

ವೃತ್ತಿ : ವ್ಯವಸಾಯ

ಆಡಿದ ಬಯಲಾಟಗಳು

೧೮ವರ್ಷದವರಿದ್ದಾಗ ಸ್ತ್ರೀಪಾತ್ರ

ಗಿರಿಜಾ ಕಲ್ಯಾಣ – ಪಾರ್ವತಿ

ದುಶ್ಶಾಸನ ವಧ – ಕರ್ಣ

ಭಕ್ತ ಪ್ರಹಲ್ಲಾದ – ಹಿರಣ್ಯಕಶಪ

ದ್ರೌಪದಿ ವಸ್ತ್ರಾಪಹರಣ – ಕೌರವ

ದುಶ್ಯಾಸನದ ವಧ – ದುಶ್ಯಾಸನ

ಜೊತೆಗೆ ಹಿಮ್ಮೇಳದ ವ್ಯಕ್ತಿಯಾಗಿದ್ದರು.

೧೧. ಹೆಸರು : **ಹಂಚಿನಮನೆ ಸಣ್ಣ ಸುಭಾನಿ** (೫೫ವರ್ಷ)

ಶಿಕ್ಷಣ : ೫ನೇ ತರಗತಿ

ತಂದೆ–ತಾಯಿ : ರೆಹಮಾನ್‌ಸಾಬ್, ಹೊನ್ನೂರಮ್ಮ

ಹುಟ್ಟಿದ ದಿನಾಂಕ : ೧೯೫೩

ಮಾಡಿದ ಪಾತ್ರಗಳು

೧. ಪಾರ್ಥವಿಜಯ – ದೇವೇಂದ್ರ

೨. ದುಶ್ಯಾಸನ ವಧೆ – ಕೃಷ್ಣ

೧೨. ಹೆಸರು : **ಪಿಂಜಾರ್ ಮೌಲಾಸಾಬ್** (೬೮ ವರ್ಷ) ನಟ ಮತ್ತು ನಾಯಕ

ವೃತ್ತಿ : ವ್ಯವಸಾಯ

ಶಿಕ್ಷಣ : ೫ನೇ ತರಗತಿ

ತಂದೆ–ತಾಯಿ : ಹುಸೇನ್ ಸಾಬ್, ಸಕ್ರಮ್ಮ

ಮಾಡಿದ ಪಾತ್ರಗಳು

೧. ರತಿ ಕಲ್ಯಾಣ – ನಾರದ

೨. ದುಶ್ಯಾಸನದ ವಧ – ದುಶ್ಯಾಸನ

೩. ದ್ರೌಪದಿ ವಸ್ತ್ರಾಪಹರಣ – ದ್ರೌಪದಿ

ಆಡಿಸಿದ ಬಯಲಾಟಗಳು

೧. ವೀರ ಅಭಿಮನ್ಯುವಿನ ಕಾಳಗ

೨. ಪಾರ್ಥ ವಿಜಯ

೩. ಪಾಂಡು ವಿಜಯ

೪. ಧುಶ್ಯಾಸನ ವಧ ಅಥವಾ ದ್ರೌಪದಿಯ ವಸ್ತ್ರಾಪಹರಣ

೧೩. ಹೆಸರು: **ದಾಸರ ಗುಂಡಪ್ಪ** (೫೮ ವರ್ಷ)

ತಂದೆ : ದಾಸರ ಹನುಮಂತಪ್ಪ

ಪಾತ್ರ : ಸಾರಥಿ

ಸಂಡೂರಿನಲ್ಲಿ ನೀಲಗಾರ ಹಾಲಪ್ಪನ ನಂತರ ಸಾರಥಿ ಎಂದರೆ ಗುಂಡಪ್ಪ ಸಂಡೂರಿನ ಎಲ್ಲಾ ಬಯಲಾಟಗಳಲ್ಲಿ ಇವರೇ ಸಾರಥಿ ಯಾಗಿದ್ದರು. ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರತಿಷ್ಠಿತ ಸಾರಥಿಗಳ ಗುಂಪಿನಲ್ಲಿ ಇವರೂ ಒಬ್ಬರು.

೧೪. ಹೆಸರು : **ಬಿ.ಎಸ್. ನಾಗಪ್ಪ (ಭೋಜನಾಗಭೂಷಣ)** (೬೬ ವರ್ಷ)
(ಸಂಶೋದಕಿಯ ತಂದೆ)

ತಂದೆ-ತಾಯಿ : ದಿ.ಬೋಜಾ ಚೆನ್ನಪ್ಪ, ದಿ.ಬೋಜಾ ಬಸಮ್ಮ

ಶಿಕ್ಷಣ : ಎಸ್.ಎಸ್.ಎಲ್.ಸಿ.

ವೃತ್ತಿ : ಗುಮಾಸ್ತ & ವ್ಯಾಪಾರ

ಮಾಡಿದ ಬಯಲಾಟ ಪಾತ್ರಗಳು

ರಾಮಾಂಜಿನೇಯ ಯುದ್ಧ – ಬಾಲಕೃಷ್ಣ (ಆರಂಭದಲ್ಲಿ ಭಜನೆ ಹಾಗೂ ಪೂಜೆಯಲ್ಲಿ)

ದುಶ್ಯಾಸನ ವಧ – ಅರ್ಜುನ

ದುಶ್ಯಾಸನ ವಧ – ಶಕುನಿ

ದ್ರೌಪದಿ ವಸ್ತ್ರಾಪಹರಣ – ಪ್ರತಿಕಾಮಿಕ (ದೂತಿ)

೧೫. ಹೆಸರು :**ಬೋಜಾ ನೀಲಕಂಠಪ್ಪ** (೫೫ ವರ್ಷ) (ಸಂಶೋದಕಿಯ ಚಿಕ್ಕಪ್ಪ)

ತಂದೆ-ತಾಯಿ :ದಿ॥ ಬೋಜಾ ಈಶ್ವರಪ್ಪ, ದಿ॥ ಬಸಮ್ಮ

ಶಿಕ್ಷಣ :ಎಂ.ಎ. ಸಂಸ್ಕೃತ

ವೃತ್ತಿ :ವ್ಯವಸಾಯ

ಪಾತ್ರಗಳು– ಗಿರಿಜಾ ಕಲ್ಯಾಣ – ಮನ್ಮಥ

ಪಾರ್ಥ ವಿಜಯ – ನೀವಂತಕ

ಸಂಡೂರಿನ ಬಯಲಾಟದ ಕಲಾವಿದರು

ಕ್ರಸಂ	ಹೆಸರು	ಪಾತ್ರ	ಜಾತಿ	ವೃತ್ತಿ
೧	ಪಿಂಜಾರ್ ಗೋಕುರಸಾಬ್	ನಟ	ಪಿಂಜಾರ	ಡ್ರೈವರ್
೨	ಪಿಂಜಾರ್ ಸುಲ್ತಾನ್‌ಸಾಬ್	ಮಾಸ್ತರ್	ಪಿಂಜಾರ	ಬಡಿಗಿ
೩	ಪಿಂಜಾರ್ ಮೌಲಾಸಾಬ್	ಮಾಸ್ತರ್	ಪಿಂಜಾರ	ವ್ಯವಸಾಯ
೪	ದಿ.ಪಿಂಜಾರ್ ಖಾಸಿಂಸಾಬ್	ನಟ	ಪಿಂಜಾರ	ವ್ಯವಸಾಯ
೫	ದಿ.ಮುಜೆವಾರ್ ರಾಜಾಸಾಬ್	ನಟ	ಪಿಂಜಾರ	ವ್ಯವಸಾಯ
೬	ಮುಜೆವಾರ ಮೌಲಾಸಾಬ್	ನಟ	ಪಿಂಜಾರ	ವ್ಯವಸಾಯ
೭	ಹಂಚಿನಮನೆಸಣ್ಣ ಸುಬಾನಿ	ನಟ	ಮುಸ್ಲಿಂ	ವ್ಯವಸಾಯ
೮	ಹಂಚಿನಮನೆದೊಡ್ಡ ಸುಬಾನಿ	ನಟ	ಮುಸ್ಲಿಂ	ವ್ಯವಸಾಯ
೯	ದಿ. ಬಳಿಗೇರ್ ತಿಪ್ಪಣ್ಣ	ನಟ	ಲಿಂಗಾಯತ	ಬಡಗಿ
೧೦	ದಿ. ಬಳಿಗೇರ್ ಬಸವಲಿಂಗ್ಪ	ನಟ	ಲಿಂಗಾಯತ	ವ್ಯವಸಾಯ
೧೧	ಕೊರವರ ಪಂಪಣ್ಣ	ನಟ	ಕೊರಸರು	ಬ್ಯಾಂಡ್ ಬಾರಿಸುವವರು
೧೨	ಬಳಿಗೇರ್ ಸೋಮಶೇಖರ್	ನಟ	ಲಿಂಗಾಯತ	S.M.D.C.ನೌಕರ
೧೩	ದಿ. ಕೊಂಬರ ಕೃಷ್ಣಪ್ಪ	ನಟ	ಡೊಂಬರು	ವ್ಯವಸಾಯ
೧೪	ಪಿಂಜಾರ್ ಯಮುನಪ್ಪ	ನಟ	ಪಿಂಜಾರ್	ವ್ಯವಸಾಯ
೧೫	ಅಕ್ಕಸಾಲಿ ತಿಪ್ಪೇಸ್ವಾಮಿ	ಮಾಸ್ತರ್	ಗಂಗಾಮತಸ್ಥರು	ವ್ಯವಸಾಯ
೧೬	ಕಿಲ್ಲೇದರ್ ಸ್ವಾಮಿರಾವ್	ನಟ	ಮರಾಠರು	ವೆಲ್ಡರ್
೧೭	ದಿ. ಕುಡುತಿನಿ ಗೂಡುಸಾಬ್	ನಟ	ಮುಸ್ಲಿಂ	P.W.D.ನೌಕರ
೧೮	ದಿ. ಪಾತ್ರದ ಸೀನಪ್ಪ	ನಟ	ಬೆಟ್ಟಬಣಜಿಗ	ವ್ಯವಸಾಯ
೧೯	ದಿ. ಪಾತ್ರದ ಕಾಶಪ್ಪ	ನಟ	ಬೆಟ್ಟ ಬಣಜಿಗ	ವಾಲ್ಕನೈಕರ್
೨೦	ದಿ. ದಾಸರ ರಾಮಣ್ಣ	ನಟ	ದಾಸರು	ವ್ಯವಸಾಯ
೨೧	ಕಮ್ತಾರ್ ನಾಗರಾಜ	ನಟ	ವಾಲ್ಮೀಕಿ	ವ್ಯವಸಾಯ
೨೨	ಕಮ್ತಾರ್ ಕುಮಾರಸ್ವಾಮಿ	ನಟ	ವಾಲ್ಮೀಕಿ	ವ್ಯವಸಾಯ
೨೩	ಬಳಿಗೇರ್ ಷಣ್ಮುಖಪ್ಪ	ನಟ	ಲಿಂಗಾಯತ	ಟೈಲರ್

೨೪	ಅಗಸರ ಷಣ್ಮುಖಪ್ಪ	ನಟ	ಮಡಿವಾಳ	ಅಗಸರು
೨೫	ಭೋಜಾ ನಾಗಭೂಷಣಪ್ಪ	ನಟ	ಲಿಂಗಾಯತ	ವ್ಯಾಪಾರ
೨೬	ಭೋಜಾ ನೀಲಕಂಠಪ್ಪ	ನಟ	ಲಿಂಗಾಯತ	ವ್ಯವಸಾಯ
೨೭	ಸಿದ್ದಪ್ಪ	ನಟ	ವಾಲ್ಮೀಕಿ	ಡ್ರೈವರ್
೨೮	ಹಗರಿಕೊಮಾರಪ್ಪ	ನಟ	ಲಿಂಗಾಯತ	ವ್ಯವಸಾಯ
೨೯	ಹಗರಿ ಶಂಭುಲಿಂಗಪ್ಪ	ನಟ	ಲಿಂಗಾಯತ	ಟೀಚರ್
೩೦	ಮೆಲುಸೀಮೆ ಪಂಪಣ್ಣ	ನಟ	ಲಿಂಗಾಯತ	ವ್ಯವಸಾಯ
೩೧	ಮೇಲು ಸೀಮೆ ಷಣ್ಮುಖಪ್ಪ	ನಟ	ಲಿಂಗಾಯತ	ವ್ಯವಸಾಯ
೩೨	ಉಗ್ರಾಣದ ಓಂಕಾರಪ್ಪ	ನಟ	ಲಿಂಗಾಯತ	ಕಾಯಿವ್ಯಾಪಾರ
೩೩	ದಿ. ಹೈಕಲ್ ಸಿದ್ರಾಮಪ್ಪ	ನಟ	ಲಿಂಗಾಯತ	ವ್ಯವಸಾಯ
೩೪	ದಿ. ಅಂಕುಮನಾಳ್‌ಬಸವರಾಜಪ್ಪ	ನಟ	ಲಿಂಗಾಯತ	ವ್ಯಾಪಾರಿ
೩೫	ದಿ. ರೊಟ್ಟಿ ಸಲಾಗೂರಪ್ಪ	ನಟ	ಲಿಂಗಾಯತ	ನೌಕರ
೩೬	ದಿ. ಗಡಂಬ್ಲಿ ಬೂಕ್ಷಪ್ಪ	ನಟ	ಲಿಂಗಾಯತ	ವ್ಯವಸಾಯ
೩೭	ದಿ. ಗಡಂಬ್ಲಿ ದೊಡ್ಡಬಸಪ್ಪ	ನಟ	ಲಿಂಗಾಯತ	ವ್ಯವಸಾಯ
೩೮	ದಿ. ಗಡಂಬ್ಲಿ ಕೊಮಾರಪ್ಪ	ನಟ	ಲಿಂಗಾಯತ	ವ್ಯವಸಾಯ
೩೯	ದಿ. ಭೋಜಾ ಚೆನ್ನಪ್ಪ	ಮದ್ದಳೆಕಾರ	ಲಿಂಗಾಯತ	ವ್ಯವಸಾಯ
೪೦	ಎಲ್. ವೀರಭದ್ರಪ್ಪ	ನಟ	ಲಿಂಗಾಯತ	ಹೋಟಲ್
೪೧	ಮಾಳ್ಗಿ ಅಮರಪ್ಪ	ಮಾಸ್ತರ್	ಲಿಂಗಾಯತ	ವ್ಯವಸಾಯ
೪೨	ಮಾಳ್ಗಿ ರಾಮಪ್ಪ	ನಟ	ಲಿಂಗಾಯತ	N.M.D.C.ನೌಕರ
೪೩	ಬಳಿಕಟ್ಟಿ ಶಿವಮೂರ್ತಿ	ನಟ	ಲಿಂಗಾಯತ	ವ್ಯವಸಾಯ
೪೪	ಹೊಳಗುಂದಿ ಬಸವರಾಜ	ನಟ	ಲಿಂಗಾಯತ	ಡ್ರೈವರ್
೪೫	ಬಳ್ಳಿಟ್ಟಿ ಮಲ್ಲಪ್ಪ	ನಟ	ಲಿಂಗಾಯತ	ವ್ಯವಸಾಯ
೪೬	ದಾಸರ ಗುಂಡಪ್ಪ	ಸಾರಥಿ	ದಾಸರು	ಕಲಾವಿದ
೪೭	ದಿ. ನೀಲಗಾರ ಹಾಲಪ್ಪ	ಸಾರಥಿ	ಲಿಂಗಾಯತ	ವ್ಯವಸಾಯ
೪೮	ದಿ. ದಾಸರ ಹನುಮಂತಪ್ಪ	ಮಾಸ್ತರ್	ದಾಸರು	ವ್ಯವಸಾಯ
೪೯	ಕುರುಬರ ಮಾರೆಪ್ಪ	ನಟ	ಕುರುಬರು	ವ್ಯವಸಾಯ
೫೦	ದಿ. ಹರಿಜನ ಮಾರೆಪ್ಪ	ನಟ	ಹರಿಜನ	ವ್ಯವಸಾಯ

೫೧	ದಿ. ಹರಿಜನ ಹಳ್ಳಪ್ಪ	ನಟ	ಹರಿಜನ	ವ್ಯವಸಾಯ
೫೨	ದಿ.ಹರಿಜನ ಭೀಮಪ್ಪ	ನಟ	ಹರಿಜನ	ವ್ಯವಸಾಯ
೫೩	ನಾಯಕ ಲಕ್ಷಮ್ಮ	ನಟಿ	ವಾಲ್ಮೀಕಿ	ದೇವದಾಸಿ
೫೪	ಬಳ್ಳಿಕಟ್ಟಿ ಶಂಕರಪ್ಪ	ನಟ	ಲಿಂಗಾಯತ	ವ್ಯವಸಾಯ
೫೫	ಬಳ್ಳಕಟ್ಟಿ ಕುಮರಸ್ವಾಮಿ	ನಟ	ಲಿಂಗಾಯತ	ವ್ಯವಸಾಯ
೫೬	ನಾಗರಾಜ	ನಟ	ಮರಾಠರು	ವ್ಯವಸಾಯ
೫೭	ಮದಾಲಿ ಪ್ರಕಾಶ	ನಟ	ಲಿಂಗಾಯತ	ವ್ಯವಸಾಯ
೫೮	ಎ.ಎಮ್. ಪಂಪಯ್ಯ	ಅಡಿಗೆಭಟ್ಟ	ಜಂಗಮ	ಲಕ್ಷ್ಮೀಪುರ
೫೯	ತೋಟಯ್ಯ	ವ್ಯವಸಾಯ	ಜಂಗಮ	ಲಕ್ಷ್ಮೀಪುರ
೬೦	ತಿಪ್ಪಯ್ಯ	ವ್ಯವಸಾಯ	ಲಿಂಗಾಯತ	ಲಕ್ಷ್ಮೀಪುರ
೬೧	ಗೌಡನಸ್ವಾಮಿ	ಡ್ರೈವರ್	ವೀರಶೈವ	ಲಕ್ಷ್ಮೀಪುರ
೬೨	ಮಂದಾಲಿ ಬಸಣ್ಣ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೩	ಸಿಂಗಾರಿ ತಿಪ್ಪಯ್ಯ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೪	ಹೊಸಳ್ಳಿ ಕುಮಾರಪ್ಪ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೫	ಬಂಡ್ರಿಸ್ವಾಮಿ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೬	ಚೆನ್ನಯ್ಯ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೭	ಮೇಟಿಸ್ವಾಮಿ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೮	ತಿಪ್ಪಯ್ಯ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೬೯	ಕಂಬಾರ್ ಶಿವಪ್ಪ	ವ್ಯವಸಾಯ	ವೀರಶೈವ	ಲಕ್ಷ್ಮೀಪುರ
೭೦	ಕಮ್ಮಾರ್ ಮೌನಾಚಾರಿ(ನಾಯಕ)	ವ್ಯವಸಾಯ	ಕಮ್ಮಾರ	ಲಕ್ಷ್ಮೀಪುರ
೭೧	ದಿ. ಅಗಸರ ನರಸಿಂಗ	ಅಗಸರು	ಮಡಿವಾಳ	ಲಕ್ಷ್ಮೀಪುರ
೭೨	ಅಪ್ಪಯ್ಯ	ವ್ಯವಸಾಯ	ವಾಲ್ಮೀಕಿ	ಲಕ್ಷ್ಮೀಪುರ
೭೩	ದಾಸರ ನಾರಾಯಣ	ವ್ಯವಸಾಯ	ದಾಸರ	ಲಕ್ಷ್ಮೀಪುರ
೭೪	ತಂಗಳು ಮುದ್ದೆ ಈರಪ್ಪ	ವ್ಯವಸಾಯ	ಲಿಂಗಾಯತ	ಲಕ್ಷ್ಮೀಪುರ
೭೫	ದಿ. ಎಲ್ಲಪ್ಪ	ವ್ಯವಸಾಯ	ವಾಲ್ಮೀಕಿ	ಲಕ್ಷ್ಮೀಪುರ
೭೬	ಬಾಬಣ್ಣ	ವ್ಯವಸಾಯ	ವಾಲ್ಮಿಕಿ	ಲಕ್ಷ್ಮೀಪುರ
೭೭	ಪೋಲೀಸ್ ನಾರಾಯಣ	ಪೋಲೀಸ್	ಗಂಗಾಮತಸ್ಥರು	ಲಕ್ಷ್ಮೀಪುರ
೭೮	ಸಿದ್ರಾಮ	ವ್ಯವಸಾಯ	ಲಿಂಗಾಯತ	ಲಕ್ಷ್ಮೀಪುರ

ಸಂಡೂರಿನ ಪ್ರಮುಖ ಬಯಲಾಟಗಳು (ಕಥೆಗಳು)

ಮೌಖಿಕ ಪರಂಪರೆಯ ರೂಪದಲ್ಲಿರುವ ಕಥೆಗಳು ಬಹುತೇಕ ರಾಮಾಯಣ, ಮಹಾಭಾರತ, ಪುರಾಣಗಳಿಂದ ಪಠ್ಯ ಸ್ವೀಕರಿಸಿ ಬಯಲಾಟಕ್ಕೆ ಯೋಗ್ಯವಾದ ಸಾಹಿತ್ಯವನ್ನು ಶುದ್ಧ ಜಾನಪದ ಶೈಲಿಯಲ್ಲಿ ನಿರ್ಮಿಸಿಕೊಂಡು ಪ್ರಯೋಗಕ್ಕೆ ಒಳ ಪಡಿಸುತ್ತಾರೆ.

೧. ರಾಮಾಯಣದಿಂದ ಆಯ್ದ ಕಥೆಗಳು

ಅ. ರಾಮಾಂಜಿನೇಯ ಯುದ್ಧ

ಆ. ರಾವಣ ದಿಗ್ವಿಜಯ

ಇ. ಲವಕುಶ ಕಾಳಗ

ಈ. ರಾಮಾಯಣ

೨. ಮಹಾಭಾರತದಿಂದ ಆಯ್ದ ಕಥೆಗಳು

ಅ. ಪಾಂಡುವಿಜಯ

ಆ. ವೀರ ಅಭಿಮನ್ಯುವಿನ ಕಾಳಗ

ಇ. ದ್ರೌಪದಿ ಪಸ್ತ್ರಾಪಹರಣ

ಈ. ದುಶ್ಯಾಸನ ವಧಾ

ಉ. ಪಾರ್ಥ ವಿಜಯ

ಊ. ಮಾಯಾಬಜಾರ್ (ಕನಕಾಂಗಿ ಕಲ್ಯಾಣ)

ಋ. ಕುರುಕ್ಷೇತ್ರ

ಎ. ಪ್ರಮಿಳಾ ದರ್ಬಾರ್

ಏ. ದುರ್ಯೋಧನನ ಗರ್ವಭಂಗ

ಐ. ಕೀಚಕನ ವಧೆ

ಒ. ಸುಭದ್ರಾ ಕಲ್ಯಾಣ

ಓ. ಕರ್ಣಾರ್ಜುನ ಕಾಳಗ

ಔ. ಬಬ್ರುವಾಹನ ಕಾಳಗ

೩. ಪೌರಾಣಿಕ ಕಥೆಗಳು

ಅ. ಗಿರಿಜಾ ಕಲ್ಯಾಣ

ಆ. ದಕ್ಷ ಬ್ರಹ್ಮನ ಕಥೆ

ಇ. ಸುಂದೋಪ - ಸುಂದ

ಈ. ರತಿ ಕಲ್ಯಾಣ

ಉ. ಭಕ್ತ ಮಾರ್ಕಂಡೇಯ

ಅಧ್ಯಾಯ - ಏಳು

ಸಂಡೂರು ಬಯಲಾಟದ ವರ್ತಮಾನ ಮತ್ತು ಭವಿಷ್ಯ

ಅಧ್ಯಾಯ – ಏಳು

ಸಂಡೂರು ಬಯಲಾಟದ ವರ್ತಮಾನ ಮತ್ತು ಭವಿಷ್ಯ

ಪ್ರಕೃತಿಯ ರಮಣೀಯತೆ ಹಾಗೂ ರಮ್ಯತಾಣಕ್ಕೆ ಹೆಸರಾಗಿದ್ದ ಸಂಡೂರು ಇಂದಿನ ದಿನದಲ್ಲಿ ಸಂಪೂರ್ಣ ತನ್ನ ಪ್ರಕೃತಿ ನೈಸರ್ಗಿಕ ಸಂಪತ್ತನ್ನು ಕಳೆದು ಕೊಳ್ಳುತ್ತಿದೆ. ಸಂಡೂರಿನ ಆಧುನಿಕ ಪರಿಸರದಲ್ಲಿ ಮಾತ್ರವಲ್ಲ ಪ್ರಪಂಚವನ್ನು ಪ್ರತಿಕ್ಷಣ ನುಂಗುತ್ತಿರುವ ಕೈಗಾರೀಕರಣ ಆಧುನೀಕರಣ, ಜಾಗತೀಕರಣ ಹಿನ್ನೆಲೆಯಲ್ಲಿ ಕಲೆ ಸಂಸ್ಕೃತಿಗಳ ಪಾಡು ನಾಶವಾಗುತ್ತಾಬರುತ್ತಿದೆ. ವಿಶೇಷವಾಗಿ ಡಿಗ್ಗಿಂಗ್, ಮೈನಿಂಗ್ ಪ್ರಭಾವದಿಂದ ಬಯಲಾಟದ ಸತ್ವ ಕಡಿಮೆಯಾಗುತ್ತಿದೆ.

೧೯೮೨ ರ ವರೆಗೆ ಬಯಲಾಟಗಳಲ್ಲಿ ಸ್ವರ್ಣಯುಗ ಕಂಡರೂ ೧೯೮೨ ನಂತರ ಬಯಲಾಟ ಕಡಿಮೆ ಯಾಗುತ್ತಿದೆ. ಬಯಲಾಟಗಳ ಬಗ್ಗೆ ನಡೆಯ ಬೇಕಾದ ಪ್ರಚಾರ, ಪ್ರೋತ್ಸಾಹ ಯಾವುದೂ ಸಿಗುತ್ತಿಲ್ಲ. ಸಿಕ್ಕರೆ ಅದೂ ಅಷ್ಟಕ್ಕಷ್ಟೆ. ಇಂದಿನ ಸ್ವರೂಪದಲ್ಲಿ ಇಲ್ಲಿನ ಕಲೆ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಕಷ್ಟದ ಮಾತಾಗಿದೆ.

ಔದ್ಯೋಗೀಕರಣ, ಯಾಂತ್ರಿಕರಣ, ಪಾಶ್ಚಾತ್ಯ ನಾಗರೀಕತೆಯ ಪ್ರಭಾವ ಮುಂತಾದ ಕಾರಣಗಳಿಂದ ಜಗತ್ತಿನ ಯಾವುದೇ ಮೂಲೆಗಳು ಉಳಿಯದೇ ಹೋಗಿವೆ. ಇದಕ್ಕೆ ಸಂಡೂರು ಹೊರತಾಗಿಲ್ಲ. ಇಂತಹ ಸಂದರ್ಭದಲ್ಲಿ ಬಯಲಾಟದಂತಹ ಪಾರಂಪರಿಕ ಕಲೆಯ ಭವಿಷ್ಯದ ಕುರಿತು ಚಿಂತಿಸಬೇಕಾಗುತ್ತದೆ.

ಶಿಕ್ಷಣದ ಮುಖ್ಯಗುಣ ಆಧುನಿಕತೆಗೆ ಚಲನೆ ನೀಡುವುದು. ಇದು ವಿಕಾಸಗೊಂಡಂತೆ ಅಭಿವ್ಯಕ್ತಿಯ ಮೂಲ ಬದಲಾಗುತ್ತಾ ಹೋಗುತ್ತದೆ. ಈ ನಿಟ್ಟಿನಲ್ಲಿ ನಾಟಕವನ್ನು ನಾವು ಎಷ್ಟೇ ಪ್ರಶಂಸಿಸಿದರೂ ಬಯಲಾಟಗಳ ಆಧುನಿಕ ರೂಪಾಂತರವೇ ನಾಟಕ ಎಂಬುದರಲ್ಲಿ ಎರಡು ಮಾತಿಲ್ಲ.

ಸಂಡೂರು ತಾಲ್ಲೂಕಿನಲ್ಲಿ ಬಯಲಾಟ ಕುರಿತು. ಸಂಶೋಧನೆ ಮಾಡಿದಾಗ ಸಂಡೂರಿನ ವಡ್ಡು, ತೋರಣಗಲ್ಲು, ಕುರೇಕುಪ್ಪೆ, ಹೊಸಳ್ಳಿ, ಯಶವಂತನಗರ, ಲಕ್ಷ್ಮೀಪುರ ಧರ್ಮಾಪುರಗಳಲ್ಲಿ ಹೆಚ್ಚಾಗಿ ಕಲೆಯ ನೆಲೆಗಳು ಕಂಡುಬರುತ್ತವೆ. ಆಧುನಿಕತೆಯ ಪ್ರಭಾವದಿಂದ ಈ ಗಂಡುಕಲೆಯಲ್ಲಿ ಹಲವು ಮಾರ್ಪಾಡು ಹೊಂದಿದೆ. ಗಣಿಗಾರಿಕೆ ಹಾಗೂ ಮುಕ್ತಮಾರುಕಟ್ಟೆ, ಆಧುನಿಕ ಮಾಧ್ಯಮಗಳೊಂದಿಗೆ ಸಂಘರ್ಷಕ್ಕೆ ಇಳಿದಿವೆ. ಕಲೆಯ ಆಳವನ್ನು ಅರಗಿಸಿಕೊಂಡ ಹಳೆಯ ವ್ಯಕ್ತಿಗಳು ಇಂದು ಆಡುವ, ಆಡಿಸುವ ಉತ್ಸಾಹ ತೋರಿದರೂ ಬದಲಾದ ಪರಿಸರದ ಕಾರಣ ಓಗೋಡುವ ಮನಸ್ಸುಗಳು ಕಡಿಮೆ. ಹಾಗೇನಾದರೂ ಆಟ ಆಡುವುದೇ ಆದರೆ ನೋಡುವ,ನೋಡಿ ಆನಂದಿಸುವ ಸಾವಿರಾರು ಹೃದಯಗಳು ನೆರೆಯುತ್ತವೆ.

ಬಯಲಾಟಗಳ ಭವಿಷ್ಯವನ್ನು ಕುರಿತು ಯೋಚಿಸಿದಾಗ ಇವುಗಳ ಉಳಿವಿಗಾಗಿ ಶ್ರಮಿಸಬೇಕಾಗಿರುವುದು ಇಲ್ಲಿನವರ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಂಡೂರಿನಲ್ಲಿ ಇಂತಹ ಕಲೆ, ಸಾಹಿತ್ಯ, ಸಂಸ್ಕೃತಿಗಳ ಉಳಿವಿಗಾಗಿ **"ಕರ್ನಾಟಕ ರಕ್ಷಣಾವೇದಿಕೆ"**, 'ನಿಸರ್ಗ ಯುವಕ ಮಂಡಳಿ', **"ಜೈ ಕರ್ನಾಟಕ ಸಂಘ"**, **"ಸಂಡೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್"**ನ ಸದಸ್ಯರು ಹಲವಾರು ರೀತಿಯಲ್ಲಿ ಶ್ರಮಿಸುತ್ತಿದ್ದಾರೆ. ಈ ಸಂಘ ಸಂಸ್ಥೆಯ ಯುವಕರು ಉತ್ಸಾಹಿ ಜನರು ಇವುಗಳ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದಾರೆ. ಅವುಗಳ ನೆಲೆ, ಬೆಲೆಗೆ ಸದಾವಕಾಶ ಕಲ್ಪಿಸಿ ಕೊಡುತ್ತಿದ್ದಾರೆ. ಕಲಾವಿದರಿಗೆ ಪಾರಿತೋಷಕಗಳನ್ನು ನೀಡಿ ಗೌರವಿಸಿ ಸನ್ಮಾನ ಮಾಡುತ್ತಿದ್ದಾರೆ.

ಸಂಡೂರಿನ ಮಾಜಿ ಶಾಸಕರಾದ ಸಂತೋಷ್ ಲಾಡ್ ಅವರು ೨೦೦೬-೦೭ ನೇ ವರ್ಷಗಲ್ಲಿ ತಮ್ಮ ಸ್ವಂತ ಹಣ ನೀಡಿ ಹಬ್ಬಹರಿದಿನಗಳಲ್ಲಿ ಬಯಲಾಟಗಳನ್ನು ಕಲಾವಿದರಿಂದ ಆಡಿಸಿದ್ದಾರೆ. ಹೊಸಬಾವಿ ಓಣಿ ತಂಡ, ಪಿಂಜಾರ್ ಓಣಿ ತಂಡ, ಲಕ್ಷ್ಮೀಪುರ ತಂಡಗಳಿಗೆ ಬೇಕಾದ ಹಲವು ವಸ್ತುಗಳನ್ನು ಮೇಳದ ಸಾಮಾನು-ಸರಂಜಾಮುಗಳನ್ನು ಕೂಡಿಸಿದ್ದಾರೆ.

ಇಂಥ ಕಲೆಗಳನ್ನು ಉಳಿಸಿಕೊಳ್ಳಲು ಇಂತಹ ಹಲವು ಪ್ರಯತ್ನಗಳನ್ನು ನಾವು ಮಾಡಬೇಕಾಗಿದೆ. ಸಂಡೂರಿನ ಬಯಲಾಟಗಳ ಮೇಲೆ ಈಗಾಗಲೇ ಸಾಕಷ್ಟು ಮಬ್ಬು ಕವಿದಿದೆ. ಈ ಕಲೆಯನ್ನು ಉಳಿಸಿಕೊಳ್ಳುವುದು ಮಾಡಬೇಕಾದ ಮುಖ್ಯಕೆಲಸ. ಹಳೆಯ ಕಲಾವಿದರು ಹಿಮ್ಮೇಳದವರೂ ಮರೆಯಾಗುತ್ತಿದ್ದಾರೆ. ಜಾನಪದದ ಮೂಲ ಅಭಿವ್ಯಕ್ತಿಯು ಬದಲಾಗುತ್ತಿರುವ ಕಾರಣ ಮೂಲರೂಪದಲ್ಲಿಯೇ ಇವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಕಲಾವಿದರಿಂದ ಆಟ ಆಡಿಸಿ ಅದನ್ನು ಚಿತ್ರೀಕರಿಸಿ ಇಡಬೇಕು. ಹಿಮ್ಮೇಳ ಮತ್ತು ಮುಮ್ಮೇಳದವರಿಂದ ಹಾಡಿಸಿ ಧ್ವನಿ ಮುದ್ರಣ ಮಾಡಿಸಿ ಇಡಬೇಕು. ಈ ಕೆಲಸಗಳು ಅತಿಜಾಗ್ರತೆಯಿಂದ ಮಾಡಿದರೆ ಕೆಲಮಟ್ಟಿಗಾದರೂ ಈ ಕಲೆಯನ್ನು ಉಳಿಸಬಹುದು.

ಅಧ್ಯಾಯ - ಎಂಟು

ಸಮಾರೋಪ

ಅಧ್ಯಾಯ – ಎಂಟು

ಸಮಾರೋಪ

ಜನಪದ ರಂಗ ಪ್ರಕಾರಗಳಲ್ಲಿ ಕರ್ನಾಟಕದಲ್ಲಿ ಕಂಡು ಬರುವ ಪ್ರಕಾರ ವೆಂದರೆ ಬಯಲಾಟ ಇದನ್ನು ಮೂಡಲ ಪಾಯ ಬಯಲಾಟ ಎಂದು ಕರೆಯಲಾಗಿದೆ. ಬಳ್ಳಾರಿ ಜಿಲ್ಲೆಯ ಮೇರೆ ಗುರುತಿಸಿಕೊಂಡರೆ ಕಲೆ, ಸಂಸ್ಕೃತಿ, ಜನ ಜೀವನ ಪದ್ಧತಿ ಆಚರಣೆಗಳಲ್ಲಿ ವಿಭಿನ್ನವಾಗಿ ಕಾಣುತ್ತವೆ. ಹಾಗೆ ಈ ಜಿಲ್ಲೆಯ ಸಂಡೂರು ತನ್ನ ನೈಸರ್ಗಿಕ ಸಂಪತ್ತು, ರಮ್ಯತಾಣಗಳಿಂದ, ಅದಿರಿನ ನಿಕ್ಷೇಪ, ಫಲವತ್ತಾದ ಭೂಮಿಯೊಂದಿಗೆ, ರಾಜಕೀಯ ಹಿನ್ನೆಲೆಯ ಪರಿಣಾಮದಿಂದ, ಆಧುನಿಕತೆಯಲ್ಲಿ ಹಲವು ಶೀಘ್ರ ಬದಲಾವಣೆ ಕಂಡಿದೆ. ಪ್ರಾದೇಶಿಕ ವೈಶಿಷ್ಟ್ಯತೆಯಿಂದ ಜನಪದರಂಗ ಕಲೆಯಾದ ಬಯಲಾಟವು ಆಧುನಿಕ ಮಾಧ್ಯಮಗಳಾದ, ದೂರದರ್ಶನ, ಗಣಕಯಂತ್ರ ಕೈಗಾರಿಕರಣ, ನಗರೀಕರಣ, ಜಾಗತೀಕರಣದಡಿಯಲ್ಲಿ ದಿನೇ ದಿನೇ ಕ್ಷೀಣಿಸುತ್ತಿದೆ. ಜೊತೆಗೆ ಸಂಡೂರಿನಲ್ಲಿ ಅಧಿಕವಾಗಿರುವ ಭೂ ಅಗೆತ (ಡಿಗ್ಗಿಂಗ್) ಟ್ರಾನ್ಸಪೋರ್ಟೆಷನ್, ಮೈನಿಂಗ್ ಗಳಲ್ಲಿಯೇ ಜನರು ಹಣದಾಸೆಗೆ ಶ್ರೀಮಂತರಾಗುವ ಬಯಕೆಗೆ ಬಲಿಯಾಗುತ್ತಿದ್ದಾರೆ.

ಜನಪದ ಕಲೆಗಳ ಬಗ್ಗೆ ಇವರುಗಳ ಆಸಕ್ತಿ ಬಹಳವೇ ಕಡಿಮೆ ಯಾಗುತ್ತಿದೆ. ಇದರೊಂದಿಗೆ ಆಧುನಿಕತೆ, ನಾಗರೀಕತೆಯ ಪ್ರಭಾವದ ಸೆಳೆತ ಅದರ ಅಸ್ಥಿತ್ವವನ್ನೇ ಅಲ್ಲಾಡಿಸುತ್ತಿದೆ. ಬಯಲಾಟಗಳ ಬಗ್ಗೆ ನಡೆಯ ಬೇಕಾದ ಪ್ರಚಾರ, ಪ್ರೋತ್ಸಾಹಯಾವುದೂ ಸಿಗುತ್ತಿಲ್ಲ. ಕಾಲ ಪರಿಸರದ ಬದಲಾವಣೆಯನ್ನು ನೋಡಿದಾಗ ಇಲ್ಲಿನ ಜನಜೀವನ ಸಂಪೂರ್ಣ ಬದಲಾಗಿದೆ. ಟಿ.ವಿ. ಸಿನಿಮಾ, ರೇಡಿಯೋ, ಕಂಪ್ಯೂಟರ್‌ಗಳ ಹಾವಳಿಯಿಂದ

ರಮ್ಯಮನೋಹರ ತಂತ್ರಜ್ಞಾನಗಳಿಂದ ವಿಸ್ಮಯ ಗೊಳ್ಳುತ್ತಿರುವಜನ ಪರಂಪರಾಗತ ಕಲೆಯಡೆಗೆ ದೃಷ್ಟಿ ಕಡಿಮೆ ಯಾಗುತ್ತಿದೆ.

ಸಮಯದ ಅಭಾವ, ಶೀಘ್ರ ಬೆಳವಣಿಗೆ, ಪ್ರತಿದಿನ ಹೊಸತನ ಇವುಗಳಿಂದ ಬಯಲಾಟದ ಹಿಂದಿನ ಮೌಲ್ಯಗಳನ್ನು ಕಾಪಾಡಿಕೊಂಡು ಬರುವುದು ಅಸಾಧ್ಯವಾಗಿದೆ. ಅಭಿವ್ಯಕ್ತಿಯ ಮೂಲ ಬದಲಾಗುತ್ತಿರುವ ಕಾರಣ ಇವುಗಳ ಬಗ್ಗೆ ಅಧ್ಯಯನಕಾರರು ವಿಶೇಷ ಒಲವು ತೋರಿಸಿ ಇವುಗಳನ್ನು ಮುಂಬರುವ ಪೀಳಿಗೆಗಾಗಿ ಕಾದಿರಸಬೇಕಿದೆ.

ಸಾಂಸ್ಕೃತಿಕ ಸಂದರ್ಭದಲ್ಲಿ ಇಂದು ನಮ್ಮಲ್ಲಿರುವ ಕಲೆಯನ್ನು ಮತ್ತೊಬ್ಬರಿಗೆ ಪರಿಚಯಿಸುವ ವಿನಿಮಯ ಕಾರ್ಯಸಹ ಬಯಲಾಟಗಳ ನವೀಕರಣದಲ್ಲಿ ಮಹತ್ವದ ಅಂಶವಾಗಿದೆ. ಒಂದು ಪ್ರದೇಶದಲ್ಲಿನ ಆಟಗಳು ಮತ್ತೊಂದು ಪ್ರದೇಶಕ್ಕೆ ಅಲ್ಲಿನ ಆಟಗಳು ಈ ಪ್ರದೇಶಕ್ಕೆ ಪರಿಚಿತವಾಗಬೇಕು. ಕಲಾವಿದರ ಮೇಳ, ಬಯಲಾಟ, ತಜ್ಞರ ತರಬೇತಿ ಶಾಲೆಗಳು ಈ ಕೊರತೆಯನ್ನು ನಿವಾರಿಸುತ್ತವೆ. ಬಯಲಾಟ ಕಲಿಸಲು ತರಬೇತಿ ಕೇಂದ್ರಗಳನ್ನು ತೆರೆದು ಅಲ್ಲಿ ತಜ್ಞರಿಂದ ಸಾಂಪ್ರದಾಯಿಕ ರೀತಿಯಲ್ಲಿ ಇವುಗಳನ್ನು ಕಲಿಸಿ ಪ್ರದರ್ಶನಕ್ಕೆ ಒಳಪಡಿಸುವುದರಿಂದ ಪರಂಪರಾಗತವಾಗಿ ಬಂದಿರುವ ಇವುಗಳನ್ನು ಉಳಿಸಿಕೊಂಡು ಹೋಗ ಬಹುದಾಗಿದೆ. ಇದರೊಂದಿಗೆ ಕಾಲಕ್ಕೆ ತಕ್ಕಂತೆ ಕಲೆಯನ್ನು ನಾವು ನೂತನವಾಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾಮ್ಯ ಮತ್ತು ವೈಷಮ್ಯಗಳ ಲೌಕಿಕ ಜ್ಞಾನ ಬೆಳೆದು ಬರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕವಾಗಿ ಮುಂದುವರೆಯದಿದ್ದರೂ ಪಾರಂಪರಿಕ ಕಲೆಗಳನ್ನು ಉಳಿಸಿಕೊಳ್ಳುವಲ್ಲಿ ಅಧಿಕಶ್ರಮ ನಡೆಯುತ್ತಿದೆ. ನಮ್ಮಲ್ಲಿ ಜಾನಪದ ಮ್ಯೂಸಿಯಂ, ಅಕಾಡೆಮಿ, ವಿಶ್ವವಿದ್ಯಾಲಯಗಳ ಜಾನಪದ ಅಧ್ಯಯನ ವಿಭಾಗ ಈ ಕಾರ್ಯದಲ್ಲಿ ಅತೀ ಶ್ರಮವಹಿಸುತ್ತಿವೆ.

ಪ್ರಸ್ತುತ ಅಧ್ಯಯನದಲ್ಲಿ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಿದ್ದೇನೆ. ಇದರಿಂದ ಕಂಡು ಬಂದ ಅಂಶಗಳು ಈ ರೀತಿಯಾಗಿವೆ.

ಸಂಶೋಧನೆಯ ಫಲಿತಗಳು

೧. **ಬದಲಾಗುತ್ತಿರುವ ಪಾರಂಪರಿಕ ಕಲೆಗಳ ಅಸ್ಥಿತ್ವ** ಇಂದು ಪಾರಂಪರಿಕ ಕಲೆಗಳ ಮೂಲ ಅಭಿವ್ಯಕ್ತಿಯು ಬದಲಾಗುತ್ತಿರುವ ಕಾರಣ ಜಾನಪದಕಲೆಗಳ ಅಸ್ಥಿತ್ವ ಕಡಿಮೆಯಾಗುತ್ತಿದೆ. ಜನರ ಜೀವನವು ದಿನೇ ದಿನೇ ಬದಲಾಗುತ್ತಿದೆ.

೨. ಆಧುನೀಕರಣ, ಜಾಗತೀಕರಣ, ಕೈಗಾರೀಕರಣ, ಪಾಶ್ಚಾತ್ಯೀಕರಣ ಪ್ರಭಾವದಿಂದ ಕಲೆಗಳಲ್ಲಿ ಮಾತ್ರವಲ್ಲ ಜನಪದ ಜೀವನವೂ ಬದಲಾಗುತ್ತಿರುವ ಕಾರಣ ಕಲೆಗಳು ಕ್ಷೀಣಿಸುತ್ತಿವೆ. ಪಾರಂಪರಿಕ ಕಲೆಗಳ ಬಗ್ಗೆ ಒಲವು ಕಡಿಮೆಯಾಗುತ್ತಿದೆ.

೩. ಡಿಗ್ಗಿಂಗ್, ಮೈನಿಂಗ್ ಹಾವಳಿಯಿಂದ ಜನರು ಶ್ರೀಮಂತರಾಗುವ ಹಾಗೂ ಐಶಾರಾಮಿ ಬದುಕನ್ನು ಬಯಸುತ್ತಿರುವ ಕಾರಣ ಜಾನಪದ ಕಲೆಗಳು ಸಂಡೂರಿನಲ್ಲಿ ಕಡಿಮೆ ಆಗುತ್ತಿವೆ.

೪. ದುಡಿಮೆ, ಶಿಕ್ಷಣ, ಭವಿಷ್ಯವನ್ನು ರೂಪಿಸಿಕೊಳ್ಳಲು ಜನರು ಬೇರೆ ಕಡೆಗೆ ಹೋಗುತ್ತಿರುವ ಕಾರಣ ಅನೇಕ ಕಲಾವಿದರು ನಗರ ಜೀವನದಲ್ಲಿ ಬೆರತು ಕಲೆಗಳು ಕಡಿಮೆಯಾಗಿವೆ.

೫. ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಜನಪದ ಕಲೆಗಳ ಒಲವು ಕಡಿಮೆಯಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಎಂಟು ಅಧ್ಯಾಯಗಳಾಗಿ ವರ್ಗೀಕರಣ ಮಾಡಿ ಕೊಂಡಿದ್ದೇನೆ.

ಮೊದಲನೆಯ ಅಧ್ಯಯನದಲ್ಲಿ ಅಧ್ಯಯನ ಉದ್ದೇಶ, ವಿಧಾನ ವ್ಯಾಪ್ತಿ ಇದ್ದು ಅಧ್ಯಯನ ಮಾಡಲು ಕಾರಣ ಸಂಡೂರಿನ ಪ್ರಾದೇಶಿಕ, ಭೌಗೋಳಿಕ, ರಾಜಕೀಯ, ಐತಿಹಾಸಿಕ ಹಿನ್ನೆಲೆಯೊಂದಿಗೆ ಸಂಡೂರಿನ ಇಂದಿನ ಚಿತ್ರಣವನ್ನು ತೆರೆದಿಟ್ಟಿದ್ದೇನೆ.

ಅಧ್ಯಾಯ ಎರಡರಲ್ಲಿ ಸಂಡೂರಿನ ಪರಿಚಯವನ್ನು ನೀಡಿದ್ದೇನೆ.

ಅಧ್ಯಾಯ ಮೂರರಲ್ಲಿ ಬಯಲಾಟ ಪದದ ಅರ್ಥ ಹಾಗೂ ಕನ್ನಡದಲ್ಲಿ ಬಯಲಾಟ ಪರಂಪರೆ ಮೂಡಿಬಂದದ್ದನ್ನು ವಿವರಿಸಿದ್ದೇನೆ.

ಅಧ್ಯಾಯ ನಾಲ್ಕರಲ್ಲಿ (ಸಂಡೂರು ಗ್ರಾಮವನ್ನು ಅನುಲಕ್ಷಿಸಿ) ಬಯಲಾಟದ ಪರಿಸರವನ್ನು ನೈಸರ್ಗಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಂಡೂರಿನ ಬಯಲಾಟದ ವಿಶೇಷತೆಯಲ್ಲಿ ರಂಗಕಲೆ, ಅಭಿನಯ, ಸಾಹಿತ್ಯ, ಸಾಮಾಜಿಕತೆ, ಆಧುನಕತೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಂಡೂರಿನ ಆಯ್ದ ಕಲಾವಿದರ ಪರಿಚಯ ಜೀವನ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಸಂಡೂರಿನ ಬಯಲಾಟದೊಂದಿಗೆ ಪ್ರದರ್ಶನಾತ್ಮಕ ಕಲೆಯೊಂದರ ವರ್ತಮಾನ ಮತ್ತು ಭವಿಷ್ಯ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಇದುವರೆಗು ಏನು ಮಾಡಿದೆ, ಏನುಮಾಡಬೇಕು ಎಂಬುದನ್ನು ವಿವರಿಸಲಾಗಿದೆ. ಅನುಬಂಧದಲ್ಲಿ ಬಯಲಾಟಗಳ ಕೆಲವು ಹಾಡು, ಮಾತುಗಳನ್ನು ಛಾಯಾಚಿತ್ರ, ವಕ್ತೃವಿವರ ಹಾಗೂ ಗ್ರಂಥ ಸೂಚಿಗಳನ್ನು ನೀಡಲಾಗಿದೆ.

ಅನುಬಂಧಗಳು

ಗ್ರಂಥಋಣ

ವಕ್ತೃಗಳ ವಿವರ

ಛಾಯಚಿತ್ರಗಳು

ಅನುಬಂಧ

ಬಯಲಾಟದ ಮಾತುಗಳು

ಸಂಡೂರಿನ ಬಯಲಾಟದಲ್ಲಿ ಕಥಾನಾಯಕ ಎಂದು ಕರೆಸಿಕೊಳ್ಳುವ ವ್ಯಕ್ತಿ ಮೇಸ್ತ್ರು ಕಥೆಯನ್ನು ಆರಿಸಿಕೊಳ್ಳುತ್ತಾರೆ. ಇದಕ್ಕೆ ಲಭ್ಯ ಪುಸ್ತಕಗಳನ್ನು ಬಳ್ಳಾರಿಯಿಂದ ತರಿಸುತ್ತಿದ್ದು ಆ ಕಥೆಗೆ ಸಂಬಂಧಿಸಿದ ಎಲ್ಲಾ ಹಾಡು, ಸ್ತುತಿ, ಮಾತುಗಳು ಅದರಲ್ಲಿ ಸಿದ್ಧವಾಗಿರುತಿತ್ತು. ಇವು ಗದ್ಯ-ಪದ್ಯ ಮಿಶ್ರಿತವಾಗಿರುತ್ತಿದ್ದವು. ಇವು ಪ್ರಾಸ ಬದ್ಧವಾಗಿರುತ್ತಿದ್ದು ನೆನಪಿಟ್ಟುಕೊಳ್ಳಲು ಸುಲಭವಾಗಿರುತ್ತಿದ್ದವು.

ಸಾರಥಿಯ ಮಾತುಗಳು

ಹೇ ದೇವಾ ಎಂಟಾಣೆಯನ್ನು ಟೊಂಕದಲ್ಲಿಟ್ಟುಕೊಂಡು ಕುಂಟು ಕುದುರೆ ಸವಾರಿ ಮಾಡುವಾಗ ಸುಂಟರ ಗಾಳಿ ಬಂದು ಕುಂಟಗಮನ ಹಳ್ಳದಲ್ಲಿ ಎಸೆಯಲು ಅಲ್ಲಿಂದ ಹೋಗಿ ಬಂಟನಾಳ ಗ್ರಾಮದಲ್ಲಿ ಎಂಟು ಹುಡುಗಿರ ಸಹವಾಸ ಮಾಡಲು ಎಂಟು ಹುಡುಗಿರ ನಂಟರು ಹಸಿಯ ದಂಟಿನಿಂದ ಸೊಂಟಕ್ಕೆ ಹೊಡೆಯಲು ಸೊಂಟ ಮುರುಕ ಸಾರಥಿ ಎಂದು ಕರೆಯುತ್ತಾರೆ ದೇವಾ ತಮ್ಮ ನಾಮಾಂಕಿತ ಹೇಳಬೇಕು.

೧. ಅಹೇ ದೇವಾ ಒಂದು ಅಂಡೆತ್ತು ಬಂದು ಬಂಡೆತ್ತು ಕಟ್ಟಿಕೊಂಡು ಹೊಲದಲ್ಲಿ ಕುಂಟೆ ಹೊಡೆಯುವ ಸಮಯದಲ್ಲಿ ಮೊಸರು ಮಾರುವ ಹುಡುಗಿ ಬಂದು ಕೆನೆ ಮೊಸರು ಬೇಕೇನೆಂದು ಕೇಳಿದಳು, ಕೆನೆ ಮೊಸರು ನೋಡಲು ಹೋದಾಗ ಹಸಿರು ಹಾವು ಬಂದು ಉಸಿರುಹಿಡಿದು ಈ ಅಟ್ಟಕ್ಕೆ ಬಂದ ಅಂಜುಬುರುಕ ಸಾರಥಿ ಎನ್ನುತ್ತಾರೆ ದೇವಾ ತಮ್ಮ ನಾಮಾಂಕಿತ ವೇನು?

(ಭೋಜಾನಾಗಭೂಷಣಪ್ಪ. ಸಂಡೂರು)

ಅಣುಕು ಪದ

ಕೇಳಿರಿ ಜನರೆ ನಿನ್ನೆರಾತ್ರಿ ನನಗೊಂದು ಕನಸು ಬಿದ್ದಿತ್ತು
ಮಸಾಲೆ ದೋಸೆ ಬಂದು ತಲೆದಿಂಬಿಗೆ ಕುಳಿತುಕೊಂಡು
ತಿನ್ನು ತಿನ್ನು ಎಂದು ಸನ್ನೆ ಮಾಡುತಿತ್ತು.
ಅವರೆಕಾಳು ಉಪ್ಪಿಟ್ಟು ಬಂದು ತುಪ್ಪ ಹಾಕಿ ಕೊಂಡು ತಿನ್ನು ತಿನ್ನು
ಅಂತ ಸನ್ನೆ ಮಾಡುತಿತ್ತು.

ಚಾ ಕಿಟ್ಲಿ ಬಂದು ಬಿಸಿ ಬಿಸಿ ಚಾ ಕುಡಿ ಎಂದು ಕರೆತಿತ್ತು.
ಟೋಪಿ ಸಿಗರೇಟ ಬಂದು ನನ್ನ ಸೇದು ಬಾ ಅಂತ ಕರಿತಿತ್ತು.
ಬಣ್ಣದ ಸುಣ್ಣ ಎಲೆ ಅಡಿಕೆ ಕಾಚು ಯಾಲಕ್ಕಿ ಲವಂಗ
ಹಾಕಿದ ಪಾನ್ ಬೀಡಾ ಬಂದು ತಿನ್ನು ತಿನ್ನು ಅಂತ ಕರಿತಿತ್ತು.

(ಭೋಜಾನಾಗಭೂಷಣಪ್ಪ. ಸಂಡೂರು)

ಗಣೇಶ ಸ್ತುತಿ

ಶ್ರೀ ವಿಘ್ನರಾಜಾ ಪಾಹಿಮಾಂ ಗಿರಿಜಾತೆ ನಂದನಾ।
ಮಾಡುವೆನು ವಂದನಾ ॥ಪಲ್ಲವಿ॥
ನಿಮ್ಮ ಪಾದ ಸ್ಮರಣೆ ಮಾಳ್ಪರು ಧನ್ಯಚರಿತರಾ
ಸದಯಾರ್ಣವ ಸುಖ ಪದವಿ ನೀವುದಿನ್ನು ಘನತರಾ
ಪೊರೆ ಎನ್ನ ಗಣವರಾ ॥೧॥

ದ್ರೌಪದಿ ವಸ್ತ್ರಾಪಹರಣ ದಲ್ಲಿ ದ್ರೌಪದಿಯನ್ನು ಸಭೆಗೆ ಎಳೆದೊಯ್ಯಲು ಬಂದ

ದುಶ್ಯಾಸನನಿಗೆ ದ್ರೌಪತಿ ಹೇಳುವ ಮಾತು

ಮುಟ್ಟದಿರೆಲೋ ಭಂಡಾ ಮುಟ್ಟದಿರೆಲೋ
ಮುಟ್ಟಿದರೆನ್ನುಸುರು ಥಟ್ಟದೆನಲೋ ಭಂಡ ॥೩॥

ದುಶ್ಯಾಸನನ ಮಾತು

ನಡಿ ನಡಿ ಹೆಣ್ಣೆ ತಡವ್ಯಾಕೆ ಸುಮ್ಮನೆ
ಕೇಡ ನುಡಿದರೆ ಮುಡಿ ಹಿಡಿದೆಳೆಯುವೆ॥
ವಾಸುವಿನುತ ಶ್ರೀ ಭೀಮೇಶನು ಕಾಯ್ದರೇನು
ಈಗ ಕರೆದೊಯ್ಯದೆ ಬಿಡೆನು ॥೪॥

ಭೀಮನ ಶಪಥ

ಖಳ ದುಶ್ಯಾಸನನ ಜಠರವ ಸೀಳಿರುಕುತವ ಹೀರಿ ಕರುಳಿನ।
ಮಾಲೆಯ ಮುಡಿಸುವೆ ದ್ರೌಪದಿಯ ಸಿರಿಮುಡಿಗೆ ॥೧॥
ಮಡದಿ ಮುಡಿಪಿಡಿದೆಳೆಸಿ ಕ್ರೋಧದಿ ವ್ಯಥೆಯ ಪಡಿಸಿದ
ಕಡುದುರಾತ್ಮನ ರಣದಲ್ಲಿ ಗದೆಯಿಂದ ॥೨॥

ತೊಡೆಗಳೆರಡನ್ನು ಕಡಿದು ಯಮಪುರಿಗೆ ಕಳುಹಿಸಿ
ರಕುತ ಮಾಂಸ ವಧೆಯ ಮಾಡುವೆ ಭೂತ ಪಂಕ್ತಿಗೆ
ಇಂದುವರ ಬಲಿಯಾ ॥೩॥

ಪಾತ್ರಗಳನ್ನು ಕುಣಿಸುವ ರಡು ಹೆಜ್ಜೆ ತಾಳ

ಧಿತ್ತ ತದಿಣ
ಝಂತ ತದಿಣ
ತೊಂತ ತದಿಣ–ತೈತತದಿಣ
ಧೀತ್ತೋಂಗಣ, ಝಂಣತೋಂಗಣ
ಧಿತ್ತಯ್ಯಾ, ಝಣತಯ್ಯಾ
ಧಿತ್ತೊಂಗಣ, ಝಣತೊಂಝಣತೋ
ತೈತ ಝಣಹೆ ತೊಂತಝಣಾ
ತೈತ ಝಣ.... ತೋಂತ ಝಣಾ.
ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ

ಡಾ॥ ಬಿ.ಕೆ. ರಾಜೇಂದ್ರ

ಗ್ರಂಥಋಣ

೧. ಬಯಲಾಟಗಳು, ಡಾ.ಚಂದ್ರಶೇಖರ ಕಂಬಾರ

೨. ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, ಡಾ.ಚಂದ್ರಶೇಖರ ಕಂಬಾರ

೩. ಬಯಲಾಟದ ಸಾರಥಿ ಎಂ.ಎಸ್.ಲಠ್ಠೆ

೪. ಯಕ್ಷಗಾನ, ಬಯಲಾಟ, ಶಿವರಾಮ ಕಾರಂತ

೫. ಕರ್ನಾಟಕದ ಜಾನಪದ ರಂಗಭೂಮಿ, ಎಂ.ಟಿ.ಧೂಪದ, ಬೆಂಗಳೂರು

೬. ಕರ್ನಾಟಕ ರಂಗಭೂಮಿ, ಕೆ.ವಿ.ಆಚಾರ್, ಬೆಂಗಳೂರು

೭. ಸಂಗ್ಯಾಬಾಳ್ಯ, ಡಾ.ಎನ್.ಆರ್.ನಾಯಕ

೮. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಡಾ.ಡಿ.ಕೆ.ರಾಜೇಂದ್ರ

೯. ಕನ್ನಡ ಬಯಲಾಟ ಪರಂಪರೆ, ಡಾ.ಎನ್.ಆರ್.ನಾಯಕ

೧೦. ಬಯಲಾಟ ಕಥೆಗಳು ಸಾಂಸ್ಕೃತಿಕ ಅಧ್ಯಯನ, ಡಾ.ಹೆಚ್.ಐ.ತಿಮ್ಮಾಪುರ

೧೧. ಉತ್ತರ ಕರ್ನಾಟಕದ ಬಯಲಾಟಗಳು, ಡಾ.ಬಸವರಾಜ ಮಲಶೆಟ್ಟಿ

೧೨. ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಡಾ.ಕೆ.ಆರ್. ದುರ್ಗಾದಾಸ್

೧೩. ಅಲ್ಲಮ ಪ್ರಭು, ಎಸ್.ಎಂ.ಸುಂಕಾಪುರ

೧೪. ಜಾನಪದ ಸಾಹಿತ್ಯ ದರ್ಶನ, ಡಾ.ಎಂ.ಬಿ.ಕೊಟ್ರಶೆಟ್ಟಿ

೧೫. ಸಂಡೂರು ಭೂಹೋರಾಟ, ಅರುಣ ಜೋಳದ ಕೂಡ್ಲಿಗಿ

೧೬. ಸಂಡೂರಿನ ವೀರ ಶೈವ ಸಮುದಾಯದ ಆಚರಣೆಗಳು, ಜಿ.ಹೇಮಲತ ಅವರ ಎಂ.ಫಿಲ್ ಪ್ರಬಂಧ

೧೭. ಸಂಡೂರು ಪರಿಸರದ ಗ್ರಾಮ ದೈವಗಳು, ಸವಿತಾ ಅವರ ಎಂ.ಫಿಲ್ ಪ್ರಬಂಧ

೧೮. ಕಾರ್ತಿಕಾಯಣ, ಡಾ.ವೃಷಬೇಂದ್ರಾಚಾರ್

೧೯. ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಕಿತ ದೇವಾಲಯಗಳು, ಗಿರಿಜಾ ಅವರ ಎಂ.ಫಿಲ್ ಪ್ರಬಂಧ

ವಕ್ತೃಗಳ ವಿವರ

ಹೆಸರು	ವಯಸ್ಸು	ವೃತ್ತಿ	ಊರು
೦೧. ಶ್ರೀಮತಿ ಶ್ರೀ ಭೋಜಾಗಿರಿಜಮ್ಮ			ಮದ್ದಾನಪ್ಪ
೦೨. ಭೋಜಾ ನಾಗಭೂಷಣಪ್ಪ,			ಸಂಡೂರು
೦೩. ಶ್ರೀಮತಿ ಭೋಜಾ ಉಷಾ ಶಿವಕುಮಾರ್,			ದೋಣಿಮಲೈ
೦೪. ಮಾಳ್ಗಿ ರಾಮಪ್ಪ,			ಸಂಡೂರು
೦೫. ಪಿಂಜಾರ್ ಸುಲ್ತಾನ್ ಸಾಬ್, ಪಿಂಜಾರ್ ಓಣಿ,			ಸಂಡೂರು
೦೬. ಇಮಾಮ್ ಸಾಬ್,			ಸಂಡೂರು
೦೭. ಕೆ. ಮೌನಾಚಾರ್, ಲಕ್ಷ್ಮೀಪುರ,			ಸಂಡೂರು
೦೮. ಮಾಳ್ಗಿ ಅಮರಪ್ಪ, ಹೊಸಬಾವಿ ಓಣಿ,			ಸಂಡೂರು
೦೯. ಸರಾಯದ ತಿಪ್ಪೇಸ್ವಾಮಿ,			ಸಂಡೂರು
೧೦. ಯಮುನಾಸಾಬ್,			ಸಂಡೂರು
೧೧. ಮೌಲಾ ಸಾಬ್,			ಸಂಡೂರು
೧೨. ವಿ.ಟಿ. ಕಾಳೆ, ಕಲಾವಿದರು,			ಸಂಡೂರು
೧೩. ಎಸ್.ಹೆಚ್. ಕುಲಕರ್ಣಿ, ಅಧ್ಯಾಪಕರು.			ಸಂಡೂರು
೧೪. ಕುಮಾರಸ್ವಾಮಿ,			ಸಂಡೂರು.
೧೫. ಕುಮಾರಪ್ಪ, ನಿಂಬಾಳ್ಕರ,			ಸಂಡೂರು
೧೬. ಶ್ರೀನಾಗಪ್ಪ, ಶಿಕ್ಷಕರು, ಲಕ್ಷ್ಮೀಪುರ,			ಸಂಡೂರು
೧೭. ಕೆ. ರಘುನಾಥರಾವ್ ಕಾರ್ಯದರ್ಶಿಗಳು ಸಾಯಿಬಾಬಾ ಪಿ.ಯು. ಕಾಲೇಜ್,			ತಾರಾನಗರ
೧೮. ಶ್ರೀ. ಸುಣ್ಣಗಾರ ನಾರಾಯಣಪ್ಪ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು.			
೧೯. ಬಿ.ಎಸ್. ನಾಗರಾಜ ಶಿಕ್ಷಕರು. ಕುಮಾರಸ್ವಾಮಿ ಶಾಲೆ,			ಸಂಡೂರು

೨೦. ಹೆಚ್. ಸತ್ಯಮೂರ್ತಿ,	ಸಂಡೂರು
೨೧. ಎಸ್. ಕೊಟ್ರೇಶ್,	ಬಂಡ್ರಿ.
೨೨. ಹೆಚ್. ಯೋಗೇಶ್, ಪೋಲೀಸ್,	ಸಂಡೂರು
೨೩. ಅಂಕಮನಾಳ್ ಶಿವಪ್ರಸಾದ್,	ಸಂಡೂರು
೨೪. ಬಳ್ಳಿಕಟ್ಟಿ ಶಿವಶಂಕರಪ್ಪ, ಹೊಸಬಾವಿ ಓಣಿ,	ಸಂಡೂರು.
೨೫. ಬಳ್ಳಿಕಟ್ಟಿ ಮೂರ್ತ್ಯಪ್ಪ, ಹೊಸಬಾವಿ ಓಣಿ,	ಸಂಡೂರು
೨೬. ಬಳ್ಳಿಕಟ್ಟಿ ಮಲ್ಲಪ್ಪ, ಹೊಸಬಾವಿ ಓಣಿ,	ಸಂಡೂರು
೨೭. ಸುಬಾನ್ ಸಾಬ್,	ಸಂಡೂರು
೨೮. ರಾಜಾಸಾಬ್,	ಸಂಡೂರು
೨೯. ಕಾಸಿಂ ಸಾಬ್,	ಸಂಡೂರು
೩೦. ಎಂ. ಪ್ರಕಾಶ,	ಲಕ್ಷ್ಮೀಪುರ
೩೧. ಈರಮ್ಮ ಮಾಳ್ಗಿ,	ಸಂಡೂರು
೩೨. ಶ್ರೀಮತಿ ಭೋಜಾ ಸುಮತಿ ಜಯದೇವ,	ಹೊಸಪೇಟೆ
೩೩. ಶ್ರೀಮತಿ ಭೋಜಾ ರಾಜೇಶ್ವರಿ ನೀಲಕಂಠಪ್ಪ,	ಸಂಡೂರು
೩೪. ಗಡಂಬ್ಲಿ ಗಿರಿಜಮ್ಮ	ಕೇದರ್‌ನಾಥ
೩೫. ಶ್ರೀಮತಿ ಸುಧಾಬಾಯಿ ಗಿರಿದರ್	ಸಂಡೂರು.

ಛಾಯಚಿತ್ರಗಳು



ಬಣ್ಣದ ಚೌಕಿ



ಬಣ್ಣದ ಚೌಕಿ



ಗಣಪತಿಯ ಪೂಜೆ



ಸೀತೆ, ರಾಮ ಮತ್ತು ಮಾಯಾ ಶೂರ್ಪನಖೀ



ಬಯಲಾಟದ ಹಿಮ್ಮೇಳ



ರತಿ, ಮನ್ಮಥ

ರಾಕ್ಷಸರ ಪಾತ್ರಗಳು



ಖರಾಸುರ



ಶೂರ್ಪನಖಿ



ರಾವಣ

ಬಯಲಾಟದ ಸ್ತ್ರೀ ಹಾಗೂ ಪುರುಷ ಪಾತ್ರಗಳು



ರಾಮ, ಲಕ್ಷ್ಮಣ ಮತ್ತು ಹನುಮಂತ




ಮಾಯಾ ಶೂರ್ಪನಖಿ



ಭೀಮ



ರಾಕ್ಷಸ ಪಾತ್ರಕ್ಕೆ ಅಲಂಕಾರ ಮಾಡುತ್ತಿರುವುದು



ಬಯಲಾಟದ ಸಾರಥಿ



ಮನ್ಮಥ

ದುರ್ಯೋಧನ



ದ್ರೌಪತಿ ಹಾಗೂ ದುಶ್ಯಾಸನ



ಭಾನುಮತಿ ಹಾಗೂ ದುರ್ಯೋಧನ



ದುಶ್ಯಾಸನ





ಟಿ. ಸತ್ಯಪ್ಪ



ಕಮ್ಮಾರ ನಾಗರಾಜ



ಸರಾಯದ ತಿಪ್ಪೇಸ್ವಾಮಿ



ಹೆಚ್. ಸಣ್ಣ ಸುಭಾನಿ



ನಾಯ್ಕರ ಕೆ.ಮಾರಪ್ಪ



ಕಮ್ಮಾರ ಕುಮಾರಸ್ವಾಮಿ



ಪಿ. ಸುಲ್ತಾನ್ ಸಾಬ್



ಪಿ. ಗೊಫುರ್ ಸಾಬ್



ಎನ್. ನರಸಿಂಹಪ್ಪ



ಬಳ್ಳಿಕಟ್ಟೆ ಮೂರ್ತೆಪ್ಪ



ಬಳ್ಳಿಕಟ್ಟೆ ಮಲ್ಲಪ್ಪ



ಪಿಂಜಾರ್ ಇಮಾಮ್ ಸಾಬ್



ಪಿಂಜಾರ್ ಯಮುನಪ್ಪ



ಬಿ. ಎಸ್. ನಾಗಪ್ಪ



ಮಾಳ್ಗಿ ಆಮರಪ್ಪ



ಹಂಚಿನ ಮನೆ ದೊಡ್ಡ ಸುಬಾನಿ



ಬಿ.ಎನ್. ಸಿದ್ದಲಿಂಗೇಶ್